# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೨೦ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೯ ಸಂಚಿಕೆ: ೪

ಚಂದಾ ರೂ. ೧೫೦/- (೨೦೨೦ರ ಜನವರಿಯಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ ರೂ. ೨೫೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರಮಟ್ಟದ ಲಾಕ್‌ಡೌನ್ ನಿಧಾನವಾಗಿ ಸಡಿಲಗೊಳ್ಳುವ ಅನಿವಾರ್ಯತೆ ಸಮೀಪಿಸುತ್ತಿದ್ದಂತೆ ಮುಂದೇನು? ಎಂಬ ಪ್ರಶ್ನೆ ಸರ್ಕಾರವನ್ನೂ, ಜನರನ್ನೂ ಕಾಡತೊಡಗಲಿದೆ. ಕೋವಿಡ್-೧೯ ಎಂಬ ಮಹಾಮಾರಿ ಜಗತ್ತಿನ ಮೇಲೆ ಮುಗಿಬಿದ್ದಾಗಲೇ, ಅದರ ಪರಿಣಾಮಗಳ ಬಗ್ಗೆ ಚಿಂತಿಸಿದ ಜಗತ್ತಿನ ಹಲವು ಮುತ್ಸದ್ದಿಗಳು ಕರೋನಾ ನಂತರದ ಜಗತ್ತು ಕರೋನಾ ಮುಂಚಿನ ಜಗತ್ತಿನಂತಿರಲು ಸಾಧ್ಯವಿಲ್ಲ ಎಂದು 'ಭವಿಷ್ಯ' ನುಡಿದಿದ್ದಾರೆ. ಆ ಭವಿಷ್ಯವಾಣಿಯನ್ನು ನಾವು ಏನೆಂದು ಅರ್ಥ ಮಾಡಿಕೊಳ್ಳಬೇಕು ಎಂಬುದು ಇಂದಿನ ಬಹುಮುಖ್ಯ ಜಿಜ್ಞಾಸೆಯ ವಸ್ತು. ಕೋವಿಡ್-೧೯ರ ಹಾವಳಿಯ ಪರಿಣಾಮಗಳಿಂದ ಇನ್ನೂ ಸುಧಾರಿಸಿಕೊಳ್ಳುತ್ತಿರುವ ಜಗತ್ತಿನ ವಿವಿಧ ದೇಶಗಳ ನಾಯಕರು ಈ ಜಿಜ್ಞಾಸೆಗೆ ಇನ್ನೂ ತೊಡಗಲಾಗಿಲ್ಲ ಎಂದು ಸದ್ಯಕ್ಕೆ ಭಾವಿಸಬಹುದಾದರೂ, ಈ ಜಿಜ್ಞಾಸೆ ಆದಷ್ಟು ಬೇಗ ಆರಂಭವಾದರೆ ಒಳಿತೆಂದು ಖಚಿತವಾಗಿ ಹೇಳಬೇಕಾಗಿದೆ. ಏಕೆಂದರೆ ಈ ಭವಿಷ್ಯವಾಣಿಯನ್ನು ನುಡಿದವರ ಹಿಂದೆ ಜಗತ್ತು ಈವರೆಗೆ ನಡೆದು ಬಂದ ದಾರಿ ಮತ್ತು ಆ ದಾರಿ ಈ ಕರೋನಾ ಎಂಬ ವೈರಾಣುವಿನ ಆಟಾಟೋಪಕ್ಕೆ ಕಾರಣವಾದ ರೀತಿ ನೀತಿಗಳ ಬಗ್ಗೆ ಅವರೆಲ್ಲ ವಿವಿಧ ಕೋನಗಳಿಂದ ಮಾಹಿತಿ ಸಂಗ್ರಹಿಸಿ ಅಧ್ಯಯನ ಮತ್ತು ಸಂಶೋಧನೆಗಳನ್ನು ನಡೆಸಿದ್ದರ ಅನುಭವವಿತ್ತು, ಇವರಲ್ಲಿ ಪರಿಸರ ವಿಜ್ಞಾನಿಗಳು, ಮಾನವ ಶಾಸ್ತ್ರಜ್ಞರು, ಭೂಗೋಳ ಮತ್ತು ಭೂ ವಿಜ್ಞಾನ ಪರಿಣತರಲ್ಲದೆ ಚರಿತ್ರಕಾರರು, ಸಮಾಜವಿಜ್ಞಾನಿಗಳು ಮತ್ತು ರಾಜಕೀಯ ಚಿಂತಕರೂ ಸೇರಿದ್ದಾರೆ. ಇವರೆಲ್ಲ ಒಟ್ಟಿಗೆ ಸೇರಿ ಈ ಆಧ್ಯಯನ ನಡೆಸಿದರೆಂದಲ್ಲ. ಭೂಮಿ ಎಂಬ ವಿದ್ಯಮಾನ ಇತ್ತೀಚಿನ ವರ್ಷಗಳಲ್ಲಿ ಹಲವು ಬದಲಾವಣೆಗಳಿಗೆ ಒಳಪಡುತ್ತಿದ್ದು, ಅದರ ದುಷ್ಪರಿಣಮಗಳು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇವರ ಆಸಕ್ತಿಯ ಕ್ಷೇತ್ರಗಳ ನೆಲೆಗಳಲ್ಲಿ ಕುತೂಹಲ ಹುಟ್ಟಿಸತೊಡಗಿದಾಗ ಅವೆರಲ್ಲ ತಂತಮ್ಮ ಕ್ಷೇತ್ರಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ಅಧ್ಯಯನಗಳನ್ನು ಆರಂಭಿಸಿದ್ದರು. ಮುಖ್ಯವಾಗಿ ಹವಾಮಾನ ಬದಲಾವಣೆಯ ಲಕ್ಷಣಗಳು ಮತ್ತು ಪರಿಣಾಮಗಳ ಅಧ್ಯಯನ ಆರಂಭವಾಗುತ್ತಿದ್ದಂತೆ ಈ ಎಲ್ಲ ಕ್ಷೇತ್ರಗಳ ಪರಿಣತರ ಅಧ್ಯಯನ ಪರಸ್ಪರ ಪೂರಕವಾಗಿರುವ ಸಾಕ್ಷ್ಯಗಳು ದೊರಕತೊಡಗಿ, ಇತ್ತೀಚಿನ ವರ್ಷಗಳಲ್ಲಿ ದಾಳಿ ಮಾಡುತ್ತಿರುವ ಹೊಸ ಸಾಂಕ್ರಾಮಿಕ ರೋಗಗಳ ಮೂಲ ಹುಡುಕುವ ಬಹುಶಿಸ್ತೀಯ ಅಧ್ಯಯನ ಪ್ರವೃತ್ತಿಯೊಂದು ಆರಂಭವಾಯಿತೆನ್ನಬಹುದು.

ಸದ್ಯದ ಮಂಡನೆಯ ಕೊನೆಯ ಮಾತನ್ನು ಮೊದಲೇ ಹೇಳುವುದಾದರೆ, ಕರೋನಾ ಮಾನವ ತಾನು ವಾಸಿಸುವ ಜಗತ್ತನ್ನು ತನಗಾಗಿ ಹೆಚ್ಚು 'ವಾಸಯೋಗ್ಯ'ವನ್ನಾಗಿಸಲು ಹೊರಟ ಸಾಹಸದಲ್ಲಿ ಅದನ್ನು ವಾಸಕ್ಕೆ ಸಂಪೂರ್ಣ ಅಯೋಗ್ಯವಾಗಿಸುವ ದುರದೃಷ್ಟಕರ ಹಂತಕ್ಕೆ ತಂದಿರುವುದರ ಪ್ರತೀಕವಾಗಿದೆ. ಮಾನವ ಕಲ್ಯಾಣದ ಹೆಸರಿನಲ್ಲಿ, ಪ್ರಗತಿಯ ಹೆಸರಿನಲ್ಲಿ ನಡೆದ ಮನುಷ್ಯನ ಈ ಸಾಹಸ ವಿ'ಜ್ಞಾನ'-ತಂತ್ರ'ಜ್ಞಾನ' ಎಂಬ ಹಣೆಪಟ್ಟಿಗಳೊಡನೆ ಆರಂಭವಾದರೂ ಅದರ ಮೂಲದಲ್ಲೇ ಒಂದು ಅಜ್ಞಾನ ಸೇರಿಕೊಂಡಿತ್ತು. ಅದೆಂದರೆ, ಅವನು ತಾನು ಈ ಸಾಹಸದಲ್ಲಿ ವಿಜ್ಞಾನವೆಂಬ ಹೊಸ ಜ್ಞಾನದೊಂದಿಗೆ ಸೃಷ್ಟಿಯನ್ನು ಆ ಹೊಸ ಜ್ಞಾನದ ತರ್ಕದೊಂದಿಗೆ ಅರಿಯಲು, ನಿರ್ವಹಿಸಲು ತೊಡಗಿದ್ದು ತಾನೂ ಇದೇ ಸೃಷ್ಟಿಯ ಉತ್ಪನ್ನ ಮತ್ತು ಆ ಉತ್ಪನ ಆದದ್ದು ಅದರ ಮುಂಚಿನ ಜಗತ್ತಿನಿಂದ ಎಂಬುದನ್ನು ಮರೆತಿದ್ದ. ಜೊತೆಗೆ ಈ ಸೃಷ್ಟಿಯನ್ನು ಜಡ ಮತ್ತು ಜೀವ ಎಂದು ಪ್ರತ್ಯೇಕಿಸಿ ಜೀವಕ್ಕೆ ಆಸರೆಕೊಟ್ಟ ಭೂಮಿಯನ್ನು ಜಡವೆಂದೇ ಭಾವಿಸಿ ಅದರ ಸೂರೆ ಮಾಡತೊಡಗಿದ.

ಆದರೆ ಈ ಜಡ-ಜೀವ ಎಂಬ ಪ್ರತ್ಯೇಕೀಕರಣವೂ ಮೇಲೆ ತಿಳಿಸಿದ ಅಜ್ಞಾನದ ಮತ್ತು ಅದರಿಂದ ಹುಟ್ಟಿದ ವಿಜ್ಞಾನದ ಪರಿಣಾಮವೇ ಆಗಿತ್ತು. ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ ಅವನ ಸಾಹಸ ಮತ್ತು ಅದರ ಹಿಂದಿದ್ದ ವಿಜ್ಞಾನವು ಮಾನವ ಕೇಂದ್ರಿತ ಜ್ಞಾನವಾಗಿತ್ತು,. ಅದು ಈ ಸೃಷ್ಟಿಯ ಮಾನವೇತರ ಸತ್ವವೆಲ್ಲವನ್ನೂ 'ಇತರೆ' ಎಂದು ವರ್ಗೀಕರಿಸಿ ತನ್ನ ವಿಜ್ಞಾನದ ಬೆಳವಣಿಗೆಗೆ ಮತ್ತು ತನ್ನ ಕಲ್ಯಾಣಕ್ಕಾಗಿ ಬಳಸಿಕೊಳ್ಳತೊಡಗಿತು. ಇದರ ಮೂಲ ಮನುಷ್ಯ ತನ್ನ ಕಲ್ಯಾಣಕ್ಕಾಗಿ ನಡೆಸಲಾರಂಭಿಸಿದ ಸಾಹಸಗಳು ಅವನ್ನು ಸೃಷ್ಟಿಯ ಅಖಂಡತೆಯಿಂದ ಬಿಡಿಸಿಕೊಳ್ಳುವ ನಡೆಯಲ್ಲಿ ಕಳೆದುಕೊಂಡ ಅದರ ಮೂಲಗುಣವಾದ ತಾಯ್ತನವನ್ನು ಕಳೆದುಕೊಂಡಿದ್ದರಲ್ಲಿ ಇತ್ತು. ಹಾಗಾಗಿ ಅವನು ನಿರ್ಯೋಚನೆಯಿಂದ ಆ ಇತರೆಯ ಬದುಕುವ ಹಕ್ಕನ್ನೇ ನಿರ್ಲಕ್ಷಿಸಿದ. ಆದರೆ ಸೃಷ್ಟಿಯಲ್ಲಿ ಪ್ರತಿಯೊಂದೂ-ಜಡವೇ ಆಗಲಿ, ಜೀವವೇ ಆಗಲಿ ಸೃಷ್ಟಿಯಾಗಿರುವುದು ಬದುಕುವ ಆಸೆಯಿಂದಲೇ;ಹಕ್ಕಿನಿಂದಲೇ. ಆದುದರಿಂದ ಅದು ಸಾಯಬಹುದೇ ಹೊರತು ನಾಶವಾಗಲಾರದು. ಅದು ಬದುಕಲು ಮರುಹುಟ್ಟು ಪಡೆಯುತ್ತದೆ, ರೂಪಾಂತರವಾಗಿ; ತನ್ನನ್ನು ನಾಶಪಡಿಸಲು ಯತ್ನಿಸುತ್ತಿರುವ ಮನುಷ್ಯನ ಪ್ರವೃತ್ತಿಗೆ ಪ್ರತಿಕ್ರಿಯೆಯಾಗಿ.

ಹಾಗಾಗಿಯೇ ಮನುಷ್ಯ ತನ್ನ ಕಾಯಿಲೆಗಳನ್ನು ದೈಹಿಕವಾದದ್ದೆಂದು ಪರಿಗಣಿಸಿ ಅವುಗಳಿಗೆ ಚಿಕಿತ್ಸೆಗಳನ್ನು ಕಂಡುಹಿಡಿದುಕೊಂಡು ಬೀಗಿದನಾದರೂ, ಅವನ್ನು ನಿರ್ನಾಮ ಮಾಡಲು ಸಾಧ್ಯವಾಗಿಲ್ಲ. ತಾನು ಈ ಹಿಂದೆ ನಿರ್ನಾಮ ಮಾಡಿದೆನೆಂದು ತಿಳಿದಿದ್ದ ಕಾಯಿಲೆಗಳು-ವಿಶೇಷವಾಗಿ ಸಾಂಕ್ರಾಮಿಕಗಳು-ಮರುಕಳಿಸುತ್ತಿರುವುದು ಅಥವಾ ರೂಪಾಂತರ ಹೊಂದಿ ಪ್ರತ್ಯಕ್ಷವಾಗುತ್ತಿರುವುದು. ಉದಾ: ಪ್ಲೇಗ್, ಕಾಲರಾ,. ಮಲೇರಿಯಾ, ಪೋಲಿಯೋ, ಕ್ಷಯ ಮುಂತಾದವು. ಇದಕ್ಕೆ ಕಾರಣ ಮನುಷ್ಯ ತನ್ನ ದೇಹವನ್ನು ಕೇವಲ ರಕ್ತ-ಮಾಂಸ-ಮೂಳೆಗಳಿಂದ ಆದ ಭೌತ ರಚನೆ ಎಂದು ತಿಳಿದು ಅದಕ್ಕೆ ಚಿಕಿತ್ಸೆ ರೂಪಿಸಿದ್ದು. ಆದರೆ ದೇಹ ತನಗೆ ಜನ್ಮ ನೀಡಿದ ಸೃಷ್ಟಿಯ ಎಲ್ಲ ಶಕ್ತಿಗಳನ್ನೂ ಒಳಗೊಂಡ ಒಂದು ಪ್ರನಾಳವೇ ಆಗಿರುತ್ತದೆ. ಈ ಆರ್ಥದಲ್ಲಿ ಅದು ದೇಹಮಾತ್ರವಲ್ಲ; ದೇಹಾತ್ಮ. ಇದು ವಿಜ್ಞಾನದ, ನಿರ್ದಿಷ್ಟವಾಗಿ ವೈದ್ಯ ವಿಜ್ಞಾದ ಅರಿವಿಗೆ ಬರದಿರಲು ಕಾರಣವೆಂದರೆ ಅದು ಕಾಯಿಲೆ ಇರುವುದು ಸಂಪೂರ್ಣ ದೇಹದೊಳಗೇ ಎಂದು ನಂಬಿ ಅದಕ್ಕೆ ಮದ್ದು ನೀಡುವುದು, ಏಕೆಂದರೆ ಅವನು ಮೂಲತಃ ಪ್ರತ್ಯೇಕಿಕರಣದ ಉತ್ಪನ್ನ. ಹಾಗಾಗಿ ಅವನು ಕಾಯಿಲೆಗಳು ಸೃಷ್ಟಿಯಾಗುವುದು ಸೃಷ್ಟಿಯ ರಚನೆಯಲ್ಲಿ ತಾನು ಮಾಡುತ್ತಿರುವ ನಿರ್ಣಾಯಕ ಬದಲಾವಣೆಗಳಿಂದ ಮತ್ತು ಅದು ಉಂಟು ಮಾಡುತ್ತಿರುವ ಅದರ ಅಸಮತೋಲನದಿಂದ ಎಂಬ ಅರಿವಿಗೇ ಎರವಾಗಿದ್ದಾನೆ. ಹೆಚ್ಚೂ ಕಡಿಮೆ ಎಲ್ಲ-ಕೋವಿಡ್-೧೯ ಸೇರಿದಂತೆ-ಹಳೆಯ ಮತ್ತು ಹೊಸ ಸಾಂಕ್ರಾಮಿಕ ರೋಗಳ ಮೂಲವನ್ನು ಈ ನೆಲೆಗಳಲ್ಲಿ-ಹೆಚ್ಚೆಚ್ಚು ಗ್ರಾಹಕ ವಸ್ತುಗಳ ಉತ್ಪಾದನೆಗಾಗಿ ಕಾಡು, ಅಂದರೆ ಅದರ ಸಸ್ಯ ಮತ್ತು ಪ್ರಾಣಿ ಸಂಪತ್ತಿನ ನಾಶ, ಅದರ ಪರಿಣಾಮವಾದ ಜಲಮೂಲಗಳ ಮಾಲಿನ್ಯ ಮತ್ತು ಬತ್ತುವಿಕೆ, ಗಣಿಗಾರಿಕೆಗಳಿಂದ ಭೂ ರಚನೆಯ ವಿನ್ಯಾಸಗಳಲ್ಲಿ ಆಗುವ ವ್ಯತ್ಯಾಸಗಳಳು, ಇತ್ಯಾದಿಗಳಲ್ಲಿ ಗುರುತಿಸಬಹುದು. ಇವಕ್ಕೆ ಪೂರಕವಾಗಿ ಮತ್ತು ಇವುಗಳ ಪರಿಣಾಮವಾಗಿ ನಡೆದಿರುವ ಇನ್ನೊಂದು ವಿದ್ಯಮಾನವೆಂದರೆ ಮಾನವ ವಸತಿ ವಿನ್ಯಾಸಗಳಲ್ಲಿ ಆಗುತ್ತಿರುವ ಬದಲಾವಣೆಗಳು. ಉದಾ: ನಗರೀಕರಣ ಮತ್ತು ದಟ್ಟ ಜನಸಾಂದ್ರತೆಯ ಮತ್ತು ಕನಿಷ್ಟ ಮಟ್ಟದ ಜೀವಾಧಾರಗಳೂ ಇಲ್ಲದ ಕೊಳಚೆ ಪ್ರದೇಶಗಳು. , ಅದರ ಒತ್ತಡಗಳು. ಈ ಬೆಳವಣಿಗೆಗಳನ್ನು ಮಾನವ ಇತಿಹಾಸದ ವಿವರಗಳಿಲ್ಲದೆ, ಸಮಾಜ ವಿಜ್ಞಾನದ ಕಣ್ಣಿಲ್ಲದೆ, ಮಾನವ ಶಾಸ್ತ್ರದ ವ್ಯಾಖ್ಯಾನಗಳಿಲ್ಲದೆ, ಮನಃಶಾಸ್ತ್ರಜ್ಞರ ಸಲಹೆಗಳಿಲ್ಲದೆ ಇಂದು ನಿಜವಾದ ರೋಗ ನಿದಾನಶಾಸ್ತ್ರ ಪೂರ್ಣವಾಗುವುದಿಲ್ಲ.

ಇದು ಕೋವಿಡ್-೧೯ ಸೇರಿದಂತೆ ಇತ್ತೀಚಿನ ಸಾಂಕ್ರಾಮಿಕಗಳ ಮರುಆಗಮಟಿ

(೯ನೇ ಪುಟಕ್ಕೆ

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ದೇಶದ ಪ್ರಧಾನಮಂತ್ರಿಯವರ ಆದೇಶಕ್ಕೆ ಅನುಗುಣವಾಗಿ ದೇಶಾದ್ಯಂತ ಲಾಕ್‌ಡೌನ್ ಜಾರಿಗೆ ಬಂದ ಮೇಲೂ ರಾಜ್ಯದ ಹಾಲಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ದೇಶದ ಮಾಜಿ ಪ್ರಧಾನ ಮಂತ್ರಿ ದೇವೇಗೌಡ ಲಾಕ್‌ಡೌನ್ ಅನ್ನು ಉಲ್ಲಂಘಿಸಿರುವುದನ್ನು ನೀವು ಟೀಕಿಸಿರುವುದು ನ್ಯಾಯಸಮ್ಮತವಾಗಿದೆ.

ಹಾಗೆಯೇ ವೈರಸ್‌ಗೂ ಚೀನಾದ ಅಭಿವೃದ್ಧಿಯ ಮಾದರಿಗೂ ಏನಾದರೂ ಸಂಬಂಧವಿದೆಯೇ? ಈ ಅಭಿವೃದ್ಧಿ ಮಾದರಿಯ ಅನಿವಾರ್ಯ ಫಲಶ್ರುತಿ ಆದ ಪರಿಸರ ನಾಶಕ್ಕೂ ಈ ವೈರಸ್ ಹಾವಳಿಗೂ ಸಂಬಂಧವಿದೆಯೇ ಎಂಬ ನಿಮ್ಮ ಸವಾಲು ಕೂಡ ಸರಿಯಾಗಿದೆ. ಬಂಡವಾಳಶಾಹಿ ಬಲಿಷ್ಠ ರಾಷ್ಟ್ರದ ಕನಸು ಹಾಗೂ ಸಾಮ್ರಾಜ್ಯಶಾಹಿ ಇವುಗಳ ನಡುವೆ ಕಾರ್ಯಕಾರಣ ಸಂಬಂಧವಿರುವುದು ಎಲ್ಲರಿಗೂ ಈಗಾಗಲೇ ಗೊತ್ತಿರುವ ವಿಷಯವೇ ಆಗಿದೆ.

ಇತ್ತೀಚೆಗೆ ಗುಜರಾತ್ ರಾಜ್ಯಕ್ಕೆ ಅಮೆರಿಕದ ಅಧ್ಯಕ್ಷ ಟ್ರಂಪ್‌ನ ಭೇಟಿಗಾಗಿ ಆ ರಾಜ್ಯ ಸರಕಾರ ಮಾಡಿದ ಖರ್ಚು ಬರೋಬ್ಬರಿ ೮೫ ಕೋಟಿ ರೂ. ಅಂದರೆ ಆ ರಾಜ್ಯದ ವಾರ್ಷಿಕ ಬಜೆಟಿನ ಶೇಕಡಾ ೧.೫ ರಷ್ಟು ಇದೆ.

ಇದೇ ವೇಳೆಗೆ ಗುಜರಾತ್‌ನ ಶೇಕಡ ೪೨ರಷ್ಟು ಮಕ್ಕಳು ಕುಂಠಿತ ಬೆಳವಣಿಗೆಯಿಂದ ನರಳುತ್ತಿದ್ದಾರೆ. ಈ ವಿಷಯದಲ್ಲಿ ಭಾರತ ಜಗತ್ತಿನಲ್ಲೇ ಪ್ರಥಮ ಸ್ಥಾನದಲ್ಲಿದೆ ಎಂದು ನೀವು ಹೇಳಿರುವುದು ಸರಿಯಾಗಿದೆ.

ಸಂಚಿಕೆಯಲ್ಲಿ ಲೇಖಕ ಎಂ.ಎಸ್.ಶ್ರೀ ರಾಮ್ ಹೇಳಿದ ಬಶೀರಣ್ಣನ ವೃತ್ತಾಂತದಲ್ಲಿ ಮಾಯವಾಗಿರುವುದು ಬರೆ ಬಶೀರಣ್ಣನ ಪಂಚರ್ ಅಂಗಡಿಯಲ್ಲ ಪಂಚರ್ ಅಂಗಡಿಯಂತಹ ಹಲವು ಕಾಯಕಗಳು ಈಗ ನಮ್ಮ ಊರುಗಳಲ್ಲಿ ನಾಶವಾಗಿವೆ. ಉಡುಪಿಯಲ್ಲಿ ನನ್ನ ಅನುಭವ ಕೂಡ ಇದೇ ಆಗಿದೆ. ಹಳೆಯ ಕಟ್ಟಡ ಉರುಳಿಸಿದ ಮಾರನೆಯ ದಿನವೇ ಹಿಂದಿನ ದಿನ ಅಲ್ಲಿ ಏನಿತ್ತು ಎನ್ನುವುದು ಮರೆವೆಯಾಗುತ್ತದೆ. ನನ್ನ ಬಾಲ್ಯದಲ್ಲಿ ದಿನವೂ ನಾನು ನೋಡುತ್ತಿದ್ದ ಗ್ಯಾರೇಜ್‌ಅಲ್ಲಿ ವಾಹನಗಳ ಅಡಿಯಲ್ಲಿ ಮಲಗಿ ರಿಪೇರಿ ಕೆಲಸ ನಡೆಸುವ ಕೆಲಸಗಾರರು ಈಗ ಯಾಕೆ ಕಾಣುತ್ತಿಲ್ಲ ಎಂದು ಕಸಿವಿಸಿಯಾಗುತ್ತದೆ. ಲೇಖಕರ ಮಾತನ್ನು ಬಳಸಿಕೊಂಡು ಹೇಳುವುದಾದರೆ ಮಹಾನಗರಗಳಲ್ಲಿ ಮಾತ್ರವಲ್ಲ ಉಡುಪಿಯಂತಹ ಪಟ್ಟಣಗಳಲ್ಲೂ ಕೂಡ ಬಶೀರಣ್ಣನಂತಹವರು "ಎಲ್ಲೋ" ಕಳುವಾಗಿದ್ದಾರೆ.

**–ಜಿ. ರಾಜಶೇಖರ,** ಉಡುಪಿ

ಏಪ್ರಿಲ್ ಸಂಚಿಕೆಯಲ್ಲಿನ 'ಕರೋನಾ' ವೈರಾಣುಗಳನ್ನು ಕುರಿತ ನಿಮ್ಮ ಸಂಪಾದಕರ ಟಿಪ್ಪಣಿಗಳು ಮಾನವನ ದುರಾಶೆಗಳಿಗೆ ಕಡಿವಾಣ ಹಾಕುವ ಎಚ್ಚರಿಕೆಯ ಸಂದೇಶವನ್ನು ಸಾರುವ ಸ್ಪಷ್ಟ ಮಾತುಗಳನ್ನು ಒಳಗೊಂಡಿವೆ. ಅವು ತುಂಬಾ ಸಮಯೋಚಿತ ಮಾತುಗಳು. ಪಾಟೀಲ ಪುಟ್ಟಪ್ಪನವರ ಬಗೆಗಿನ ಲೇಖನ ಅವರ ವ್ಯಕ್ತಿತ್ವದ ವಿವಿಧ ಆಯಾಮಗಳ ವಾಸ್ತವ ಚಿತ್ರಣ. ಪಾಪು ನನಗೆ ಆತ್ಮೀಯರೂ, ಹಿತೈಷಿಗಳೂ ಆಗಿದ್ದವರು. ನಾನು ಮೈಸೂರಿನಲ್ಲಿದ್ದ ದಿನಗಳಲ್ಲಿ ಅವರು ಅಲ್ಲಿಗೆ ಬಂದಾಗಲೆಲ್ಲಾ, 'ಕುವೆಂಪು ಅವರನ್ನು ಕಂಡುಬರೋಣ ಬರ್ರಿ' ಎಂದು ಹುಕುಂ ಮಾಡುತ್ತಿದ್ದರು; ಅದು ಯಾವತ್ತೂ ಕೋರಿಕೆಯಾಗಿರುತ್ತಿರಲಿಲ್ಲ. ಅದೇ ಪಾಪು ಅವರ ವೈಶಿಷ್ಟ್ಯ. ಆ ಸಂದರ್ಭಗಳಲ್ಲಿ ಅವರು ಕುವೆಂಪು ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿ, ತೋರುತ್ತಿದ್ದ ಗೌರವ ನನ್ನ ನೆನಪಿನಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿವೆ. ಪಾಪು, ಅವರ ಎಲ್ಲ ಮಿತಿಗಳು ಮತ್ತು ದೌರ್ಬಲ್ಯಗಳ ನಡುವೆಯೂ ಒಬ್ಬ ಮಹತ್ವಪೂರ್ಣ ವ್ಯಕ್ತಿಯಾಗಿದ್ದರು. ಅವರ ಜೊತೆ ಕಳೆದ ಆತ್ಮೀಯ ಹಾಗೂ ಉಲ್ಲಾಸದ ಸಂದರ್ಭಗಳನ್ನು ಸದಾ ನಾನು ಸ್ಮರಿಸಿಕೊಳ್ಳುತ್ತೇನೆ.

**–ಹೆಚ್.ಎಸ್. ಈಶ್ವರ,** ಬೆಂಗಳೂರು

ಸಂಪಾದಕೀಯ ಹಾಗೂ ಉ.ಪ್ರ ಆಡಳಿತ ಕುರಿತ ನ್ಯಾ. ಕಟ್ಟು ಅವರ ಬರಹ ಓದಿದೆ. ಕುತೂಹಲಕರವಾಗಿವೆ. ಕೊರೊನಾ ವೈರಾಣು ಹುಟ್ಟಿನ ಬಗೆಗಿನ ತಮ್ಮ ಹ..ಸ . . . . . . . . . . . '. ವನ್ಯಜೀವಿಗಳು ಆಹಾರ ಸರಪಳಿಗೆ ನೀಡುವ ಕಾಣಿಕೆಗಳನ್ನು ನಿರ್ಲಕ್ಷಿಸುವುದರ ಅಪಾಯಗಳ ಬಗ್ಗೆ ಬರೆದಿರುವುದನ್ನು ನಾವೆಲ್ಲ ಗಮನಿಸಬೇಕಿದೆ. ವೆಂಕಟೇಶ ಮಾಚಕನೂರ ಪಾಪು ಕುರಿತು ಚಿಕ್ಕದಾಗಿಯೂ ಚೊಕ್ಕದಾಗಿಯೂ ತಮ್ಮ ನೆನಪುಗಳನ್ನು ಮೂಡಿಸಿದ್ದಾರೆ. ಮಾಧ್ಯಮ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿ ಮೆರೆದಿದ್ದರು ಪಾಪು. ಆದರೆ ಕೊನೆಯ ದಿನಗಳಲ್ಲಿ ಅವರು 'ವಿಶ್ವವಾಣಿ'ಯನ್ನು ಸಲ್ಲದವರ ಕೈಗೊಪ್ಪಿಸಿದ್ದು ಮಾತ್ರ ಅನುಚಿತ ನಡೆ.

'ಬಷೀರಣ್ಣನ ಪಂಚರಂಗಡಿ"ಯ ಕಥೆಯ ಕ್ಲೈಮ್ಯಾಕ್ಸ್‌ನಲ್ಲಿ, ಅಷ್ಟೊಂದು ಹುಡುಕಿದರೂ ಸಿಗದೇ ಇರುವ ಬಷೀರಣ್ಣ ಧಿಡೀರ್ ಎಂದು ಪ್ರತ್ಯಕ್ಷನಾಗಿ ಮತ್ತೆ ಮಾಯವಾಗುವ ಕ್ಷಣದಲ್ಲೇ ಕಣ್ಣಿನಂಚಿನಿಂದ ಕಣ್ಣೀರ ಹನಿಗಳು ಬಿದ್ದಿದ್ದು ತಿಳಿಯಲೇ ಇಲ್ಲ.

**–ಮಹಾಂತೇಶ ಓಶಿಮಠ,** ಕೈಗಾ (ಕಾರವಾರ)

ಏಪ್ರಿಲ್ ಸಂಚಿಕೆಯನ್ನು ಪೂರ್ತಿ ಓದಿದೆ. ಸಂಪಾದಕೀಯ ಟಿಪ್ಪಣಿಗಳು, ಅಂಬೇಡ್ಕರ್ ಕಂಡ ಬೌದ್ಧ ಧರ್ಮ, ಅಂಬೇಡ್ಕರ್ ತೋರುಬೆರಳಿನ ಕಟೌಟ್ ಕುರಿತ ಯುವ ಲಹರಿ, ಕರೋನಾ ಕಲಿಸಬೇಕಾದ ಪಾಠಗಳು, ಆದಿತ್ಯನಾಥರ ಎರ್ರಾಬಿರ್ರಿ ಆಡಳಿತ ಮುಂತಾದ ಲೇಖನಗಳು ತುಂಬ ಇಷ್ಟವಾದವು. ಆದರೆ ಷ.ಶೆಟ್ಟರ್ ಕುರಿತ ನಿಮ್ಮ ಬರಹ ನನ್ನಂಥವರಿಗೆ ಸ್ವಲ್ಪ ವೈಯಕ್ತಿಕ ಕಿರಿಕಿರಿಯನ್ನೇ ಉಂಟುಮಾಡಿತೆಂದು ಹೇಳಬಹುದು. ಏಕೆಂದರೆ ಅಮೂಲ್ಯ ಸಂಶೋಧನಾ ಕೃತಿಗಳನ್ನು ನಮಗೆ ನೀಡಿದವರು. ಮನು ದೇವದೇವನ್ ಅವರ ಟೀಕೆಗಳು ಈಗ ನನ್ನಂಥವರನ್ನು ಶೆಟ್ಟರ್ ಅವರ ಕೃತಿಗಳನ್ನು ಮತ್ತೊಮ್ಮೆ ಓದುವಂತೆ ಮಾಡಿವೆ.

**–ಎಂ.ಜಿ. ಈಶ್ವರಪ್ಪ,** ದಾವಣಗೆರೆ

ಷ.ಶೆಟ್ಟರ್ ಅವರ ಬಗ್ಗೆ ಬರೆಯುತ್ತಾ ನೀವು ಮನು ದೇವದೇವನ್ ಅವರ ಲೇಖನ ಪ್ರಸ್ತಾಪಿಸಿದ್ದು ಉಪಯುಕ್ತವಾಗಿತ್ತು. ನಾನು ಆ ಲೇಖನ ಹುಡುಕಿ ಓದಿದೆ. ಏನೋ ಅವಸರವಸರವಾಗಿ ಅವರು ಒಂದಷ್ಟು ತಪ್ಪು ಉಲ್ಲೇಖಗಳನ್ನು ಹೆಕ್ಕಿ ಶೆಟ್ಟರ್ ಅವರ ಥಿಯರಿಯನ್ನು ಅಲ್ಲಗಳೆಯಲು ಯತ್ನಿಸಿದಂತಿದೆ. ಅದೇನೇ ಇದ್ದರೂ ಶೆಟ್ಟರ್ ಅವರು ಮನು ದೇವದೇವನ್‌ಗೆ ಪ್ರತಿಕ್ರಿಯಿಸಿದ್ದರೆ ಚೆನ್ನಾಗಿರುತ್ತಿತ್ತು...

ವಿಶ್ವವಿದ್ಯಾಲಯಗಳಲ್ಲಿ ಇರುವವರು ಬರೆಯಬೇಕಾದ ಬರಹಗಳನ್ನು, ಎತ್ತಬೇಕಾದ ಮುಖ್ಯ ಪ್ರಶ್ನೆಗಳನ್ನು ನೀವು ಬರೆಯುತ್ತಿದ್ದೀರಿ/ಎತ್ತುತ್ತಿದ್ದೀರಿ ಎಂಬುದು ನಿಮ್ಮ ಬಗ್ಗೆ ಅಭಿಮಾನ–ಹೆಮ್ಮೆಗಳನ್ನು, ಅವರ ಬಗ್ಗೆ ವಿಷಾದವನ್ನು ನಮ್ಮಂತಹವರಲ್ಲಿ ಹುಟ್ಟಿಸುತ್ತಿದೆ.

**–ಶ್ರೀನಿವಾಸರಾಜು ದೊಡ್ಡೇರಿ,** ಚಳ್ಳಕೆರೆ

'ಹೊಸ ಮನುಷ್ಯ' ಏಪ್ರಿಲ್ ಸಂಚಿಕೆ (ಪಿಡಿಎಫ್) ತಲುಪಿದೆ. ಕರೋನಾ ಜಗತ್ತನ್ನೇ ತಲ್ಲಣಿಸಿದೆ. ಆದರೂ ಈ ಕೋಮುವಾದಿಗಳು ತಮ್ಮ ತರಲೆ ಬುದ್ದಿ ಬಿಡುತ್ತಿಲ್ಲ. ಬಡವರ ಗೋಳಿಗೆ ಸ್ಪಂದಿಸುತ್ತಿಲ್ಲ. ಗಾಂಧಿ, ಲೋಹಿಯಾ ಇವರುಗಳ ಸಮಾಜ ಸುಧಾರಣೆಯ ಸಿದ್ಧ ಮಾದರಿ ಕಣ್ಣೆದುರೇ ಇದ್ದರೂ ಅದರತ್ತ ಕಣ್ಣೆತ್ತಿಯೂ ನೋಡುತ್ತಿಲ್ಲ. ಇನ್ನು ನಡು ಪಂಥೀಯ ಮುಖವಾಡಗಳ ಗೆಳೆಯರು ಬಲ ಪಂಥಕ್ಕೆ ಮೆಲ್ಲಗೆ ಜಾರುತ್ತಿರುವುದನ್ನು ನೀವೇ ಗಮನಿಸಿದ್ದೀರಿ.

**–ಎನ್.ಆರ್. ವಿಶುಕುಮಾರ್,** ಬೆಂಗಳೂರು

ನಿಜವಾಗಿಯೂ ನಮ್ಮಂತಹಾ ಸಾಮಾನ್ಯರ ಬದುಕಿಗೆ ದುರಿತಕಾಲವಿದು. ಇಂತಹಾ ಸಮಯದಲ್ಲಿಯೂ ನಮ್ಮೊಳಗೆ ಗಟ್ಟಿತನ ಕಟ್ಟಿಕೊಡುವ "ಹೊಸ ಮನುಷ್ಯ" ಮನೆಗೆ ಬಂದಿದ್ದು ಬಹಳ ಸಂತೋಷ ಅನಿಸಿದೆ.

**–ಸುರೇಶ್‌ಕುಮಾರ್,** ದೇವರಹೊಸಹಳ್ಳಿ(ಡಾಬಸ್‌ಪೇಟೆ)

ಮೊದಲ ಬಾರಿಗೆ ಫೇಸ್‌ಬುಕ್ ಅಂತಹಾ ಮಾಧ್ಯಮವನ್ನೂ ಜ್ಞಾನ ಪ್ರಸಾರಕ್ಕೆ ಬಳಸಿಕೊಳ್ಳಬಹುದೆಂದು ತಾವೇ ನನಗೆ ಹಾದಿ ತೋರಿಸಿದಿರಿ. ಇಂದು ಬಹಳ ಕಷ್ಟದ ಸಮಯ. ನಮ್ಮ ಪತ್ರಿಕೆ ಬರಲಾರದು ಅನ್ನುವ ಬೇಸರದಲ್ಲಿದ್ದೆ – ಆದರೆ ಮೈಲ್ ನೋಡಿ ಪತ್ರಿಕೆ ಬಂದಿರುವುದು ಬಹಳ ಸಂತೋಷದ ಮತ್ತು ಬೆರಗಿನ ವಿಷಯವಾಗಿದೆ.

**–ಆರ್. ದಿಲೀಪ್ ಕುಮಾರ್,** ಚಾಮರಾಜನಗರ

## ಓದುಗರಿಗೊಂದು ಸೂಚನೆ

**ರಾಷ್ಟ್ರೀಯ 'ಬೀಗಮುದ್ರೆ'ಯ ಅನಿವಾರ್ಯ ಕಾರಣದಿಂದಾಗಿ ಕಳೆದ ಏಪ್ರಿಲ್ ಸಂಚಿಕೆಯ ಮುದ್ರಣ ಸಾಧ್ಯವಾಗಿಲ್ಲ. ಆದರೆ ಸಂಚಿಕೆಯ ಡಿಜಿಟಲ್ (ಪಿಡಿಎಫ್) ಆವೃತ್ತಿಯನ್ನು ಸಿದ್ಧಗೊಳಿಸಿದ್ದು ಅದನ್ನು ನಮ್ಮಲ್ಲಿ ಯಾವ ಚಂದಾದಾರರ ಇ–ಮೇಲ್ ವಿಳಾಸ ಅಥವಾ ವಾಟ್ಸಪ್ ಸಂಖ್ಯೆ ಲಭ್ಯವಿತ್ತೋ ಅವರಿಗೆಲ್ಲ ಕಳೆದ ೨೯ರಂದೇ ಕಳಿಸಲಾಗಿದೆ.**

**ಸದರಿ ಮೇ ಸಂಚಿಕೆಯನ್ನೂ ಡಿಜಿಟಲ್ ರೂಪದಲ್ಲಿ ಸಿದ್ಧಗೊಳಿಸಲಾಗಿದ್ದು ಈಗ ಅದನ್ನೂ ೨೯ರಂದು ಕಳಿಸಲಾಗುತ್ತಿದೆ. ಇನ್ನೊಂದು ವಾರ ಅಥವಾ ಹತ್ತು ದಿನಗಳಲ್ಲಿ ಮುದ್ರಣೋದ್ಯಮ ಆರಂಭವಾಗಿ ಅಂಚೆ ಸೇವೆ ಪುನರಾರಂಭವಾದರೆ ಈ ಸಂಚಿಕೆಯನ್ನು ಮುದ್ರಿಸಿ ಎಲ್ಲ ಚಂದಾದಾರರಿಗೂ ಕಳಿಸಲಾಗುವುದು. ಈ ಮಧ್ಯೆ ಈ ಎರಡೂ ಸಂಚಿಕೆಗಳು ತಲುಪಿಲ್ಲದ ಚಂದಾದಾರರು ನಮಗೆ (೯೪೪೮೨೪೭೨೩೬೪) ತಮ್ಮ ಇ–ಮೇಲ್ ವಿಳಾಸ ಅಥವಾ ವಾಟ್ಸಪ್ ಸಂಖ್ಯೆ ತಿಳಿಸಿದರೆ ಅವರಿಗೆ ಡಿಜಿಟಲ್ ಆವೃತ್ತಿಗಳನ್ನು ಕಳಿಸಲಾಗುವುದು.–ಸಂ.**

**ಯುವಲಹರಿ**

# ಕನ್ನಡ ಮಾಧ್ಯಮ ಶಿಕ್ಷಣದ ಜ್ಯೋತಿ ಬೆಳಗಿಸೀತೇ ಆಂಧ್ರ ಪ್ರದೇಶದ ಉಚ್ಛನ್ಯಾಯಾಲಯದ ತೀರ್ಪು?

**-ಜನಾರ್ದನ ಸಿ.ಎಸ್.**



**"ಗಾಂಧೀಜಿಯವರ ಹೆಸರು ಹೇಳಿ ಬದುಕುವವರಿಗಾಗಲೀ, ಲೋಹಿಯಾ, ಜೆಪಿಯವರ ಹೆಸರು ಹೇಳುವವರಿಗಾಗಲೀ, ವಿವೇಕಾನಂದರ ಹೆಸರು ಹೇಳುವವರಿಗಾಗಲಿ – ಆ ಪ್ರವರ್ತಕರು ಶಿಕ್ಷಣ ಮಾಧ್ಯಮದ ಬಗ್ಗೆ ನೀಡಿದ ನಿರ್ದೇಶನಗಳು ರುಚಿಸುತ್ತಿಲ್ಲ. ಶಿಕ್ಷಣದ ವ್ಯಾಪಾರೀಕರಣವೂ ಆಗಿ, ಶಿಕ್ಷಣ ಲಾಬಿ ಪ್ರಬಲವಾಗಿ ಹೆಚ್ಚು ದುಡ್ಡು ಹುಟ್ಟಿಸುವ ಆಂಗ್ಲ ಮಾಧ್ಯಮ ಅದರಲ್ಲೂ ಹೆಚ್ಚಾಗಿ ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳು ಬಹಳ ಬೇಡಿಕೆಯಲ್ಲಿವೆ. ಸರ್ಕಾರವು ಇವರ ಹಿಡಿತದಲ್ಲಿ ಇದೆ, ಇಲ್ಲವೇ ಮತ ಬೇಟೆಯ ಕಸರತ್ತಿನಲ್ಲಿದೆ. ಇಲ್ಲದಿದ್ದರೆ ರಾಜ್ಯದ ಮುಖ್ಯಮಂತ್ರಿಯೇ "ಖಾಸಗೀ ಶಾಲೆಗಳಂತೆ ಗುಣಮಟ್ಟ ಹೆಚ್ಚಿಸಲು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುತ್ತೇವೆ" ಎಂದು ಹೇಳುತ್ತಿರಲಿಲ್ಲ. ಕನ್ನಡದಲ್ಲೇ ಒಳ್ಳೆಯ ಗುಣಮಟ್ಟದ ಶಿಕ್ಷಣ ಕೊಡಲಾರದವರು ಇಂಗ್ಲಿಷಿನಲ್ಲಿ ಹೇಗೆ ಕೊಟ್ಟಾರು ಎಂಬ ವಿಚಾರವೇ ದೊಡ್ಡ ಸಾಮಾಜಿಕ ಚರ್ಚೆಯೂ ಆಗಲಿಲ್ಲ."**

**ದೂ**ರದಲ್ಲಿ ಒಂದು ಬೆಳಕು ಕಂಡು ಬಂದಂತೆ ಏಪ್ರಿಲ್ ೧೫ರ ಆಂಧ್ರಪ್ರದೇಶ ಉಚ್ಛನ್ಯಾಯಾಲಯದ ತೀರ್ಪು ಬಂದಿದೆ. ಆಂಧ್ರ ಪ್ರದೇಶ ಸರ್ಕಾರವು ರಾಜ್ಯದ ಎಲ್ಲ (ಹಿ.ಪ್ರಾ. ಹಂತದವರೆಗೂ) ಶಾಲೆಗಳನ್ನು ೨೦೨೦–೨೧ರಿಂದ ಸಾರಾಸಗಟಾಗಿ ಇಂಗ್ಲಿಷ್ ಮಾಧ್ಯಮಕ್ಕೆ ಬದಲಾಯಿಸಲು ಹೊರಡಿಸಿದ್ದ ಆದೇಶವನ್ನು ನ್ಯಾಯಾಲಯವು ಅಸಿಂಧುಗೊಳಿಸಿದೆ. ಕೆಲವು ವಿಷಯಗಳು ಈ ತೀರ್ಪಿನಲ್ಲಿ ಗಮನಾರ್ಹವಾಗಿದೆ. ಅಕ್ಟೋಬರ್ ೨೦೧೯ರಲ್ಲಿ ಹೊರಬಂದ ಆದೇಶದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದು ಮತ್ತು ವಿಚಾರಣೆಯ ನಂತರ ಕೋರ್ಟಿನ ಆದೇಶ ಬರುವುದು – ಕೇವಲ ೫ ತಿಂಗಳಿನಲ್ಲಿ ಆಗಿದೆ ಎನ್ನುವುದು ಒಂದು. ಭಾರತದ ಹಿಂದಿನ ಶತಮಾನದ ದಾರ್ಶನಿಕರು, ೧೯೬೮ರಿಂದ ಬಂದ ಎಲ್ಲ ರಾಷ್ಟ್ರೀಯ ಶಿಕ್ಷಣ ನೀತಿಗಳಲ್ಲಿನ (೨೦೧೯ರ ಕರಡನ್ನೂ ಸೇರಿ) ಭಾಷಾ ಮಾಧ್ಯಮದ ಬಗೆಗಿನ ಆಶಯಗಳು, ಶಿಕ್ಷಣ ಹಕ್ಕು ಕಾಯ್ದೆ, ಸಂವಿಧಾನದ ವಿವಿಧ ವಿಧಿಗಳು ಮತ್ತು ರಾಜ್ಯಗಳ ಪುನರ್ವಿಂಗಡಣೆಯಲ್ಲಿನ ಸೂಚನೆಗಳು – ಈ ಎಲ್ಲವನ್ನೂ ಈ ತೀರ್ಪು ಪರಿಗಣಿಸುತ್ತಿದೆ. ಮತ್ತೊಂದು ಮುಖ್ಯ ವಿಷಯವೆಂದರೆ ಇಂಗ್ಲಿಷ್ ಮಾಧ್ಯಮವನ್ನು ಹೆಚ್ಚು ಪ್ರತಿಪಾದಿಸುತ್ತಿರುವ ಪೋಷಕರು ಮತ್ತು ಹಿಂದುಳಿದ ವರ್ಗಗಳ ಸಂಘಟನೆಗಳು ಈ ಮೊಕದ್ದಮೆಯಲ್ಲಿ ಪ್ರತಿವಾದಿಗಳಾಗಿದ್ದದ್ದು.

ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕವನ್ನು ೮೦ರ ದಶಕದಿಂದಲೂ ಕೆಲವು ಮೂಲಭೂತ ಪಿಡುಗುಗಳು ಕಾಡುತ್ತಿವೆ. ನವ ಆಕಾಂಕ್ಷಿತ ವರ್ಗಗಳು ನಿರಂತರವಾಗಿ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷಿನ ಬೆನ್ನು ಹತ್ತುತ್ತಿವೆ. ಸಾರ್ವಜನಿಕ ಶಿಕ್ಷಣದ ಗುಣಮಟ್ಟ ಒಂದೆಡೆ ಕುಸಿಯುತ್ತಲೇ ಇದ್ದರೆ ಮತ್ತೊಂದೆಡೆ ಖಾಸಗೀ ಶಾಲೆಗಳು ಅವ್ಯಾಹತವಾಗಿ ಹೆಚ್ಚುತ್ತಲೇ ಇವೆ. ಎಲ್ಲ ಬಗೆಯ ಜ್ಞಾನದ ಆಕರಗಳು, ಸಂಶೋಧನೆಗಳು, ಉನ್ನತ ವ್ಯಾಸಂಗದ ಅವಕಾಶಗಳು ಮತ್ತು ವೃತ್ತಿಪರ ಶಿಕ್ಷಣಗಳು ಇವು ಯಾವುವೂ ಕನ್ನಡದಲ್ಲಿ ಬೆಳೆಯುತ್ತಿಲ್ಲ. ಕನ್ನಡದಲ್ಲಿ ಶಿಕ್ಷಣ ಪೂರೈಸಿದವರಿಗೆ ಕರ್ನಾಟಕದಲ್ಲಿ, ಭಾರತದಲ್ಲಿ ಗೌರವಯುತ ಉದ್ಯೋಗ ದೊರಕುವುದು ಕಷ್ಟವಾಗುತ್ತಿದೆ. ಮೇಲಿನೆಲ್ಲ ವಿಷಯಗಳಿಗೂ ಸರ್ಕಾರದ ನೀತಿಯಲ್ಲಿ, ತನ್ನ ಕರ್ತವ್ಯದ ನಿರ್ವಹಣೆಯಲ್ಲಿ ತೋರುತ್ತಿರುವ ಅಸಡ್ಡೆಯಲ್ಲಿ ಮತ್ತು ಅದು ಕನ್ನಡ/ ಕನ್ನಡಿಗರ ಬಗೆಗೆ ತೋರುತ್ತಿರುವ ದಿವ್ಯ ನಿರ್ಲಕ್ಷ್ಯದಲ್ಲಿ ಉತ್ತರವಿದೆ. ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಖಾಸಗೀ ಶಾಲೆಗಳನ್ನು ಮತ್ತು ವಿಶೇಷವಾಗಿ ಆಂಗ್ಲ ಮಾಧ್ಯಮ ಶಾಲೆಗಳನ್ನು ಉತ್ತೇಜಿಸುತ್ತಲೇ ಬಂದಿದೆ. ಆಗೀಗ ನಲಿ–ಕಲಿಯಂತಹ ಒಳ್ಳೆಯ ಆಶಯದ ಯೋಜನೆಗಳು ಬಂದರೂ ಅವುಗಳು ದಡ ಮುಟ್ಟುತ್ತಿಲ್ಲ. ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲೇ ಆಗಬೇಕೆಂದು ಅರೆಮನಸ್ಸಿನಿಂದ ರಾಜಕೀಯ ನಿಲುವು ತೆಗೆದುಕೊಂಡರೂ, ಒಟ್ಟಾಗಿ ಕಾನೂನಾತ್ಮಕವಾಗಿ ಅದಕ್ಕೆ ರಕ್ಷಣೆ ಒದಗಿಸುವ ಬದ್ಧತೆ ರಾಜಕೀಯ ಪಡಸಾಲೆಯಲ್ಲಿ, ಅಧಿಕಾರಶಾಹಿಯಲ್ಲಿ ಮತ್ತು ಕಾನೂನು ಸಲಹೆಗಾರರಲ್ಲಿ ಇಲ್ಲದಿರುವುದು ೨೦೧೪ರಲ್ಲಿ ಕರ್ನಾಟಕ ಸರ್ವೋಚ್ಚ ನ್ಯಾಯಾಲಯದಲ್ಲಿ ಕಂಡ ಸೋಲನ್ನು ಕಾಣುವಲ್ಲಿ ಪರ್ಯವಸಾನವಾಗುತ್ತಿದೆ.

ಆದರೆ ೮೦ರ ದಶಕದಲ್ಲಿ ಬೆಳೆದ ಇವತ್ತಿನ ಯುವ ಪೀಳಿಗೆಗೆ ಕನ್ನಡ ಮಾಧ್ಯಮವಿಲ್ಲದೇ ಮಕ್ಕಳಿಗೆ ಶಿಕ್ಷಣದ ವಿಷಯದಲ್ಲಿ ನಾವು ಮಾಡುತ್ತಿರುವ ಅನ್ಯಾಯ (ಮತ್ತು ಹಿಂಸೆಯೂ ಸಹ) ಅರಿವಿಗೆ ಬಂದಿದೆ. ವಿವಿಧ ಮಜಲುಗಳಲ್ಲಿ ಈಗ ಆ ತಲೆಮಾರಿನ ತಂಡ ಕೆಲಸ ಮಾಡುತ್ತಿದೆ. ಮಾಡುವ ಹುಮ್ಮಸ್ಸು ಶಕ್ತಿಯನ್ನೂ ಉಳಿಸಿಕೊಂಡಿದೆ. ಕನ್ನಡದಲ್ಲಿ ಸಂಪನ್ಮೂಲಗಳನ್ನು ಕಟ್ಟುವುದರಲ್ಲಿ, ಹೊಸ ಜ್ಞಾನವನ್ನು ಕನ್ನಡದಲ್ಲಿ ಮಕ್ಕಳಿಗೆ ತಲುಪಿಸುವುದರಲ್ಲಿ, ಮನರಂಜನೆ ಕನ್ನಡದಲ್ಲಿ ದೊರೆಯುವಂತೆ, ಕನ್ನಡದ ಮಕ್ಕಳ ಕಲ್ಪನೆ ಕನ್ನಡದಲ್ಲಿ ಗರಿಗೆದರುವಂತೆ ಎಲ್ಲದಕ್ಕಿಂತ ಹೆಚ್ಚಾಗಿ ಕನ್ನಡ ಮತ್ತು ಕನ್ನಡಿಗ ಜಗತ್ತಿನ ಎರಡನೇ ದರ್ಜೆ ಪ್ರಜೆಯಾಗಿ ಇರಬೇಕಿಲ್ಲ ಎಂಬ ಅಸ್ಮಿತೆಯನ್ನು ಹುಟ್ಟುಹಾಕುವಲ್ಲಿ ಈ ತಲೆಮಾರು ಕೆಲಸ ಮಾಡುತ್ತಿದೆ. ಸಮಗ್ರ ಮತ್ತು ಅರ್ಥಪೂರ್ಣ ಶಿಕ್ಷಣ ಮಕ್ಕಳದಾಗಬೇಕೆಂಬ ತುಡಿತವೂ ಇವರದಾಗಿದ್ದು, ಕೆಲವು ಶಾಲೆಗಳು ಕರ್ನಾಟಕದ ವಿವಿಧ ಸ್ಥಳಗಳಲ್ಲಿವೆ. ಕನ್ನಡ ಮಾಧ್ಯಮ ಶಾಲೆಗಳು ಬಡವರಿಗೆ, ನಿರ್ಗತಿಕರಿಗೆ ಮತ್ತು ಅವು ನಿರುಪಯುಕ್ತ ಎಂಬ ಸಾಮಾಜಿಕ (ಮತ್ತು ಸರ್ಕಾರೀ) ನಂಬಿಕೆಯನ್ನು ಹೊಡೆದೋಡಿಸಿ ಮಧ್ಯಮ ವರ್ಗದ ಮಂದಿ ಈ ಶಾಲೆಗಳನ್ನು ಅಪೇಕ್ಷಿಸುವುದು, ನಿಜವಾದ ಕಲಿಕೆ, ವ್ಯಕ್ತಿತ್ವ, ಸೃಜನಶೀಲತೆ ಅರಳುತ್ತಿರುವುದು, ಈ ಎಲ್ಲವನ್ನೂ ನೋಡುತ್ತಾ ಆ ಪೋಷಕರು ತೃಪ್ತಿಯಿಂದ ಮತ್ತಷ್ಟು ಪೋಷಕರನ್ನು ಈ ವಿಷಯಗಳಿಗೆ ತೆರೆದುಕೊಳ್ಳುವಂತೆ ಮಾಡುವುದು ನಡೆಯುತ್ತಿದೆ. ಆದರೆ ಇದು ಬಹಳ ನಿಧಾನ ಪ್ರಕ್ರಿಯೆ. ಹೋರಾಟದ ಪ್ರಕ್ರಿಯೆ – ಪ್ರಬಲ ಅಲೆಗಳ ವಿರುದ್ಧ ಈಜಲು ಶಾಲೆಗಳಿಗೆ, ಪೋಷಕರಿಗೆ ಬಹಳ ತ್ರಾಣ ಬೇಕಾಗುತ್ತದೆ.

ಆ ತ್ರಾಣವನ್ನು ಸರ್ಕಾರ ನೀಡಬೇಕಿತ್ತು. ಸರಿಯಾದ ದೂರದೃಷ್ಟಿ ಮತ್ತು ಬದ್ಧತೆಯುಳ್ಳ ಸರ್ಕಾರ, ಆರ್ಥಿಕ ಸಂರಚನೆ, ಉದ್ಯೋಗ ಉತ್ಪತ್ತಿ, ನಗರದ ಬೆಳವಣಿಗೆ ಮತ್ತು ಭಾಷಿಕ ಕರ್ನಾಟಕ ಎಲ್ಲವನ್ನೂ ಸಮಗ್ರವಾಗಿ ಮಿಳಿತಗೊಳಿಸುವ ಯೋಜನೆಗಳನ್ನು ಜಾರಿ ಮಾಡುತ್ತಿತ್ತು. ದುರದೃಷ್ಟವೆಂದರೆ ಒಬ್ಬರಾದ ನಂತರ ಮತ್ತೊಬ್ಬರು ಅಧಿಕಾರಕ್ಕೆ ಬರುತ್ತಿರುವ ಯಾವ ರಾಜಕೀಯ ಪಕ್ಷಕ್ಕೂ ಈ ವಿಷಯದಲ್ಲಿ ಸಂವೇದನೆ ಇಲ್ಲ. ಗಾಂಧೀಜಿಯವರ ಹೆಸರು ಹೇಳಿ ಬದುಕುವವರಿಗಾಗಲೀ, ಲೋಹಿಯಾ, ಜೆಪಿಯವರ ಹೆಸರು ಹೇಳುವವರಿಗಾಗಲೀ, ವಿವೇಕಾನಂದರ ಹೆಸರು ಹೇಳುವವರಿಗಾಗಲಿ–ಆ ಪ್ರವರ್ತಕರು ಶಿಕ್ಷಣ ಮಾಧ್ಯಮದ ಬಗ್ಗೆ ನೀಡಿದ ನಿರ್ದೇಶನಗಳು ರುಚಿಸುತ್ತಿಲ್ಲ. ಶಿಕ್ಷಣದ ವ್ಯಾಪಾರೀಕರಣವೂ ಆಗಿ, ಶಿಕ್ಷಣ ಲಾಬಿ ಪ್ರಬಲವಾಗಿ ಹೆಚ್ಚು ದುಡ್ಡು ಹುಟ್ಟಿಸುವ ಆಂಗ್ಲ ಮಾಧ್ಯಮ ಅದರಲ್ಲೂ ಹೆಚ್ಚಾಗಿ ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳು ಬಹಳ ಬೇಡಿಕೆಯಲ್ಲಿವೆ. ಸರ್ಕಾರವು ಇವರ ಹಿಡಿತದಲ್ಲಿ ಇದೆ, ಇಲ್ಲವೇ ಮತ ಬೇಟೆಯ ಕಸರತ್ತಿನಲ್ಲಿದೆ. ಇಲ್ಲದಿದ್ದರೆ ರಾಜ್ಯದ ಮುಖ್ಯಮಂತ್ರಿಯೇ "ಖಾಸಗೀ ಶಾಲೆಗಳಂತೆ ಗುಣಮಟ್ಟ ಹೆಚ್ಚಿಸಲು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುತ್ತೇವೆ" ಎಂದು ಹೇಳುತ್ತಿರಲಿಲ್ಲ. ಕನ್ನಡದಲ್ಲೇ ಒಳ್ಳೆಯ ಗುಣಮಟ್ಟದ ಶಿಕ್ಷಣ ಕೊಡಲಾರದವರು ಇಂಗ್ಲಿಷಿನಲ್ಲಿ ಹೇಗೆ ಕೊಟ್ಟಾರು ಎಂಬ ವಿಚಾರವೇ ದೊಡ್ಡ ಸಾಮಾಜಿಕ ಚರ್ಚೆಯೂ ಆಗಲಿಲ್ಲ.

ಸರ್ಕಾರ ಇಷ್ಟು ಹೆಜ್ಜೆ ಮುಂದಿಟ್ಟಿದ್ದರೂ ಕೂಡ ಈಗ ಮತ್ತೆ ದೂರದಲ್ಲಿ ಒಂದು ಬೆಳಕು ಕಾಣುತ್ತಿದೆ. ಶಿಕ್ಷಣದ ಬಗ್ಗೆ, ಮಕ್ಕಳ ಬಗ್ಗೆ, ಭಾರತೀಯ ಜೀವನ ಕ್ರಮ, ಪರಂಪರೆಯ ಬಗ್ಗೆ ಬದ್ಧತೆಯುಳ್ಳ ಕನ್ನಡಿಗರು ಒಟ್ಟಾಗಿ ಈಗ ಸರ್ಕಾರವನ್ನು, ಮೊದಲಿಗೆ ತಾವು ಆರಂಭಿಸಿರುವ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ಹಿಂದಿನಂತೆ ಕನ್ನಡ ಮಾಧ್ಯಮಕ್ಕೇ ಹೊರಳಿಸಬೇಕು, ಖಾಸಗೀ ಲಾಬಿಗೆ ಮಣಿಯದೇ ಹೊಸ ತೀರ್ಪಿನ ಆಧಾರದಲ್ಲಿ ಕೆಲವು ಹೊಸ ವಿಶ್ಲೇಷಣೆಗಳನ್ನು ನ್ಯಾಯಾಲಯದ ಮುಂದಿಟ್ಟು ಶಿಕ್ಷಣವನ್ನು ಸಬಲಗೊಳಿಸಬೇಕೆಂದು ಕೇಳಲು ಇದು ಸಕಾಲ.



**(ಮೂಲತಃ ಚನ್ನಗಿರಿಯವರಾದ ಜನಾರ್ದನ ಅವರು ಈಗ ಮೈಸೂರಿನಲ್ಲಿ ಸಾಮಾಜಿಕ ಕಾರ್ಯಕರ್ತರೂ, *ಅರಿವು* ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಕಾರ್ಯದರ್ಶಿಯೂ ಆಗಿದ್ದಾರೆ)**



ಪ್ರಚಲಿತ-೧

# ಈ ಭೂಮಿಗೂ ಒಂದು ಬದುಕಿದೆ: ಪ್ರಜ್ಞೆ ಇದೆ!

**ಈ ಸುಂದರ ತಿಳಿನೀಲ ಭೂಮಾತೆಯ ಚಿತ್ರದ ವಿಶೇಷವೇನು ಗೊತ್ತೆ? ನೀವೆಷ್ಟೇ ಕಷ್ಟಪಟ್ಟು ಈ ಚಿತ್ರವನ್ನು ಹಿಗ್ಗಿಸಿ ಹುಡುಕಿದರೂ ಗಡಿರೇಖೆಗಳು ಕಾಣುವುದೇ ಇಲ್ಲ!**

ಏಪ್ರಿಲ್ ೨೨ರಂದು 'ಭೂದಿನ'ವನ್ನು ವಿಶೇಷ ಸಂಭ್ರಮದಿಂದ ಆಚರಿಸಬೇಕಿತ್ತು. ಏಕೆಂದರೆ ಇದು ೫೦ನೇ ವರ್ಷಾಚರಣೆ. ಆದರೆ ಕೊರೊನಾ ಅಂಥ ಸಂಭ್ರಮಗಳನ್ನೆಲ್ಲ ಮೂಲೆಗೊತ್ತಿದೆ. ಭೂಮಿಯೇ ಬದಲಾದಂತಿದೆ. "ನನ್ನನ್ನು ಗೋಳಿಕ್ಕಿಕೊಳ್ಳುವುದೂ ಸಾಕು; ನನ್ನ ಹೆಸರಿನ ದಿನಾಚರಣೆಯೂ ಸಾಕು, ಸುಮ್ಮನೆ ಕೂತಿರಿ" ಎಂದು ಭೂಮಿ ತನಗಾದ ಗಾಯಗಳನ್ನು ತಾನೇ ಸರಿಪಡಿಸಲು ಹೊರಟಿದೆಯೊ ಏನೊ. ಹಾಗಿದ್ದರೆ ಭೂಮಿಗೆ ಪ್ರಜ್ಞೆ ಅನ್ನೋದು ಇದೆಯೆ? ಇಂದಿಗೆ ೫೦ ವರ್ಷಗಳ ಹಿಂದೆ ವಿಜ್ಞಾನಿಯೊಬ್ಬನಿಗೆ ಈ ಪ್ರಶ್ನೆ ಎದುರಾಯಿತು. ಭೂಮಿಯ ಕುರಿತು ಹೊಸ ಚಿಂತನ ಕ್ರಮ ಆರಂಭವಾಯಿತು. ಅದರ ಹಿನ್ನೆಲೆ ಮತ್ತು ಸ್ವರೂಪ ಚಿತ್ರಣ ಇಲ್ಲಿದೆ:

ಭೂಮಿಯ ಮೇಲಿನ ಇಡೀ ಜೀವಲೋಕವೇ ಒಂದು ಮಹಾಜೀವಿಯಂತೆ ವರ್ತಿಸುತ್ತದೆ; ಅದು ತನಗೆ ಬೇಕಾದಂತೆ ಕಲ್ಲು, ನೀರು, ಗಾಳಿಯನ್ನೂ ನಿಯಂತ್ರಿಸಿಕೊಳ್ಳುತ್ತದೆ ಎಂದು ವಾದಿಸಿದವನು ಜೇಮ್ಸ್ ಲವ್ಲಾಕ್. ಆತ ನೂರಾರು ವೈಜ್ಞಾನಿಕ ಪುರಾವೆಗಳನ್ನು ಕೊಟ್ಟು ವಿಜ್ಞಾನಲೋಕದಲ್ಲಿ ಹೊಸ ಸಂಚಲನವನ್ನೇ ತಂದಿಟ್ಟ. (ಈಗ ಆತನಿಗೆ ೧೦೦ ವರ್ಷ.) ಇಂದಿಗೆ ೫೦ ವರ್ಷಗಳ ಹಿಂದೆ, ೧೯೭೦ರಲ್ಲಿ ಆತ ತನ್ನ ಕಲ್ಪನೆಯ ಭೂಮಿಗೆ 'ಗೇಯಾ' ಎಂದು ಹೆಸರಿಟ್ಟ. ಗ್ರೀಕ್ ಭಾಷೆಯಲ್ಲಿ ಭೂಮಾತೆಗೆ 'ಗೇಯಾ' ಎನ್ನುತ್ತಾರೆ. ಗ್ರೀಕ್ ಪುರಾಣಗಳಲ್ಲಿ ಅತ್ಯಂತ ಪುರಾತನ ದೇವತೆ ಎಂದರೆ ಭೂದೇವಿ. ಲವ್ಲಾಕ್ನ ಪ್ರಸ್ತಾವನೆಗೆ 'ಗೇಯಾ ಸಿದ್ಧಾಂತ' ಎಂತಲೇ ಹೆಸರು ಬಂತು.

ಒಂದು ಸರಳ ರೂಪಕದ ಮೂಲಕ ಈ ಗೇಯಾ ಜೀವಿಯ ತಾಕತ್ತನ್ನು ಅಳೆಯಬಹುದು. ಭೂಮಿಯ ಮೇಲೆ ಸೆಕೆ ತೀರಾ ಹೆಚ್ಚಾಯಿತು ಎಂದುಕೊಳ್ಳಿ. ಸತತ ಅನೇಕ ವರ್ಷಗಳವರೆಗೆ ಸೆಕೆ ಹೆಚ್ಚುತ್ತಲೇ ಹೋಗುತ್ತಿದ್ದರೆ ಕ್ರಮೇಣ ಈ ನೆಲದಲ್ಲಿ ಬಿಳಿ ಹೂಗಳನ್ನೇ ಅರಳಿಸುವ ಸಸ್ಯಗಳು ಎಲ್ಲೆಲ್ಲೂ ಹೆಚ್ಚುತ್ತವೆ. ಸೂರ್ಯನ ಬೆಳಕನ್ನು ಅವು ಆಕಾಶಕ್ಕೇ ಹಿಂದಿರುಗಿಸುತ್ತವೆ. ಕ್ರಮೇಣ ಭೂಮಿ ತಂಪಾಗಿ ತನ್ನ ಸರಾಸರಿ ಉಷ್ಣತೆಯನ್ನು ಕಾಪಾಡಿಕೊಳ್ಳುತ್ತದೆ. ಒಂದುವೇಳೆ ಸೂರ್ಯನ ಪ್ರಖರತೆ ಕಡಿಮೆ ಆಗುತ್ತ ಕ್ರಮೇಣ ಚಳಿ ಹೆಚ್ಚುತ್ತ ಹೋದರೆ ದಟ್ಟವರ್ಣದ ಹೂಗಳು ಹೆಚ್ಚುತ್ತವೆ. ಸಮುದ್ರದಲ್ಲಿ ಚಾಪೆಯಂತೆ ಬೆಳೆಯಬಲ್ಲ ಸೂಕ್ಷ್ಮ ಪಾಚಿ ಕಣಗಳೂ ದಟ್ಟ ಬಣ್ಣ ತಳೆಯುತ್ತವೆ. ಅವು ಸೂರ್ಯನ ಜಾಸ್ತಿ ಶಾಖವನ್ನು ಹೀರಿಕೊಳ್ಳುತ್ತ ಭೂಮಿಯನ್ನು ಸುಸ್ಥಿತಿಗೆ ತರುತ್ತವೆ.

## ನಮ್ಮ ಶರೀರದಂತೆ ನಮ್ಮ ಭೂಮಿ

ತನ್ನ ಅಸಮತೋಲವನ್ನು ತಾನೇ ಸರಿತೂಗಿಸಿಕೊಳ್ಳಬಲ್ಲ ಇಂಥ ವ್ಯವಸ್ಥೆಗಳಿಗೆ 'ಹೋಮಿಯೊಸ್ಟಾಸಿಸ್' ಎನ್ನುತ್ತಾರೆ. ನಮ್ಮ ಶರೀರದಲ್ಲೂ ಇಂಥ ಅನೇಕ ಸ್ವಯಂ-ಸಮತೋಲಕ ವ್ಯವಸ್ಥೆ ಇವೆ. ನಮ್ಮ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಇನ್ಸೂಲಿನ್ ನಿಯಂತ್ರಿಸುತ್ತದೆ; ದೇಹದ ಉಷ್ಣಾಂಶವನ್ನು ಹೈಪೊಥಲಾಮಸ್ ನಿಯಂತ್ರಿಸುತ್ತದೆ. ಚಳಿ ತೀರಾ ಜಾಸ್ತಿಯಾದಾಗ ನಡುಕ ಬರುವುದೂ ಸ್ವಯಂರಿಪೇರಿ ವ್ಯವಸ್ಥೆಯೇ ಹೌದು. (ಆದರೆ ಕಂಬಳಿ ಹೊದೆಯುವುದು ಹೋಮಿಯೊಸ್ಟಾಸಿಸ್ ಅಲ್ಲ- ಏಕೆ ಹೇಳಿ? ಏಕೆಂದರೆ ಕಂಬಳಿ ಶರೀರದ ಒಂದು ಭಾಗವೇ ಅಲ್ಲ.)

ನಮ್ಮ ಶರೀರದಾಚೆಗಿನ ನಿಸರ್ಗದಲ್ಲೂ ಇಂಥ ಸ್ವಯಂನಿಯಂತ್ರಣ ವ್ಯವಸ್ಥೆಗಳು ಎಲ್ಲೆಲ್ಲೂ ಕಾಣುತ್ತವೆ. ಮನೆಯಲ್ಲಿನ ಪುಟ್ಟ ದೇವರ ಗುಡಿಗೆ ಕೂರಿಸಿದ ಅಮೃತಶಿಲೆಯ ಪೀಠವನ್ನೇ ನೋಡಿ. ಆ ಶಿಲೆಯ ಸೃಷ್ಟಿಯಲ್ಲಿ ಜೀವಿಗಳ ಕೈವಾಡ ಇತ್ತು ಗೊತ್ತೆ? ಜ್ವಾಲಾಮುಖಿ ಸಿಡಿದಾಗ ತುಂಬಾ ಇಂಗಾಲದ ಉರಿ ಚಿಮ್ಮುತ್ತದೆ. ವಾಯುಮಂಡಲಕ್ಕೆ ಇಂಗಾಲ ಜಾಸ್ತಿ ಸೇರಿ ಸೆಕೆ ಹೆಚ್ಚಾಗುತ್ತದೆ. ಸಸ್ಯಗಳು ಆ ಇಂಗಾಲವನ್ನು ಹೀರಿ ತೆಗೆಯುತ್ತವೆ. ಸಮುದ್ರ ಜೀವಿಗಳೂ ನೀರಲ್ಲಿ ಕರಗಿದ ಇಂಗಾಲವನ್ನು ಹೀರಿ ತೆಗೆದು ತಮ್ಮ ಸುತ್ತ ಇಂಗಾಲದ ಕವಚವನ್ನು ನಿರ್ಮಿಸಿಕೊಳ್ಳುತ್ತವೆ. ಅವೆಲ್ಲವೂ ಸಮುದ್ರತಳದಲ್ಲಿ ಸಂಚಯಗೊಂಡು ಸುಣ್ಣದ ಸ್ತರಗಳಾಗಿ, ಕ್ರಮೇಣ ಒತ್ತಡಕ್ಕೆ ಸಿಕ್ಕು ಅಮೃತಶಿಲೆಯಾಗುತ್ತದೆ. ಅಥವಾ ಕಲ್ಲಿದ್ದಲಾಗಿ, ತೈಲವಾಗಿ, ಅನಿಲವಾಗಿ ಭೂಗರ್ಭ ಸೇರುತ್ತವೆ. ಭೂಜೀವಿಗಳು ಹೀಗೆ ಇಂಗಾಲದ ಚಕ್ರವನ್ನೂ, ಸಾರಜನಕ-ಆಮ್ಲಜನಕ-ಗಂಧಕದ ಚಕ್ರಗಳನ್ನೂ ಸದಾ ಚಲನೆಯಲ್ಲಿಟ್ಟಿರುತ್ತವೆ. ಇದಕ್ಕೆ ಕೋಟಿಗಟ್ಟಲೆ ವರ್ಷ ತಗಲುತ್ತದೆ.

## ಜೀವಿಗಳೇ ಇಲ್ಲದಿದ್ದರೆ ಭೂಮಿ ಏನೇನಾಗುತ್ತಿತ್ತು?

ಭೂಮಿ ಸೃಷ್ಟಿಯಾದ ೪೫೦ ಕೋಟಿ ವರ್ಷಗಳಿಂದ ಸೂರ್ಯನ ಪ್ರಭೆ ನಿರಂತರವಾಗಿ ಉಗ್ರವಾಗುತ್ತಲೇ ಹೋಗುತ್ತಿದೆ. ಭೂಮಿಯ ತಾಪಮಾನ ಈಗಿನ ೧೪ ಡಿಗ್ರಿ ಸೆ. ಬದಲಿಗೆ ೪೦ ಡಿಗ್ರಿಯ ಕೆಂಡವಾಗಬಹುದಿತ್ತು. ವಾಯುಮಂಡಲದಲ್ಲಿ ಬರೀ ಇಂಗಾಲ ತುಂಬಿರುತ್ತಿತ್ತು. ಸಮುದ್ರದಲ್ಲಿ ಉಪ್ಪಿನಂಶ ಸತತವಾಗಿ ಹೆಚ್ಚುತ್ತ ಹೋಗಿ ಅದು ನಿರ್ಜೀವ ಕಡಲಾಗುತ್ತಿತ್ತು. ಇಡೀ ಭೂಮಿಯೇ ಬುಧ ಅಥವಾ ಮಂಗಳದ ಹಾಗೆ ಮೃತಗೋಲವಾಗಿರುತ್ತಿತ್ತು. ಹಾಗಾಗದಂತೆ ಭೂಮಿಯನ್ನು ಜೀವಂತ ಇಟ್ಟಿದ್ದೇ ಜೀವಿಗಳು. ಅವು ವಾಯುಮಂಡಲದ ಇಂಗಾಲವನ್ನು ಅತ್ಯಲ್ಪ ಪ್ರಮಾಣದಲ್ಲಿ ತಗ್ಗಿಸಿ ಇಟ್ಟಿವೆ. ಅಷ್ಟೇ ಮಾಡಿದ್ದಿದ್ದರೆ ಅಲ್ಲಿ ಬರೀ ಆಮ್ಲಜನಕ ತುಂಬಿಕೊಂಡು, ಕಾಡೆಲ್ಲ ಭುಗ್ಗೆಂದು ಉರಿದು ಬೂದಿಯಾಗುತ್ತಿತ್ತು. ಹಾಗೆ ಆಗಬಾರದೆಂದು ಸಾರಜನಕವನ್ನು ದೊಡ್ಡ ಪ್ರಮಾಣದಲ್ಲಿ ವಾಯುಮಂಡಲಕ್ಕೆ ಸೇರಿಸಿದ್ದೇ ಜೀವಿಗಳು. ಅವು ಆಮ್ಲಜನಕವನ್ನು ೨೧% ಮೀರದಂತೆ ನೋಡಿಕೊಂಡಿವೆ. ಸಮುದ್ರದಲ್ಲಿ ಉಪ್ಪಿನಂಶ ೩%ಗಿಂತ ಹೆಚ್ಚದಂತೆ ನೋಡಿಕೊಂಡಿವೆ. ಭೂಮಂಡಲದ ತಾಪಮಾನ ೧೪ ಡಿಗ್ರಿ ಸೆ. ಗಿಂತ ಹೆಚ್ಚದಂತೆ ಹತೋಟಿಯಲ್ಲಿಟ್ಟಿವೆ. ಸಮುದ್ರದ ತಳದಲ್ಲೇ ಉಳಿದಿರಬೇಕಿದ್ದ ಗಂಧಕದ ತುಸು ಭಾಗ ಮಣ್ಣಿನಲ್ಲೂ ಸೇರ್ಪಡೆ ಆಗಿರುವಂತೆ ನಿಗಾ ವಹಿಸಿವೆ. 'ಸುತ್ತಲಿನ ಪರಿಸರಕ್ಕೆ ತಕ್ಕಂತೆ ಜೀವಿಗಳು ರೂಪುಗೊಳ್ಳುತ್ತವೆ' ಎಂಬ ಮಾಮೂಲು ಪರಿಕಲ್ಪನೆಯನ್ನು ಗೇಯಾ ತತ್ವವು ತಲೆಕೆಳಗು ಮಾಡುತ್ತದೆ. 'ಜೀವಿಗಳೇ ತಮ್ಮ ಸುತ್ತಲಿನ ಪರಿಸರವನ್ನು ತಮಗೆ ಬೇಕೆಂದಂತೆ ರೂಪಿಸಿಕೊಳ್ಳುತ್ತವೆ' ಎಂಬುದು ಈ ಸಿದ್ಧಾಂತದ ತಿರುಳು. ಎಲ್ಲ ಜೀವಿಗಳೂ ಒಟ್ಟಾರೆಯಾಗಿ ಭೂಮಂಡಲವನ್ನು ಜೀವಂತವಾಗಿ ಇಟ್ಟಿವೆ. ಕೆಲವೊಮ್ಮೆ ಜೀವಿಗಳ ಲೆಕ್ಕಾಚಾರ ಹೆಚ್ಚುಕಮ್ಮಿ ಆಗಿ ಇಡೀ ಭೂಮಿಯ ತಾಪಮಾನ ಹೆಚ್ಚುತ್ತ ಹೋಗಿದ್ದು ಹೌದು; ಹಿಮದ ಉಂಡೆಯಾಗಿ ಹೆಪ್ಪುಗಟ್ಟಿದ್ದೂ ಹೌದು. (ಆಗ ಶ್ರೀಲಂಕಾಕ್ಕೆ ನಡೆದೇ ಹೋಗಬಹುದಿತ್ತು.) ಕೆಲವೊಮ್ಮೆ ಉಲ್ಕೆಗಳೋ ಕ್ಷುದ್ರಗ್ರಹಗಳೋ ಭೂಮಿಗೆ ಬಡಿದು ಇಡೀ ಜೀವಲೋಕದ ಬಹುಭಾಗವೇ ನಾಮಾವಶೇಷ ಆಗಿದ್ದೂ ಇದೆ. ಅಂಥ ಕರಾಳ ಯುಗದಲ್ಲೂ ಜೀವಿಗಳು ಹೊಸ ರೂಪ ಧರಿಸಿ, ಹೊಸ ಪಾತ್ರ ವಹಿಸಿ ಭೂಮಿಯ ಜೀವಂತಿಕೆಯನ್ನು ೩೫೦ ಕೋಟಿ ವರ್ಷಗಳಿಂದ ಕಾಪಾಡಿಕೊಂಡು ಬಂದಿವೆ.

ಹಾಗಿದ್ದರೆ ಮನುಷ್ಯ ಬಂದು ಇದೇನೇನು ಭಾನಗಡಿ ಮಾಡುತ್ತಿದ್ದಾನೆ? ಭೂಮಾತೆ ಅವಿತಿಟ್ಟಿದ್ದ ತೈಲವನ್ನೂ ಕಲ್ಲಿದ್ದಲನ್ನೂ ವಿಷಯುಕ್ತ ಲೋಹಗಳನ್ನೂ ಆತ ಹೊರಕ್ಕೆ ತೆಗೆದು ವಾಯುಮಂಡಲಕ್ಕೆ ಅತಿಯಾದ ಇಂಗಾಲದ ಉರಿಯನ್ನು ತುಂಬುತ್ತ, ಮಾಲಿನ್ಯ ಹಬ್ಬಿಸುತ್ತ ಸಾವಿರಾರು ಜ್ವಾಲಾಮುಖಿಗಳಿಗಿಂತ ಭೀಕರವಾದ ಅಣುಬಾಂಬ್‌ಗಳನ್ನು ತಯಾರಿಸುತ್ತ ಇದೇನು ಮಾಡುತ್ತಿದ್ದಾನೆ? ಇವನಿಗೆ ಬುದ್ಧಿ, ವಿವೇಕ ಬಂದೀತೆ?

ಇಲ್ಲೊಂದು ಸ್ವಾರಸ್ಯವಿದೆ: ೧೯೭೦ರಲ್ಲಿ ಇಂಗ್ಲೆಂಡಿನ ವಿಜ್ಞಾನಿ ಲವ್ಲಾಕ್ ಈ ಭೂಮಿಗೆ 'ಗೇಯಾ' ಎಂದು ಹೆಸರಿಟ್ಟಿದ್ದು, ಅಮೆರಿಕಕ್ಕೆ ಗೊತ್ತಿರಲಿಲ್ಲ. ಆದರೆ ಅಲ್ಲಿ ತಂತಾನೇ ಪರಿಸರ ಜಾಗೃತಿ ಮೂಡುತ್ತಿತ್ತು. ಗೇಲಾರ್ಡ್ ನೆಲ್ಸನ್ ಎಂಬಾತ ಈ ಜಾಗೃತಿಯನ್ನು ಎಲ್ಲೆಡೆ ಪಸರಿಸುವ ಉದ್ದೇಶದಿಂದ 'ಭೂ ದಿನ'ವನ್ನು ('ಅರ್ಥ್ ಡೇ) ಆಚರಿಸೋಣ ಎಂದು ಅಮೆರಿಕದ ಜನರಿಗೆ ಕರೆಕೊಟ್ಟಿದ್ದು ಇಂಗ್ಲೆಂಡಿನ ಈ ವಿಜ್ಞಾನಿಗೆ ಅಂದು ಗೊತ್ತಿರಲಿಲ್ಲ.

ಭೂಮಿಗೆ ಅತಿ ಹೆಚ್ಚು ಸಂಕಟವನ್ನು ತಂದೊಡ್ಡಿದ ಎರಡು ಖಂಡಗಳಲ್ಲಿ ಏಕಕಾಲಕ್ಕೆ ಪರಿಸರ ಜಾಗೃತಿ ಮೂಡಿತ್ತು. ಅದೇ ವೇಳೆಗೆ ಅಪೊಲೊ ೧೭ ನೌಕೆಯು ದೂರದ ಕಕ್ಷೆಯಲ್ಲಿ ಸಾಗುತ್ತ ಭೂಮಿಯ ಸುಂದರ, ಸಮಗ್ರ ಚಿತ್ರವನ್ನು ನೆಲಕ್ಕೆ ರವಾನಿಸಿತು. ಒಂದರ್ಥದಲ್ಲಿ ಭೂಮಿಯೇ ಸೆಲ್ಫಿ ತಗೊಂಡಿತ್ತು! ಇಂಥ ಸುಂದರ ನೀಲಗೋಲಿಯನ್ನು ಧ್ವಂಸ ಮಾಡಲು ಹೊರಟಿದ್ದೇವೆಂಬ ಅರಿವು ವಿಶ್ವನಾಯಕರಿಗೆ ಮೂಡತೊಡಗಿತು. ಕ್ರಮೇಣ ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸುವ ಕೆಲಸಕ್ಕೆ ಹೆಚ್ಚಿನ ಆದ್ಯತೆ ಸಿಗತೊಡಗಿತು. ಛಿದ್ರವಾಗುತ್ತಿದ್ದ ಓಝೋನ್ ಕವಚವನ್ನು ಎಲ್ಲ ದೇಶಗಳೂ ಒಟ್ಟಾಗಿ ಸರಿಪಡಿಸೋಣವೆಂಬ ಹಂಬಲ ಮೂಡಿತು. ಪ್ರಾಯಶಃ ಇವೆಲ್ಲವೂ ಜೀವಗೋಲದ ಸಮಷ್ಟಿ ಪ್ರಜ್ಞೆಯ ಭಾಗವೇ ಇದ್ದೀತೇನೊ.

ಈ ಸುಂದರ ತಿಳಿನೀಲ ಭೂಮಾತೆಯ ಚಿತ್ರದ ವಿಶೇಷವೇನು ಗೊತ್ತೆ? ನೀವೆಷ್ಟೇ ಕಷ್ಟಪಟ್ಟು ಈ ಚಿತ್ರವನ್ನು ಹಿಗ್ಗಿಸಿ ಹುಡುಕಿದರೂ ಗಡಿರೇಖೆಗಳು ಕಾಣುವುದೇ ಇಲ್ಲ!

**-ನಾಗೇಶ ಹೆಗಡೆ**

**(ಕಳೆದ ಏಪ್ರಿಲ್ ೨೨ರ ಭೂ ದಿನದ ಸಂದರ್ಭಕ್ಕಾಗಿ ಬರೆದ ಫೇಸ್‌ಬುಕ್ ಬರಹ)**

# ಕುಸು ನಿಧಾನಿಸಿ; ಅದಕ್ಕಿದು, ಇದು ಸಕಾಲ...

ಪ್ರಚಲಿತ-೨

-ಪೆಗ್ಗಿ ಮೋಹನ್



**ಕರೋನಾ ಎಂಬ ಒಂದು 'ಯಃಕಶ್ಚಿತ್ ಕ್ರಿಮಿ' ಮಾಡುತ್ತಿರುವ ಅನಾಹುತ, ಹುಟ್ಟಿಸಿರುವ ಭೀತಿಯು ನಮ್ಮ ಬದುಕಿನ ಕ್ರಮಗಳನ್ನು ಬದಲಿಸಿಕೊಂಡು ವೇಗವನ್ನು ತಗ್ಗಿಸಿಕೊಳ್ಳಲು ಸೂಚಿಸುತ್ತಿರುವಂತಿದೆ. ಆದರೆ ಪ್ರಕೃತಿಯೇ ಬಹುಕಾಲದಿಂದ ಧ್ವನಿಸುತ್ತಿರುವ, ದಾರ್ಶನಿಕರೂ, ಪರಿಸರ ವಿಜ್ಞಾನಿಗಳೂ ಬಹುಕಾಲದಿಂದ ಹೇಳುತ್ತಿರುವ ಮಾತುಗಳನ್ನು ಆಲಿಸಲಾಗದೆ ಸರ್ವಜ್ಞಗರ್ವದಿಂದ ಬೀಗುತ್ತಿರುವ ನಾಗರಿಕ ಮಾನವ ಈ ಸೂಚನೆಯ ಮರ್ಮವನ್ನು ಅರಿತಾನೆಯೇ ಎನ್ನುವ ಪ್ರಶ್ನೆಗಳ ಸುತ್ತ ವಿವೇಚನೆ ನಡೆಸಿರುವ ಲೇಖನವಿದು.-ಸಂ.**

ರೇಖಾಚಿತ್ರ: ಗುಜ್ಜಾರ್

**ಒಂ**ದು ಹಿತವಾದ ವಸಂತಕಾಲದ ದಿನ. ಅಕಾಲಿಕ ಮಳೆ, ಕಾಲ ನಿಶ್ಚಲವಾಗಿ ನಿಂತಿದೆ. ಸೀಲಿಂಗ್ ಫ್ಯಾನ್‌ಗಳು ಛಳಿಗಾಲದ ತಾಟಸ್ತ್ಯದಿಂದ ನಿಧಾನವಾಗಿ ರೆಕ್ಕೆ ಬಿಚ್ಚಿಕೊಳ್ಳುತ್ತಿವೆ. ನಾವಾದರೋ ಗೃಹಬಂಧನದಲ್ಲಿದ್ದೇವೆ. ಕಿವಿಗಳನ್ನು ನಿಮಿರಿಸಿ ಅದರ ತಾರ್ಕಿಕ ಅಂತ್ಯವೊಂದರ ಸದ್ದಿಗಾಗಿ-ಅದು ಅಂತ್ಯಗೊಳ್ಳುವುದೇ ಆದರೆ- ಕಾಯುತ್ತಾ ಇದ್ದೇವೆ. ಈ ಕಾಲದ ಆಚೆಗಿನ ಲೋಕದಲ್ಲಿ, ನಾವೆಲ್ಲರೂ, "ನಮ್ಮ ಹಿತಕ್ಕಾಗಿ" ಮನೆಯೊಳಗೆ ಕೂರಿಸಲ್ಪಟ್ಟಿರುವಾಗ, ಮನುಕುಲವೇ ನಿಲುಗಡೆ ಸೂಚಕ ಕೆಂಪು ದೀಪದ ಕಡೆಗೆ ಧಾವಿಸುತ್ತಿರುವಾಗ, ಇದ್ದಕ್ಕಿದ್ದಂತೆ ಬದಲಾವಣೆಯ ಕ್ಷಣವೊಂದು ಧುತ್ತನೆ ಬಂದು ಬ್ರೇಕನ್ನು ತುಳಿಯುತ್ತದೆ. ಹುಚ್ಚಾಟಕ್ಕೆ ಒಂದು ತಡೆ ಬಂದು, ಬಚಾವಾಗುವ ಅವಕಾಶವೊಂದು ಭೂಗ್ರಹಕ್ಕೆ ದೊರೆಯುವ ದೃಶ್ಯವನ್ನು ನಾನು ಬಹಳ ದಿನಗಳಿಂದಲೂ ಕಲ್ಪಿಸಿಕೊಳ್ಳುತ್ತಿದ್ದೇನೆ.

ಮುಕ್ತಾಯದ ಆಟ ಆರಂಭವಾಗುತ್ತಿರುವ ಸೂಚನೆಗಳು ಇದ್ದವು, ಅವನ್ನು ಗಮನಿಸುವಷ್ಟು ವ್ಯವಧಾನವಿದ್ದವರಿಗೆ, ಹವಾಮಾನ ವಿಜ್ಞಾನಿಗಳ ನಂಬಿಕೆಗಳನ್ನು ಅರಿಯಲಾಗದವರಿಗೆ ತಿಳಿಹೇಳಬಲ್ಲ ಹದಿಹರೆಯದ ಕಾರ್ಯಕರ್ತರ ಪಡೆಯೊಂದೂ ನಿರ್ಮಾಣಗೊಂಡಿತ್ತು. ನಾವು ವೇಗವನ್ನು ಕಡಿತಗೊಳಿಸಬೇಕು, ಕೆಲವರನ್ನು ಅಸಾಧ್ಯ ಮತ್ತು ಅಸಹ್ಯಕರ ಶ್ರೀಮಂತರನ್ನಾಗಿಸಿ ನಮ್ಮ ಭೂಗ್ರಹವನ್ನೇ ನಾಶಮಾಡುವಂತಹ ವ್ಯವಸ್ಥೆಯನ್ನು ತ್ಯಜಿಸಿ, ಹೊಸ ಜೀವನ ವಿಧಾನಗಳಿಗೆ ಬದಲಾಗಬೇಕು ಎಂಬುದನ್ನು ಹೇಳುವ ಸಾಕಷ್ಟು ಮುನ್ಸೂಚನೆಗಳಿದ್ದವು. ಆದರೆ ನಾವು ಒಂದು ಯಶಸ್ಸಿನ ಉನ್ಮಾದದ ದಾರಿಯಲ್ಲಿದ್ದೆವು, ಸೋಲಲು ತಯಾರಿಲ್ಲದ ಮಾರಣಾಂತಿಕ ಆಟದಲ್ಲಿ ತೊಡಗಿದ್ದೆವು. ಎದುರಿನಿಂದ ನುಗ್ಗಿ ಬರುತ್ತಿರುವ ಕಾರಿಗೆ ನೇರವಾಗಿ ನಮ್ಮ ಹೆಡ್‌ಲೈಟನ್ನು ತಿರುಗಿಸಿ ಆಕ್ಸಿಲರೇಟರನ್ನು ಪೂರ್ಣ ಒತ್ತಿದ್ದೆವು. ಎದುರಾಳಿಯು ಮೊದಲು ಜಾಗ ಬಿಟ್ಟುಕೊಡುತ್ತಾನೆ ನಾವು ಗೆಲ್ಲುತ್ತೇವೆ ಎಂದು ಭಾವಿಸಿದ್ದೆವು.

ಅಗತ್ಯವಿದ್ದ ಏಟೊಂದನ್ನು ಕೊಡಬಲ್ಲ ಏಕೈಕ ವಸ್ತು ಕಣ್ಣು ಮಿಟುಕಿಸುವಷ್ಟರಲ್ಲಿ ಭಯಾನಕ ರೋಗವನ್ನು ತಂದೊಡ್ಡಬಲ್ಲ ಒಂದು ಸೂಕ್ಷ್ಮಾಣುವಾಗಿತ್ತು. ಏಕೆಂದರೆ, ಮನುಷ್ಯರು ತಮ್ಮಷ್ಟಕ್ಕೇ ಬಿಟ್ಟರೆ ಆಲಸ್ಯದಿಂದಾಗಿ, ಮೇಲಕ್ಕೆದ್ದು ಮಾಡಬೇಕಿರುವ ಕಾರ್ಯವನ್ನು ಮಾಡುವುದಿಲ್ಲ. ನಾವು ಸುಮ್ಮನೆ ಕಾಯುತ್ತಾ ಕುಳಿತರೆ ಈ ಕಾಯುವ ದೀರ್ಘ ಕಾಲದಲ್ಲಿ ಪ್ರಕೃತಿಯೇ ಎದ್ದು ಕ್ರಿಯಾಶೀಲವಾಗುತ್ತದೆ. ಕ್ಷಿಪ್ರವಾಗಿ ಯಾವ ನೆದರೂ ಇಲ್ಲದೆ ನಮ್ಮನ್ನು ನಿಷ್ಕರುಣೆಯಿಂದ ಏಂಗಡಿಸಿಬಿಡುತ್ತದೆ. ಆಗ ಸಾಮಾನ್ಯವಾಗಿ ತೊಂದರೆಗೆ ಒಳಗಾಗುವವರು ಬಡವರೇ. ಆದರೆ ಈ ಸಲ ಆಘಾತಕ್ಕೆ ಗುರಿಯಾಗಿರುವವರು ವಿಮಾನಗಳಲ್ಲಿ ತಿರುಗಾಡುವ ದೊಡ್ಡ ಬಳಕೆದಾರರು. ಈ ಹೊಸ ವೈರಸ್ ಜಗತ್ತಿನ ಅತಿ ದೊಡ್ಡ ಕೈಗಾರಿಕಾ ವ್ಯವಸ್ಥೆಯ ಕೇಂದ್ರದಲ್ಲೇ ಹುಟ್ಟಿ ವುಹಾನ್ ನಗರದ ಜೊತೆ ದೈನಂದಿನ ಸಂಪರ್ಕದಲ್ಲಿದ್ದ ಸ್ಥಳಗಳಿಗೆ ಹರಡಿತು. ಡೇವಿಡ್ ಕಮ್ಮೆನ್, ೨೦೧೨ ರಲ್ಲಿ ಪ್ರಕಟವಾದ ತಮ್ಮ 'ತುಳುಕಿ ಚೆಲ್ಲಾಟ: ಪ್ರಾಣಿಗಳ ಸೋಂಕು ಮತ್ತು ಮುಂದಿನ ಮಾನವ ಸಾಂಕ್ರಾಮಿಕ ರೋಗ' (spillover: animal infections and the next human pandemic) ಎಂಬ ಪುಸ್ತಕದಲ್ಲಿ ಇಂತಹ ಸೂಕ್ಷ್ಮಾಣುವೊಂದು ಬರುವ ಸಾಧ್ಯತೆಯನ್ನು ಕಂಡಿದ್ದರು. ನಾವು ಶೀಘ್ರದಲ್ಲೇ ಒಂದು ವೈರಸ್‌ನೊಂದಿಗೆ ಸೆಣಸಬೇಕಾಗಬಹುದು ಮತ್ತು ಅದು ಬಹುತೇಕ ಒಂದು ಬಾವಲಿಯ ಮೂಲಕ ಬರುವುದು, ಅದರ ವಾಸಸ್ಥಾನವನ್ನು ನಾವು ನಾಶ ಮಾಡಿಬಿಟ್ಟಿದ್ದೇವೆ ಎಂದು ಅವರು ಖಚಿತವಾಗಿ ನುಡಿದಿದ್ದರು.

ಆದರೆ ಅದರೊಂದಿಗೆ ಬಂದಿರುವ ಭೀತಿಯಿಂದ ಮಿಕ್ಕೆಲ್ಲವೂ ಮರೆಯಾಗಿ ವೈರಸ್ ಮಾತ್ರವೇ ಗಮನಕ್ಕೆ ಒಳಗಾಗಿದೆ. ಚೀನಾ ಇಟಲಿ ಮತ್ತು ಈಗ ಇರಾನ್ (ಮತ್ತು ಅಮೆರಿಕಾ) ದೇಶಗಳು ಭಾರಿ ಪ್ರಮಾಣದ ಸಾವುಗಳಿಂದ ಹಾನಿಗೊಳಗಾಗಿವೆ, ಜಗತ್ತಿನಾದ್ಯಂತ ಜನರು ಏಕಾಂತಕ್ಕೆ ದೂಡಲ್ಪಟ್ಟಿದ್ದಾರೆ. ಇದರಿಂದ ಉಂಟಾಗಿರುವ ತಕ್ಷಣದ ಪರಿಣಾಮವೆಂದರೆ ಮಾನವರ ಎಂತಹ ಸಂಕಲ್ಪವೂ ಈವರೆಗೆ ಸಾಧಿಸಲಾಗದ ರೀತಿಯಲ್ಲಿ ವಾತಾವರಣದ ಮಾಲಿನ್ಯವು ತಾತ್ಕಾಲಿಕವಾಗಿಯಾದರೂ ತಡೆಹಿಡಿಯಲ್ಪಟ್ಟಿದೆ. ಚೀನಾದ ಕಲುಷಿತ ವಾತಾವರಣ ತುಸು ಸ್ವಚ್ಛಗೊಂಡಿದೆ. ವಸ್ತು ವಿನ್ಯಾಸಕಿ ಮತ್ತು ಮುನ್ಸೂಚನಾ ಶಾಸ್ತ್ರಜ್ಞೆ ಲಿ ಎಡೆಲ್ಕೂರ್ಟ್ ಈ ಕಾಲವನ್ನು "ಬಳಕೆದಾರಿಕೆಯ ಕ್ವಾರಂಟೈನ್" ಎಂದು ಕರೆದಿದ್ದಾರೆ. ಆಕೆಯ ಅಂದಾಜಿನಂತೆ ಇದು ಹಿಂದೆಂದೂ ಕಂಡಿರದ ಪ್ರಮಾಣದ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುವುದು. ಇದು ಮನುಷ್ಯಕುಲ ತನ್ನ ಮೌಲ್ಯವ್ಯವಸ್ಥೆಯನ್ನು ಮರುರೂಪಿಸಿಕೊಳ್ಳುವಂತೆ ಮಾಡುವುದು. ಇರಬಹುದು; ಆದರೆ ನಾವೀಗ ನೋಡುತ್ತಿರುವುದು ವಿಭಿನ್ನ ಕಾರ್ಯಸೂಚಿಯ ಎರಡು ವಿರುದ್ಧ ಮುಖಗಳು ಮುಖಾಮುಖಿಯಾಗಿರುವುದನ್ನು: ಇದರಲ್ಲಿ ದೊಡ್ಡ ಪಕ್ಷ, ಶಸ್ತ್ರಸಜ್ಜಿತರೂ, ಹಣವುಳ್ಳವರೂ ಆಗಿದ್ದು ಇನ್ನೂ ಹೆಚ್ಚು ಬಲವಾಗಿ ನೆಲೆಯೂರಬಯಸುವವರದ್ದು ಮತ್ತು ಎರಡನೆಯದು ಇನ್ನೂ ತುಸು ಉತ್ತಮ ಪ್ರಪಂಚವನ್ನು ಬಯಸುವ, ರಕ್ಷಣೆಯಿಲ್ಲದ, ಅಸಂಘಟಿತ - ಸಾಮಾನ್ಯ ಜನರದ್ದು.

ನಾನು ಇದನ್ನು ಬರೆಯುತ್ತಿರುವ ಹೊತ್ತಿನಲ್ಲಿ ಆಗಬೇಕಾದದ್ದು ಅರ್ಧದಷ್ಟೆ ಆಗಿದೆ. ನಾವು ಈ ಸಾಂಕ್ರಾಮಿಕ ರೋಗವನ್ನು ಕಂಡು ವಾರಗಳೇ ಕಳೆದಿವೆ. ಆದರೂ ಚೀನಾದವರು ಇಟಾಲಿಯನ್ನರು ಇರಾನ್‌ನವರು ಅನುಭವಿಸಿದಂತಹ ವಿಪತ್ತನ್ನು ಭಾರತವಿನ್ನೂ ಕಂಡಿಲ್ಲ. ಪ್ರತಿದಿನವೂ ಭಯ ಹುಟ್ಟಿಸುವ ರೀತಿಯ ವರದಿಗಳು ಸೂಚಿಸುತ್ತಿರುವ ಮಟ್ಟದಲ್ಲಿ ಆಸ್ಪತ್ರೆಗಳಿಗೆ ಬರುವ ಜನರ ಸಂಖ್ಯೆಯಲ್ಲಿ ಏರಿಕೆಯಾಗಿಲ್ಲ. ಬಹುಶಃ ನಾವು ಅದೃಷ್ಟವಂತರಿರಬಹುದು, ನಾವದರಿಂದ ತಪ್ಪಿಸಿಕೊಳ್ಳಬಹುದು. ಆದರೆ ನಮಗೆ ಅದು ಖಚಿತವಾಗಿ ತಿಳಿಯುವವರೆಗೆ, ತನ್ನ ಆಗಮನಕ್ಕಾಗಿ ಸಮಯ ಕಾಯುತ್ತಿರುವ ಮತ್ತು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲೂಬಹುದಾದ ಒಂದು ಸುನಾಮಿಗಾಗಿ ನಾವು ತಯಾರಾಗುತ್ತಿದ್ದೇವೆನ್ನಬಹುದು.

ಯಾರಿಗೆ ಗೊತ್ತು, ನಾವು ಈಗಾಗಲೇ ಬಹು ಕಾಲದಿಂದ ಈ ವೈರಸ್ಸಿನ ಜೊತೆಗೇ ಬದುಕಿರಬಹುದು. ಭಾರತವು ಚೀನಾ ಇಟಲಿ ಅಥವಾ ಇತರೆ ಯೂರೋಪಿನ ವೈರಸ್ ಪೀಡಿತ ಯಾವುದೇ ದೇಶಗಳ ಜೊತೆ ಸಂಪರ್ಕವಿಲ್ಲದೇ ಬಹು ಕಾಲವನ್ನೇನೂ ನಾವು ಕಳೆದಿಲ್ಲ. ನಮ್ಮಲ್ಲಿ ಹಲವರು ಜನವರಿ ಫೆಬ್ರವರಿ ತಿಂಗಳಲ್ಲಿ ೧೦ ದಿನಗಳ ಭಯಂಕರ ಫ್ಲೂನಿಂದ ಪೀಡಿತರಾದುದು ನಮ್ಮ ಜೀವನದ ಕೆಟ್ಟ ಬಹು ಕೆಟ್ಟ ಕಾಲವೆನ್ನಬಹುದು. ಇದರಿಂದ ನಮ್ಮ ಹಿರಿಯ ವಯಸ್ಕ ಬಂಧುಗಳು ಎಷ್ಟೋ ಜನ ನ್ಯುಮೋನಿಯಾಕ್ಕೆ ತುತ್ತಾಗಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ಸೇರಬೇಕಾಯಿತು. ನಮ್ಮಲ್ಲಿ ಎಷ್ಟೋ ಜನಕ್ಕೆ ಈ ಖಾಯಿಲೆ ಬಂದೂ ಇರಬಹುದು. ಅದು ತಾನು ಯಾರು ಎಂಬುದನ್ನು ತೋರಿಸಿಕೊಳ್ಳದೆ ಹೋಗಿದ್ದರಿಂದ ನಾವು ಅದೊಂದು ಯಃಕಶ್ಚಿತ್ ಕ್ರಿಮಿ ಎಂದುಕೊಂಡಿರಬಹುದು. ಭಾರತದ ೧೩೦ ಕೋಟಿ ಜನಸಂಖ್ಯೆಯಲ್ಲಿ ಪ್ರತಿ ದಿನ ೨೫೦೦೦ ಜನ ಸಾಯುತ್ತಲೇ ಇರುತ್ತಾರೆ, ೧೦೦೦ ಕ್ಕೂ ಹೆಚ್ಚು ಜನ (೨೦೧೮ ರಲ್ಲಿ ೪ ಲಕ್ಷ) ಕ್ಷಯದಿಂದ ಸಾಯುತ್ತಾರೆ. ಕ್ಷಯಕ್ಕೆ ನಮ್ಮಲ್ಲಿ ಔಷಧಿ ಇದೆ, ಆದರೂ ಅದನ್ನು ನಿರ್ನಾಮ ಮಾಡಿಲ್ಲ. ಏಕೆಂದರೆ ಅದು ಬಾಧಿಸುವುದು ಬಡವರನ್ನು ಮಾತ್ರ. ಪ್ರತಿದಿನ ಇತರೆ ಒಂದು ಸಾವಿರ ಮಂದಿ ಭಾರತೀಯರು, ಇವರಲ್ಲಿ ಬಹುತೇಕ ಮಕ್ಕಳು, ಉಸಿರಾಟದ ತೊಂದರೆಯಿಂದ ಸಾವನ್ನಪ್ಪುತ್ತಿದ್ದಾರೆ ಮತ್ತು ಮಲೇರಿಯಾದಿಂದ ೫೦೦ ಜನ ಸಾವನ್ನಪ್ಪುತ್ತಿದ್ದಾರೆ. ಆದರೆ ನಮ್ಮಲ್ಲಿ ಬಹಳಷ್ಟು ಜನ ಕೋವಿಡ್-೧೯ ನಂತಹ ಕೆಟ್ಟ ವೈರಸ್ ಸೋಂಕಿನಿಂದಲೂ ಬಚಾವಾಗುತ್ತೇವೆ. ನಮ್ಮ ಜೀವನಗಳಲ್ಲಿ ಇದನ್ನೊಂದು ಪ್ರಮುಖ ಮೈಲುಗಲ್ಲಾಗಿ ಪರಿಗಣಿಸಿ ನಮ್ಮ ಅನುಭವಗಳನ್ನು ದಾಖಲಿಸಲು ಬದುಕುಳಿಯುತ್ತೇವೆ. ಆದರೂ ಹಿಂದೆಂದೂ ಕಾಣದಂತಹ ಭೀತಿ ಈಗ ಏಕೆ? ತಪ್ಪು ಮಾಡಿದ ಶಾಲಾ ಮಕ್ಕಳನ್ನು ಶಿಕ್ಷಿಸುವಂತೆ, ಕೈಯಲ್ಲಿ ಲಾಠಿ ಹಿಡಿದ ಪೊಲೀಸರು ಅದೃಷ್ಟಹೀನ ವಲಸೆ ಕೆಲಸಗಾರರನ್ನು ಕಪ್ಪೆಗಳ ಥರ ಕುಪ್ಪಳಿಸುತ್ತಾ ಓಡುವಂತೆ ಮಾಡುವ ದೃಶ್ಯಗಳು

(೯ನೇ ಪುಟಕ್ಕೆ

ಪ್ರಚಲಿತ-೩

# ಕೊರೊನಾ ತಿಗಣೆಗೆ ಲಾಕ್‌ಡೌನ್ ತುಪಾಕಿ

## ಸುದ್ದಿಮಾರಿಯ ರುದ್ರನರ್ತನವನ್ನು ನೋಡುತ್ತ ನಾವು ನೆಗಡಿ ಬಂತೆಂದು ಮೂಗನ್ನೇ ಕೊಯ್ದುಕೊಳ್ಳುತ್ತಿದ್ದೇವೆಯೆ?

-ನಾಗೇಶ ಹೆಗಡೆ



(ರೇಖಾಚಿತ್ರ: ಗುಜ್ಜಾರ್)

**ಜಗತ್ತಿನಲ್ಲಿ ಇಂದು ಕೊರೋನಾ ಕುರಿತ ಸುದ್ದಿ-ಚರ್ಚೆಗಳ ಹೊರತಾಗಿ ಬೇರೇನೂ ನಡೆಯುತ್ತಿರುವಂತೆ ತೋರುತ್ತಿಲ್ಲ. ಇದು ನಿಜವಾಗಿ ಈ ವೈರಸ್‌ನ ಭಯಾನಕತೆ ಹುಟ್ಟಿಸಿರುವ ಭೀತಿಯ ಪರಿಣಾಮವೇ? ಅಥವಾ ಆ ವೈರಸ್‌ನ ಭಯಾನಕತೆಯೇ? ಯಾರೋ ತಮ್ಮದೇ ಉದ್ದೇಶಗಳಿಗಾಗಿ ಹುಟ್ಟು ಹಾಕಿದ ಕಟ್ಟು ಕತೆಯೇ? ಇಂದಿನ ಕೊರೋನಾ ಮಹಾಗಾಥೆಯನ್ನು ವಸ್ತುನಿಷ್ಠವಾಗಿ ಪರಿಶೀಲಿಸುತ್ತಾ ಕೆಲವು ಅಪ್ರಿಯ ಪ್ರಶ್ನೆಗಳನ್ನು ಕೇಳುವ ಒಂದು ಪರ್ಯಾಯ ನೋಟ ಇಲ್ಲಿದೆ.**-ಸಂ.

**ಮೊ**ದಲಿಗೆ ಒಂದು ಸ್ವಾರಸ್ಯದ ಸಂಗತಿಯನ್ನು ನೋಡೋಣ:

ಎರಡು ವರ್ಷಗಳ ಹಿಂದೆ ವಿಶ್ವ ಸ್ವಾಸ್ಥ್ಯ ಸಂಸ್ಥೆ ಒಂದು ಸಮೀಕ್ಷೆಯನ್ನು ನಡೆಸಿತ್ತು: ಉಗ್ರ ಸಾಂಕ್ರಾಮಿಕ ರೋಗವೇನಾದರೂ ಅನಿರೀಕ್ಷಿತವಾಗಿ ಹಬ್ಬತೊಡಗಿದರೆ ಅದನ್ನು ಎದುರಿಸುವ ಸಿದ್ಧತೆ ಯಾವ ರಾಷ್ಟ್ರಗಳಲ್ಲಿ ಹೇಗಿದೆ ಎಂಬುದರ ಸಮೀಕ್ಷೆ. ಅದರ ಪ್ರಕಾರ ಅಮೆರಿಕವೇ ಇತರೆಲ್ಲ ದೇಶಗಳನ್ನು ಮೀರಿ ನಂಬರ್ ೧ ಸ್ಥಾನದಲ್ಲಿತ್ತು. ಮೊನ್ನೆ ಜನವರಿ-ಫೆಬ್ರುವರಿ ತಿಂಗಳವರೆಗೂ ಅದು ಮೊದಲ ಸ್ಥಾನದಲ್ಲೇ ಇತ್ತು.

ಈಗಿನ ಅಲ್ಲಿನ ವಾಸ್ತವ ಏನೆಂಬುದು ನಮಗೆ ಗೊತ್ತೇ ಇದೆ. ಅಮೆರಿಕದಲ್ಲಿ ಈಗ ಪ್ರತಿ ದಿನವೂ ಒಂದೊಂದು ೯/೧೧ (ಅಲ್ಖೈದಾ ದಾಳಿಯಂಥ ದುರಂತ) ಆಗುತ್ತಿದೆ. ಕೊರೊನಾ ವೈರಸ್ಸಿನಿಂದಾಗಿ ಅತಿ ಹೆಚ್ಚು (೫೨ ಸಾವಿರ) ಜನರು ಅಮೆರಿಕದಲ್ಲೇ ಗತಿಸಿದ್ದಾರೆ. "ಅಮೆರಿಕಾ ಫಸ್ಟ್!" ಎಂದು ಆಗಾಗ ಗರ್ಜಿಸುತ್ತಿದ್ದ ಟ್ರಂಪ್ ಈಗ ಸೋತು ಸುಣ್ಣವಾಗಿದ್ದಾರೆ. ಕೋವಿಡ್-೧೯ ಕಾಯಿಲೆಯಿಂದಾಗಿ ತೀವ್ರ ಹಾನಿಗೊಳಗಾದ, ತೀರ ಅವಮಾನಿತಗೊಂಡ ರಾಷ್ಟ್ರಗಳ ಪೈಕಿ 'ಅಮೆರಿಕಾ ಫಸ್ಟ್' ಎಂಬುದು ಸಾಬೀತಾಗಿದೆ.

ಈ ವೈರಾಣು ಎಲ್ಲರಿಗೂ ಚಳ್ಳೆಹಣ್ಣು ತಿನ್ನಿಸ್ತಾ ಇದೆ. ನಾಲ್ಕು ತಿಂಗಳಾಗುತ್ತ ಬಂತು ಇದು ಹಾವಳಿ ಎಬ್ಬಿಸುತ್ತ ಬಂದು. ಈಗಲೂ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಬ್ಬಿಸುತ್ತಲೇ ಬಂದಿದೆ. ವ್ಯಾಕ್ಸೀನ್ ಯಾವಾಗ ತಯಾರಾಗುತ್ತದೆ? ಗೊತ್ತಿಲ್ಲ. ಬಿಸಿಜಿ ಹಾಕಿಸಿಕೊಂಡಿದ್ದವರು ಬಚಾವಾಗುತ್ತಾರೆಯೆ? ಗೊತ್ತಿಲ್ಲ. ಹೈಡ್ರಾಕ್ಸಿ ಕ್ಲೋರೊಕ್ವಿನ್ ಮಾತ್ರೆ ಸೇವಿಸಿದರೆ ಕಾಯಿಲೆ ವಾಸಿಯಾದೀತೆ? ಗೊತ್ತಿಲ್ಲ. ವಾಸಿಯಾದವರ ತುಸು ರಕ್ತವನ್ನು ನಮ್ಮ ದೇಹಕ್ಕೆ ಸೇರಿಸಿಕೊಂಡರೆ ಕಾಯಿಲೆಯನ್ನು ದೂರ ಇಡಬಹುದೆ? ಗೊತ್ತಿಲ್ಲ. ಚಳಿದೇಶಗಳಲ್ಲಿ ಮಾತ್ರ ಇದರ ಪ್ರಭಾವ ಪ್ರಖರವೆ? ಗೊತ್ತಿಲ್ಲ. ದಕ್ಷಿಣ ಏಷ್ಯದ ಸಾರ್ಕ್ ದೇಶಗಳಲ್ಲಿ ಇದು ಅಷ್ಟೇನೂ ಉಗ್ರವಾಗದಿರಲು ಇಲ್ಲಿನ ಸೆಕೆ ಕಾರಣವೆ? ಗೊತ್ತಿಲ್ಲ. ಅಥವಾ ಖಾರಾಮಸಾಲೆ ಕಾರಣವೆ? ಗೊತ್ತಿಲ್ಲ. ಮಾಲಿನ್ಯದಲ್ಲೇ ಮುಳುಗೇಳುವ ಜನರ ಮೇಲೆ ಅದರ ಪ್ರಭಾವ ಕಡಿಮೆಯೆ? ಗೊತ್ತಿಲ್ಲ. ಗಂಡಸರ ಮೇಲೆಯೇ ಇದು ಹೆಚ್ಚಾಗಿ ದಾಳಿ ಮಾಡಲು ಕಾರಣವೇನು ಗೊತ್ತೆ? ಗೊತ್ತಿಲ್ಲ. ಒಮ್ಮೆ ದಾಳಿ ಮಾಡಿ ಹೋದ ನಂತರ ಇದು ಮರುದಾಳಿಗೆ ಬಂದೀತೆ? ಗೊತ್ತಿಲ್ಲ. ವ್ಯಾಕ್ಸೀನ್ ತಯಾರಾಗಿ ಬಂದಮೇಲೆ ಅದನ್ನು ಹಾಕಿಸಿಕೊಂಡವರು ಜೀವನಪೂರ್ತಿ ಸುರಕ್ಷಿತವೆ? ಅದೂ ಗೊತ್ತಿಲ್ಲ.

ಮನುಷ್ಯ ಅದೆಷ್ಟು ಹಿಂದಿದ್ದಾನೆ ನೋಡಿ. ಮೇಲ್ನೋಟಕ್ಕೆ ನಾವು ಅತ್ಯಂತ ಪ್ರಬುದ್ಧರಾಗಿದ್ದೇವೆ. ಸಿಡುಬು, ಪ್ಲೇಗ್, ಪೋಲಿಯೋಗಳನ್ನು ಜೈಸಿದ್ದೇವೆ. ಸುನಾಮಿ, ಚಂಡಮಾರುತ ಬಂದರೂ ಬಚಾವಾಗುತ್ತಿದ್ದೇವೆ. ಪರಮಾಣು ಶಸ್ತ್ರಾಸ್ತ್ರಗಳನ್ನು ಹತ್ತಿಕ್ಕಿದ್ದೇವೆ. ಅನ್ಯಗ್ರಹಗಳ ಜೀವಿಗಳು ದಾಳಿಗೆ ಬಂದರೂ ಎದುರಿಸಲು ಸಜ್ಜಾಗಿದ್ದೇವೆ. ಏನಿದ್ದರೇನು, ಯಃಕಶ್ಚಿತ ಬಾವಲಿಯ ದೇಹದಿಂದ ಹೊರಟ ಅರೆಜೀವಿಯೊಂದು ನಮ್ಮ ಎಲ್ಲ ಪಾಂಡಿತ್ಯವನ್ನೂ ಅದುಮಿ ಹಾಕಿದೆ. ನಮ್ಮ ಎಲ್ಲ ಇದುವರೆಗಿನ ಸಾಧನೆಗಳೂ ಯಃಕಶ್ಚಿತವೆಂದು ಸಾರಿದೆ. ಎಲ್ಲವೂ ಗೊತ್ತಿದೆ ಎಂದು ಬೀಗುತ್ತಿದ್ದವರಿಗೆ 'ನಿಮಗೆ ಏನೂ ಗೊತ್ತಿಲ್ಲ' ಎಂದು ಕೊರೊನಾ ವೈರಾಣು ಗಹಗಹಿಸಿ ಭೂತನರ್ತನ ಮಾಡುತ್ತಿರುವಂತೆ ಕಾಣುತ್ತಿದೆ. ಹಾಗೆ ನೋಡಿದರೆ, ಇತರ ವೈರಸ್ಸಿಗೆ ಹೋಲಿಸಿದರೆ ಇದು ತೀರ ದುರ್ಬಲ. ಇದು ತೀರ ದುರ್ಬಲರನ್ನು ಮಾತ್ರ ಕೊಲ್ಲುತ್ತದೆ.

### ಕಡಿವಾಣ ಹಾಕಹೊರಟವರಿಗೆ ಮುಖವಾಡ ಹಾಕಿತು

೨೦೦೩ರಲ್ಲಿ ಇದೇ ಸಾರ್ಸ್ ವೈರಾಣು ತನ್ನ ಮೊದಲ ಅವತಾರವನ್ನು ತೋರಿಸಿದಾಗ ೨೪ ದೇಶಗಳಲ್ಲಿ ಇದು ಭಯದ ಅಲೆಯನ್ನು ಹಬ್ಬಿಸಿತ್ತು. ಬೀಜಿಂಗ್‌ನ ಎಲ್ಲರಿಗೂ ಮುಖವಾಡ ತೊಡಿಸಿತ್ತು. ವೈದ್ಯಲೋಕವನ್ನು ಎಲ್ಲೆಲ್ಲೂ ಬಡಿದೆಬ್ಬಿಸಿತ್ತು, ಸರಕಾರಗಳನ್ನು ಎಚ್ಚರಿಸಿತ್ತು, ಪಾಠ ಕಲಿತೆವು; ಇನ್ನು ಮುಂದೆ ಇಂಥ ವೈರಾಣುವಿನ ಅನಿರೀಕ್ಷಿತ ದಾಳಿಗೆ ಮುನ್ನವೇ ಎಲ್ಲ ವ್ಯವಸ್ಥೆಗಳೂ ಸಜ್ಜಾಗಿರುತ್ತವೆ ಎಂದು ತಜ್ಞರೆಲ್ಲ ಹೇಳಿದ್ದರು. ಅದರ ನಂತರ ಹಕ್ಕಿಜ್ವರ, ಹಂದಿಜ್ವರ, ಎಬೊಲಾ, ನಿಫಾ ಎಲ್ಲ ಬಂದವು. ಅವುಗಳಿಗೆಲ್ಲ ಅಲ್ಲಲ್ಲೇ ನಿಯಂತ್ರಣ ಹೇರಿದೆವು, ವೈರಾಣುಗಳಿಗೆ ದಿಗ್ಬಂಧನ ಹಾಕುವ ಕಲೆ ನಮಗೆ ಕರಗತವಾಯಿತು ಎಂದುಕೊಂಡೆವು. ಈಗ ನೋಡಿದರೆ ನಾವು ಸಾರ್ಸ್‌ಗಿಂತ ಹಿಂದಕ್ಕೆ ಹೋದಂತಿದೆ. ಇಡೀ ಮನುಕುಲವೇ ತನಗೆ ತಾನೇ ದಿಗ್ಬಂಧನ ಹಾಕಿಕೊಂಡು ಕೂತಿದೆ. ವೈರಾಣುವಿಗೆ ಕಡಿವಾಣ ಹಾಕಬೇಕಿದ್ದವರು ತಮಗೆ ತಾವೇ ಮುಖವಾಡ ಹಾಕಿಕೊಂಡಿದ್ದಾರೆ. ಜನಸಾಮಾನ್ಯರ ಕತೆ ಹೇಗೂ ಇರಲಿ, ಇಸ್ರೇಲೀ ಆರೋಗ್ಯ ಸಚಿವರನ್ನೂ ಬ್ರಿಟನ್ನಿನ ಪ್ರಧಾನ ಮಂತ್ರಿಯನ್ನೂ ಅದು ಆಸ್ಪತ್ರೆಗೆ ಕಳಿಸಿದೆ.

ಐದು ವರ್ಷಗಳ ಹಿಂದೆ, ಎಬೊಲಾ ವೈರಾಣು ೧೧,೯೦೨ ಜನರನ್ನು ಆಫ್ರಿಕದ ಮೂರು ದೇಶಗಳಲ್ಲಿ ಕೊಂದಾಗ ಬಿಲ್ ಗೇಟ್ಸ್ ನಮಗೆಲ್ಲ ಎಚ್ಚರಿಕೆ ಕೊಟ್ಟಿದ್ದ. ಪರಮಾಣು ಯುದ್ಧ ಸಂಭವಿಸಿದರೆ ಬದುಕಿ ಉಳಿಯಲೆಂದು ನಾವು ಬಂಕರ್ (ಭೂಗತ ಗೂಡು)ಗಳನ್ನು ಕಟ್ಟಿಕೊಂಡಿದ್ದೇವೆ. ಆದರೆ ಮುಂದಿನ ಜಾಗತಿಕ ದುರಂತ ಎಂದರೆ ಪರಮಾಣು ಸ್ಫೋಟ ಅಲ್ಲ, ವೈರಾಣು ಸ್ಫೋಟದಿಂದ ಆಗಲಿದೆ ಎಂದಿದ್ದ. ಅದಕ್ಕೆ ಕಾರಣ ಏನೆಂದರೆ ನಾವು ಅಣ್ವಸ್ತ್ರಗಳ ವಿರುದ್ಧ ನಮ್ಮನ್ನು ರಕ್ಷಿಸಿಕೊಳ್ಳಲೆಂದು ಭಾರಿ ಹಣವನ್ನು ಸುರಿದಿದ್ದೇವೆ. ಆದರೆ ಸಾಂಕ್ರಾಮಿಕ ರೋಗದಿಂದ ರಕ್ಷಣೆ ಪಡೆಯಲು ತೀರ ಕಡಿಮೆ ಹಣವನ್ನು ಹಾಕಿದ್ದೇವೆ ಎಂದು ವಿವರಿಸಿದ್ದ. "ನಾವು ಸಜ್ಜಾಗಿರಲು ಬೇಕಾದ ಎಲ್ಲ ಸವಲತ್ತುಗಳೂ ನಮ್ಮಲ್ಲಿವೆ; ವಿಜ್ಞಾನ-ತಂತ್ರಜ್ಞಾನದಲ್ಲಿ ಭಾರಿ ಸುಧಾರಣೆಗಳಾಗಿವೆ. ಉಪಗ್ರಹ ನಕ್ಷೆಗಳ ಮೂಲಕ ಸೆಲ್‌ಫೋನ್‌ಗಳ ಮೂಲಕ ತ್ವರಿತವಾಗಿ ಮಾಹಿತಿಯನ್ನು ಎಲ್ಲೆಡೆ ಹಂಚಲು ಸಾಧ್ಯವಿದೆ; ಈಗಲೇ ಸಿದ್ಧತೆ ಮಾಡಿಕೊಂಡರೆ ವೈರಾಣುಗಳನ್ನು ಗೆಲ್ಲಲು ಸಾಧ್ಯವಿದೆ" ಎಂತಲೂ ಹೇಳಿದ್ದ.

### ಮಹಾಮಾರಿಗಿಂತ ಸುದ್ದಿಮಾರಿಯದ್ದೇ ದೊಡ್ಡ ಸಮಸ್ಯೆ

ಆತ ಹೇಳಿದ್ದೆಲ್ಲ ಖರೆ. ಮುಂದಿನ ಬಾರಿ ವೈರಾಣು ಮಾರಿ ಹಬ್ಬಿದರೆ ಜಗತ್ತಿಗೆ ಮೂರು ಸಾವಿರ ಶತಕೋಟಿ(೩ ಟ್ರಿಲಿಯನ್) ಡಾಲರ್‌ನಷ್ಟು ಆರ್ಥಿಕ ನಷ್ಟವಾದೀತೆಂದು ಅಂದೇ ಎಚ್ಚರಿಸಿದ್ದು ಹೆಚ್ಚೂಕಡಿಮೆ ನಿಜವಾಗಿದೆ. ಅಮೆರಿಕವೊಂದೇ ತನಗೆ ಎರಡು ಟ್ರಿಲಿಯನ್ ಡಾಲರ್ ಹೊರೆ ಬೀಳಲಿದೆ ಎಂದು ಈಗ ಅಂದಾಜಿಸಿದೆ. ಬಿಲ್ ಗೇಟ್ಸ್ ಹೇಳಿದ ವಿಜ್ಞಾನ-ತಂತ್ರಜ್ಞಾನ ಪ್ರಗತಿಯೂ ಈ ಐದು ವರ್ಷಗಳಲ್ಲಿ ಅಗಾಧವಾಗಿದೆ. ಆದರೆ ಆತನ ನಿರೀಕ್ಷೆಯ ಸಂಪರ್ಕ ತಂತ್ರಜ್ಞಾನ ಮಾತ್ರ ಇಲ್ಲಿ ಉಲ್ಟಾ ಹೊಡೆದಿದೆ. ಮಹಾಮಾರಿಗಿಂತ ಸುದ್ದಿಮಾರಿಯೇ ದೊಡ್ಡ ಸಮಸ್ಯೆ ಎಂದು ವಿಶ್ವ ಸ್ವಾಸ್ಥ್ಯ ಸಂಸ್ಥೆಯ (ವಿಸ್ವಾಸಂ) ಅಧ್ಯಕ್ಷರು ಫೆಬ್ರುವರಿಯಲ್ಲಿ ಹೇಳಿದ್ದು ನಿಜವಾಗಿದೆ. ಈಗಿನ ಕಷ್ಟನಷ್ಟಗಳಿಗೆ ಸುದ್ದಿಮಾರಿಯೇ ಕಾರಣವೇನೋ ಎಂದು ತರ್ಕಿಸುವಂತಾಗಿದೆ. ಸಂಪರ್ಕ ತಂತ್ರಜ್ಞಾನದ ದುಷ್ಪರಿಣಾಮ ಹೇಗಿದೆ ಎಂದರೆ ವೈರಾಣುವಿನ ವಿಷಮತೆಗಿಂತ ಸಾಮಾಜಿಕ ವಿಷಮತೆಯೇ ಹೆಚ್ಚಿದಂತಿದೆ.

ಇದನ್ನು ತುಸು ಹುಷಾರಾಗಿ ನೋಡೋಣ. ಕೊರೊನಾ ವೈರಾಣು ಎಲ್ಲೆಲ್ಲಿ ಎಷ್ಟು ವೇಗವಾಗಿ ಹಬ್ಬಲಿದೆ, ಎಷ್ಟು ಜನರು ಬಲಿಯಾಗಬಹುದು ಎಂಬ ಅಂದಾಜನ್ನು ಎಪಿಡೆಮಿಯಾಲಜಿ (ರೋಗಪ್ರಸರಣ ಸಮೀಕ್ಷೆಯ) ತಜ್ಞರು ನಿರ್ಧರಿಸುತ್ತಾರೆ. ಅವರ ಅಂಕಿಅಂಶಗಳನ್ನು ಆಧರಿಸಿ ಏನೇನು ಪ್ರತಿಬಂಧಕ ಕ್ರಮ ಕೈಗೊಳ್ಳಬೇಕು ಎಂಬುದನ್ನು ಸರಕಾರಗಳು ನಿರ್ಧರಿಸುತ್ತವೆ. (ನೆನಪಿಡಿ: 'ಈ ಎಪಿಡೆಮಿಯಾಲಜಿ ತಜ್ಞರು ಮತ್ತು ದೂರ ಜಿಗಿತದ ಕ್ರೀಡಾಳುಗಳು ಸದಾ ಹಿಗ್ಗಿಸಿ ಹೇಳುತ್ತಾರೆ' ಎಂದು ಸ್ವೀಡಿಶ್ ಸಂಖ್ಯಾಶಾಸ್ತ್ರಜ್ಞ ಹಾನ್ಸ್ ರೋಸ್ಲಿಂಗ್ ಹೇಳಿದ್ದಾನೆ). 'ಭಾರತದಲ್ಲಿ ಈ ಮಹಾಮಾರಿಯ ಕಾರಣದಿಂದಾಗಿ ಅಂದಾಜು ೩೦ ರಿಂದ ೫೦ ಕೋಟಿ ಜನರು ಕಾಯಿಲೆ ಬೀಳಲಿದ್ದಾರೆ' ಎಂದು ಅಮೆರಿಕದ ಎಪಿಡೆಮಿಯಾಲಜಿ ತಜ್ಞರು ಎಚ್ಚರಿಸಿದ್ದಾರೆ. ಇದು ಅತಿರೇಕದ ಒಂದು ತುದಿಯಾದರೆ ಪುಣೆಯ ಸಶಸ್ತ್ರ ಬಲಗಳ ವೈದ್ಯಕೀಯ ಕಾಲೇಜಿನ ಎಪಿಡೆಮಿಯಾಲಜಿ ತಜ್ಞರ ಅಂದಾಜಿನ ಪ್ರಕಾರ ೩೦ ಲಕ್ಷ ಜನರು ಕೊರೊನಾ ಕಾಯಿಲೆ ಎದುರಿಸಬೇಕಾಗಬಹುದು. (ಈ ಲೆಕ್ಕವನ್ನು ಕೊಟ್ಟವರು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಮಂಡಳಿಯ ಸದಸ್ಯರಲ್ಲೊಬ್ಬರಾದ ಡಾ. ಅನಂತ ನಾಗೇಶ್ವರರಾವ್). ಅಂದರೆ, ಒಬ್ಬರ ಅಂದಾಜಿಗೂ ಇನ್ನೊಬ್ಬರ ಅಂದಾಜಿಗೂ ಅಜಗಜಾಂತರ ಅಲ್ಲ, ನೂರು ಪಟ್ಟು ಹೆಚ್ಚಿಗೆ ಇತ್ತು!

**ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆ?**

ಅಮೆರಿಕದವರ ಭಯಾನಕ ಅಂದಾಜನ್ನೇ ಜಗತ್ತು ಅಪ್ಪಿಕೊಂಡಿತು. ಅದನ್ನೇ ಆಧರಿಸಿ ಮಾಧ್ಯಮಗಳು ಹುಯಿಲೆಬ್ಬಿಸಿ, ಸರಕಾರವನ್ನೂ ವಿವಶಗೊಳಿಸಿ, ಗುಬ್ಬಿಯ ಮೇಲೆ ಲಾಕ್‌ಡೌನ್ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದಂತಾಗಿದೆಯೆ? ಅಥವಾ ನೆಗಡಿ ಬಂತೆಂದು ಮೂಗು ಕೊಯ್ದುಕೊಂಡಂತೆ ಆಯ್ತೆ? ಸರಕಾರದ ಈ ಅತ್ಯುಗ್ರ ಕ್ರಮದಿಂದಾಗಿ, ಕಾಯಿಲೆಯಿಂದ ಸಾಯುವವರಿಗಿಂತ ಹೆಚ್ಚಿನ ಸಂಖ್ಯೆಯ ಜನರು ಆರ್ಥಿಕ ಸಂಕಷ್ಟಗಳಿಂದಾಗಿ, ಮಾನಸಿಕ ವಿಹ್ವಲತೆಯಿಂದಾಗಿ ಸಾಯುವಂಥ ಪರಿಸ್ಥಿತಿ ಬಂದಿದೆಯೆ? ಯಾವ ತಜ್ಞರ ಅಂದಾಜು ಸರಿ ಇದ್ದೀತು, ಯಾವ ಕ್ರಮದಿಂದ ರಾಷ್ಟ್ರಕ್ಕೆ ನಷ್ಟ ಸಂಕಷ್ಟ ಹೆಚ್ಚಾದೀತು ಎಂದು ಅಳೆದು ಸುರಿದು ನೋಡಿದ ನಂತರವೇ ಭಾರತ ಸರಕಾರ ನಿರ್ಣಯ ಕೈಗೊಳ್ಳಬಹುದಿತ್ತಲ್ಲವೆ?

## ಕೊರೋನಾ ಸಾವು v/s ಲಾಕ್‌ಡೌನ್ ಸಾವು

ಸರಿ, ಸರಕಾರವೇನೊ ತಕ್ಷಣದ ತುರ್ತುಕ್ರಮವನ್ನು ಘೋಷಿಸಲೇಬೇಕಾದ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿತ್ತು ಎನ್ನಿ. ಆದ್ದರಿಂದಲೇ ಮೋದಿಯವರು ಕೇವಲ ಮೂರು ಗಂಟೆಗಳ ಸಮಯಾವಕಾಶ ಕೊಟ್ಟು (ಅದೂ ರಾತ್ರಿಯಲ್ಲಿ) ಲಾಕ್‌ಡೌನ್ ಘೋಷಣೆ ಮಾಡಿದರು ಎನ್ನಿ. ಜೀವನೋಪಾಯಕ್ಕಿಂತ ಜೀವವೇ ಮುಖ್ಯ ಎಂಬ ನಿರ್ಣಯಕ್ಕೆ ಅವರು ಬಂದಿರಬಹುದು. ಹಾಗಿದ್ದರೆ ಈ ಒಂದು ತಿಂಗಳಲ್ಲಿ ಏನಾಗಿದೆ ಎಂಬುದರ ಸಮೀಕ್ಷೆ ನಡೆಸಿ ಯಥಾರ್ಥ ಚಿತ್ರಣವನ್ನು ಕೊಡಲು ಸಾಧ್ಯವಿತ್ತು. ಆದರೆ ಹಾಗಾಗುತ್ತಿಲ್ಲ. ಈಗಲೂ ಕೋವಿಡ್ ಕಾಯಿಲೆಯಿಂದ ಸತ್ತವರ ಸಂಖ್ಯೆ ಮಾತ್ರ ಸಿಗುತ್ತಿದೆ. ಲಾಕ್‌ಡೌನ್‌ನ ಕಾರಣದಿಂದ ಸತ್ತವರ ಸಂಖ್ಯೆ (ಅಂದರೆ ಕ್ಯಾನ್ಸರ್, ಕಿಡ್ನಿ ಸಮಸ್ಯೆ, ಹೃದ್ರೋಗದಂಥ ಕಾಯಿಲೆಗೆ, ವಾಂತಿಭೇದಿಗೆ ಔಷಧ/ಶುಶ್ರೂಷೆ ಸಿಗದೆ ಸತ್ತವರು, ಖಿನ್ನತೆಯಿಂದ ಆತ್ಮಹತ್ಯೆ ಮಾಡಿಕೊಂಡವರು, ಘರ್‌ವಾಪಸಿಗೆಂದು ಕಾಲ್ನಡಿಗೆಯಿಂದ ಬಳಲಿ ಸತ್ತವರು) ಎಷ್ಟೆಂಬುದನ್ನು ಯಾರೂ ಹೇಳುತ್ತಿಲ್ಲ. ಯಾರೂ ಕೇಳುತ್ತಲೂ ಇಲ್ಲ.

ಇಲ್ಲಿ ಕೆಲವೊಂದು ಅಪ್ರಿಯ ಸತ್ಯಗಳನ್ನು ನೋಡೋಣ. ನಮ್ಮ ದೇಶದಲ್ಲಿ ಹಾವು ಕಚ್ಚಿಯೇ ಪ್ರತಿ ದಿನ ಸರಾಸರಿ ೧೩೪ ಜನರು ಸಾಯುತ್ತಾರೆ. ವಾಂತಿಭೇದಿಯಿಂದ ದಿನವೂ ೨೫೦ ಮಕ್ಕಳು ಸಾಯುತ್ತಾರೆ. ಕ್ಷಯದಿಂದ ೧೨೦೦ ಜನರು ದಿನವೂ ಸಾಯುತ್ತಾರೆ. ಡೆಂಗೇ, ಕಾಮಾಲೆ, ಏಡ್ಸ್, ಕ್ಯಾನ್ಸರ್, ಹೃದ್ರೋಗಗಳಿಂದ ಇನ್ನೊಂದು ಸಾವಿರ ಜನರು ಸಾಯುತ್ತಾರೆ. "ಪ್ರತಿ ವರ್ಷ ಚಳಿಗಾಲದಲ್ಲಿ ಬರುವ ನೆಗಡಿ ಜ್ವರದಿಂದಲೇ ನಮ್ಮ ದೇಶದಲ್ಲಿ ೧೨-೧೩ ಸಾವಿರ ಜನರು ಸಾಯುತ್ತಿದ್ದಾರೆ" ಎಂದು ಡಾ. ಬಿ.ಎಂ. ಹೆಗ್ಡೆ ಹೇಳುತ್ತಾರೆ. ಈ ಕಟುಸತ್ಯಗಳನ್ನೆಲ್ಲ ಬದಿಗೊತ್ತಲಾಗಿದೆ. ಕೊರೊನಾ ಮಾತ್ರ ಸಾವಿನ ಮಹಾಮಾರಿ ಎಂಬಂತೆ ಅಹೋರಾತ್ರಿ ಮಾಧ್ಯಮಗಳು ಬಿಂಬಿಸುತ್ತಿವೆ. ಜಗತ್ತನ್ನು ದೀರ್ಘಕಾಲ ಭಯದಲ್ಲಿ ಅದ್ದಿಡಲು ಎಂತೆಂಥವೋ ಶಕ್ತಿಗಳು ಕೈಕೈ ಜೋಡಿಸಿ ನಿಂತಂತಿವೆ. ಮಾಧ್ಯಮಗಳಿಗೆ ಆ ಭಯಾನಕ ಗ್ರಾಫಿಕ್ ಚಿತ್ರಗಳನ್ನು, ಲ್ಯಾಬ್‌ಗಳಲ್ಲಿನ ಆ ಹೈಟೆಕ್ ಪಿಪೆಟ್ಟಳನ್ನು, ಆಟೋಕ್ಲೇವ್‌ಗಳನ್ನು ಜಾಲಾಡುವ ಮುಸುಕುಧಾರಿ ವಿಜ್ಞಾನಿಗಳ ತರಾವರಿ ಚಿತ್ರಗಳನ್ನು ಯಾರು ಒದಗಿಸುತ್ತಿದ್ದಾರೆ? ವಿಮಾನದ ಕಾಕ್‌ಪಿಟ್‌ನಂತೆ ಕಾಣುವ ಹೈಟೆಕ್ ಆಸ್ಪತ್ರೆಗಳ ಐಸಿಯುಗಳ ದೃಶ್ಯಗಳನ್ನು ಯಾರು ತಯಾರಿಸಿ ಚಾನೆಲ್‌ಗಳಿಗೆ ನಿತ್ಯವೂ ಪೂರೈಕೆ ಮಾಡುತ್ತಾರೆ? ಚುನಾವಣಾ ಫಲಿತಾಂಶದ ಹಾಗೆ ತಾಸುತಾಸಿಗೆ ಕೋವಿಡ್ ಮರಣದ ಇಡೀ ಜಗತ್ತಿನ ಅಂಕಿಸಂಖ್ಯೆಗಳನ್ನು ಮಹಾಮಾರಿಯ ರುದ್ರನರ್ತನದಂತೆ ಯಾರು ಕುಣಿಸುತ್ತಿದ್ದಾರೆ?

## ಯುದ್ಧ ಸಾಮಗ್ರಿ ಲಾಬಿ ವೈದ್ಯಕೀಯ ಉಪಕರಣಗಳ ಲಾಬಿ?

ಅದನ್ನು ಯಾವ ಚಾನೆಲ್‌ಗಳೂ ನಮಗೆ ತಿಳಿಸುತ್ತಿಲ್ಲ. ಆದರೆ ಮೂರು ಲಕ್ಷ ಟೆಸ್ಟಿಂಗ್ ಕಿಟ್‌ಗಳು ಚೀನಾದಿಂದ ಬಂದವು; ಹದಿನೈದು ಲಕ್ಷ ಪಿಪಿಇಗಳು (ಅಂದರೆ ಆಸ್ಪತ್ರೆ ಸಿಬ್ಬಂದಿಗಳು ತೊಡುವ ಮೈಗವಚಗಳು) ಜರ್ಮನಿಯಿಂದ ಬಂದವು; ಇಷ್ಟು ಲಕ್ಷ ವೆಂಟಿಲೇಟರ್‌ಗಳು ಫ್ರಾನ್ಸ್‌ನಿಂದ ಬಂದವು, ಇಂತಿಷ್ಟು ಲಕ್ಷ ದೂರಸಂವೇದಿ ಸ್ಕ್ಯಾನರ್‌ಗಳು ಇನ್ನೆಲ್ಲಿಂದಲೋ ಬಂದವು... ಇತ್ಯಾದಿ ಚಿತ್ರ ಮಾಹಿತಿಯ ಸರಮಾಲೆಯೇ ಬರುತ್ತಿದೆ. ಕೆಲವು ಚಾನೆಲ್‌ಗಳಂತೂ ಡೋಲು-ತಮಟೆಗಳ ಸಮರ ದುಂದುಭಿ ಸಮೇತ ಘನಘೋರ ಯುದ್ಧಕ್ಕೆ ಅವೆಲ್ಲ ಹೊರಟ ಹಾಗೆ ಬಿಂಬಿಸುತ್ತಿವೆ. ಇರಾಕ್, ಇರಾನ್, ನ್ಯೂಯಾರ್ಕ್‌ನ ರುದ್ರಭೂಮಿಯಲ್ಲಿ ಶವಪೆಟ್ಟಿಗೆಗಳ ಪ್ರಭಾತಫೇರಿ ಹೊರಟಂತೆ ತೋರಿಸುತ್ತಿವೆ. ನನಗೇನೊ ಇದು ಯುದ್ಧಾಸ್ತ್ರಗಳ ದಲ್ಲಾಳಿಗಳ ವಿರುದ್ಧ ಮೆಡಿಕಲ್ ಸರಂಜಾಮುಗಳ ದಲ್ಲಾಳಿಗಳು ಯುದ್ಧ ಘೋಷಿಸಿದಂತೆ ತೋರುತ್ತಿದೆ. ನಾಳೆ ಪಾಕಿಸ್ತಾನದ ಗಡಿಯ ಆಚೀಚೆ ಬಾಲಾಕೋಟ್ ಮಾದರಿಯ ದಾಳಿಯೇನಾದರೂ ನಡೆದು ೮೦೦ ಜನರು ಮಡಿದರೆ (ಈಗ ಕೋವಿಡ್‌ನಿಂದ ಸತ್ತಷ್ಟು) ಆಗ ಮಿಲಿಟರಿ ದುಂದುಭಿಯೇ ಎಲ್ಲೆಡೆ ಜೋರಾಗುತ್ತದೆ. ಯುದ್ಧಾಸ್ತ್ರಗಳ ದಲ್ಲಾಳಿಗಳ ಕೈ ಮೇಲಾಗುತ್ತದೆ ಮೆಡಿಕಲ್ ಸರಂಜಾಮಿನ ದಲ್ಲಾಳಿಗಳು ಸೋಲುತ್ತಾರೆ.

## ಸುಳ್ಳು ಸುದ್ದಿಗಳ ಕಾರ್ಪೆಟ್ ಬಾಂಬಿಂಗ್

ಇದು ಇನ್ಫೋಡೆಮಿಕ್. ಸುದ್ದಿಮಾರಿಯ ರುದ್ರನರ್ತನ. ವಾಟ್ಸಾಪ್, ಟ್ವಿಟ್ಟರ್, ಫೇಸ್‌ಬುಕ್, ಇನ್ಸ್ಟಗ್ರಾಮ್ ಎಂಬ ಬಾಂಬರ್ ವಿಮಾನಗಳು ಸ್ಟಾರ್‌ವಾರ್ ಮಾದರಿಯಲ್ಲಿ ಸುಳ್ಳುಸುದ್ದಿಯ ಕಾರ್ಪೆಟ್ ಬಾಂಬಿಂಗ್ ಮಾಡುತ್ತವೆ. ಈ ನರ್ತನದಲ್ಲಿ ಸತ್ಯವೇ ತುಳಿತಕ್ಕೊಳಗಾಗಿ ತ್ರಾಹಿತ್ರಾಹಿ ಆಗುತ್ತದೆ. ಆಕ್ರೋಶಗೊಂಡ ಜನಸಮುದಾಯಗಳು ತಂತಮ್ಮಲ್ಲೇ ಬಡಿದಾಡತೊಡಗುತ್ತವೆ. ಪೊಲೀಸರು ಹಸಿದವರ ವಿರುದ್ಧ, ಪ್ರಭಾವೀ ನಾಯಕರು ವೈದ್ಯರ ವಿರುದ್ಧ, ಅಲೋಪಥಿಯವರು ಆಯುರ್ವೇದದ ವಿರುದ್ಧ, ಹಿಂದೂಗಳು ಮುಸಲ್ಮಾನರ ವಿರುದ್ಧ, ಮುಸಲ್ಮಾನರು ಯಹೂದಿಗಳ ವಿರುದ್ಧ, ಯಹೂದಿಗಳು ಅರಬ್ಬರ ವಿರುದ್ಧ, ಅರಬ್ಬರು ಅಮೆರಿಕದ ವಿರುದ್ಧ, ಅಮೆರಿಕವರು ವಿಸ್ವಾಸಂ ವಿರುದ್ಧ, ಬಿಡುವಿದ್ದವರು ಚೀನಾದ ವಿರುದ್ಧ ವಿಷಕಾರಲು ತೊಡಗುತ್ತಾರೆ. ಅಸಲೀ ವೈರಾಣು ಯಾವುದೆಂಬುದೇ ಗೊತ್ತಾಗದಷ್ಟು ಗೋಜಲಾಗುತ್ತದೆ. ಯುದ್ಧ ಮುಗಿದರೂ ಗಾಯದ ವ್ರಣ ದೀರ್ಘಕಾಲ ಹಸಿಯಾಗಿಯೇ ಇರುತ್ತದೆ. ಗಾಯಕ್ಕೆ ಔಷಧ ಮಾರಲು, ಸೇಡು ತೀರಿಸಿಕೊಳ್ಳಲು, ಯುದ್ಧಾಸ್ತ್ರಗಳು ತಯಾರಾಗುತ್ತಲೇ ಇರುತ್ತವೆ.

ಕೋವಿಡ್ ತೀರ ಉಲ್ಬಣ ಸ್ಥಿತಿಗೆ ಬಂದಾಗ, ಕೆಲವರ ದೇಹದಲ್ಲಿ 'ಸೈಟೊಕೈನ್ ಸ್ಟಾರ್ಮಿಂಗ್' ಎಂಬ ವಿಲಕ್ಷಣ ಬಾಂಬಿಂಗ್ ಸುರಿಮಳೆ ನಡೆಯುತ್ತದೆ. ಕೊರೊನಾ ವೈರಿಯನ್ನು ದಮನ ಮಾಡಲೆಂದು ದೇಹದ ರಕ್ಷಣಾ ವ್ಯವಸ್ಥೆ ಹಠಾತ್ತಾಗಿ ಚುರುಕಾಗುತ್ತದೆ. ಅಸಂಖ್ಯ ಪ್ರತಿಕಾಯಗಳು ರಕ್ತನಾಳಗಳ ಮೂಲಕ ನುಗ್ಗಿ ಬರುತ್ತವೆ. ಶ್ವಾಸಕೋಶವೇ ಭಯಂಕರ ರಣರಂಗವಾಗುತ್ತದೆ. ಒಂದು ವೈರಸ್ ಮೇಲೆ ನೂರಾರು ಪ್ರತಿಕಾಯಗಳು ಮುಗಿಬೀಳುತ್ತವೆ. ಶ್ವಾಸದ ಚೀಲದಲ್ಲಿ ಹೆಣಗಳು ತುಂಬಿಹೋಗುತ್ತವೆ. ಉಸಿರಿಗೆ ಜಾಗವೇ ಇಲ್ಲದಂತಾಗಿ ರೋಗಿಯ ಪ್ರಾಣಪಕ್ಷಿ ಹಾರಿಹೋಗುತ್ತದೆ. ಇಲ್ಲಿ ರೋಗಾಣುವಿಗಿಂತ ರೋಗನಿರೋಧಕ ಕಣಗಳ ದಾಳಿಯಿಂದಾಗಿಯೇ ಸಾವು ಸನ್ನಿಹಿತವಾಗುತ್ತದೆ. ಅಂಥ ತುರೀಯ ಸ್ಥಿತಿ ಬಂದಾಗ ರೋಗಿಗೆ ವೆಂಟಿಲೇಟರ್ ಹಾಕಿ, ಆತನಿಗೆ ಕೃತಕ ಉಸಿರಾಟ ಮಾಡಿಸಬೇಕಾಗುತ್ತದೆ. ನಮ್ಮ ದೇಶಕ್ಕಿಂದು ಅಂಥ ವೆಂಟಿಲೇಟರ್ಗಳು ತುರ್ತಾಗಿ ಬೇಕಾಗಿವೆ.

## ಕೊರೋನಾಗೆ ಮೂಲ ಮದ್ದು: ಅಸಮಾನತೆ ಕಡಿಮೆಯಾಗಲಿ

ಆ ವೆಂಟಿಲೇಟರಿನ ಸ್ವರೂಪ ಹೇಗಿರಬೇಕು ಎಂಬುದು ಬಿಲ್ ಗೇಟ್ಸ್ ಕೊಟ್ಟ ಆ ಚಿಕ್ಕ ಉಪನ್ಯಾಸದಲ್ಲೇ ಇದೆ. ಸ್ಥಳೀಯ ಮಟ್ಟದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಶಕ್ತವಾಗಬೇಕು. ಜನಕ್ಕೆ ಸತ್ವಯುತ ಆಹಾರ ಸಿಗುವಂತಾಗಬೇಕು. ಅದನ್ನು ದೊರಕಿಸಲು ತಕ್ಕಮಟ್ಟಿನ ಹಣಕಾಸು ಅವರ ಕಿಸೆಯಲ್ಲಿರಬೇಕು. ಅಸಮಾನತೆಯನ್ನು ಕಡಿಮೆ ಮಾಡಬೇಕು. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನಿರ್ಧರಿಸಿದ್ದೇ ಆದರೆ ಇಡೀ ಮನುಕುಲಕ್ಕೆ ಅದೆಷ್ಟೊಂದು ಲಾಭಗಳಿವೆ.



ಅದೇನೋ ಹೌದು. ಆದರೆ ಸದ್ಯಕ್ಕಂತೂ ಈ ಭೂಮಿಯ ದುರದೃಷ್ಟ ಏನೆಂದರೆ ಕೆಲವರ ಲಾಭಕ್ಕೆಂದೇ ವೈರಗಳು, ವೈರಾಣುಗಳು ಸೃಷ್ಟಿಯಾಗುತ್ತಿವೆ. ಸಮರಸಂಭ್ರಮವೇ ಎಲ್ಲೆಡೆ ವಿಜೃಂಭಿಸುತ್ತಿದೆ.

**(ಲೇಖಕ ನಾಗೇಶ ಹೆಗಡೆಯವರು ನಾಡಿನ ಹೆಸರಾಂತ ವಿಜ್ಞಾನ ಬರಹಗಾರರು ಮತ್ತು ಪರಿಸರ ಕಾರ್ಯಕರ್ತರು)**

ಪ್ರಚಲಿತ–೪

# ಮೂರು ವರ್ಷಗಳಲ್ಲಿ 'ಯೆಸ್ ಬ್ಯಾಂಕ್'ನ ಮೌಲ್ಯ ತೀವ್ರ ಕುಸಿತ ಕಂಡದ್ದು ಹೇಗೆ?

–ಅಂಜನ್ ಬಸು



**ಕೊರೋನಾ ಎಂಬ ಬಿರುಗಾಳಿ ಎಬ್ಬಿಸಿರುವ ಧೂಳಿನಲ್ಲಿ ಸದ್ಯಕ್ಕಾದರೂ ಮರೆಯಾಗಿ ಹೋಗಿರುವ ಸರ್ಕಾರದ ಹಲವು ದುಸ್ಸಾಹಸಗಳು ಮತ್ತು ಹಗರಣಗಳಲ್ಲಿ ಯೆಸ್ ಬ್ಯಾಂಕ್ ಹಗರಣವೂ ಒಂದು. ಸರ್ಕಾರದ ಅದಕ್ಷ ಆರ್ಥಿಕ ಆಡಳಿತದ ಮಧ್ಯೆ ಮಲ್ಯ, ಕೋಚರ್ ದೃಷ್ಟಾಂತಗಳ ನಂತರವೂ ದೊಡ್ಡ ದೊಡ್ಡ ಕಾರ್ಪೊರೇಟ್ ತಿಮಂಗಿಲಗಳು ಹೇಗೆ ಜನರ ಹಣವನ್ನು ಎಷ್ಟು ಲೀಲಾಜಾಲವಾಗಿ ಲೂಟಿ ಮಾಡಬಲ್ಲರು ಎಂಬುದಕ್ಕೆ ಈ ಹಗರಣ ಇತ್ತೀಚಿನ ಉದಾಹರಣೆ. ಲೂಟಿ ಹೇಗಾಯಿತು ಎಂಬುದರ ವಿವರ ಇಲ್ಲಿದೆ.–ಸಂ**

**ಯೆ**ಸ್ ಬ್ಯಾಂಕ್ ಬಿಕ್ಕಟ್ಟಿನ ಬಗ್ಗೆ ಬಹಳ ವಿಸ್ಮಯಕಾರಿಯಾದ ಸಂಗತಿಯೇನೆಂದರೆ, ಬಿಕ್ಕಟ್ಟು ಎದುರಾಗುವುದೆಂದು ಎಲ್ಲರಿಗೂ ಮೊದಲೇ ತಿಳಿದಿದ್ದರೂ ಅದು ನಿಜಕ್ಕೂ ಎದುರಾದಾಗ ಎಲ್ಲರೂ ಆಶ್ಚರ್ಯಚಕಿತರಾದಂತೆ ತೋರುತ್ತಿರುವುದು!

ಸಾಂದರ್ಭಿಕ ವಿದ್ಯಮಾನಗಳ ಕಡೆ ಸ್ವಲ್ಪ ಗಮನ ಹರಿಸೋಣ. ಖಾಸಗೀ ವಲಯದ 'ಯೆಸ್ ಬ್ಯಾಂಕ್'ನ ಸಂಸ್ಥಾಪಕರಲ್ಲೊಬ್ಬರಾದ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಓ)ಯಾಗಿದ್ದ ರಾಣಾ ಕಪೂರ್ ಅವರನ್ನು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜೊತೆಗಿನ ಗುದ್ದಾಟದ ನಂತರ, ಜನವರಿ ೨೦೧೯ ರಲ್ಲಿ ಪದಚ್ಯುತಿಗೊಳಿಸಲಾಯಿತು.

ಅವರು ನಿರ್ಗಮಿಸಿದ ನಂತರ ಮಾರ್ಚ್ ೩೧, ೨೦೧೯ ಕ್ಕೆ ಕೊನೆಗೊಂಡ ಮೊದಲ ತ್ರೈಮಾಸಿಕ ವರದಿಯಲ್ಲಿ ಈ ಬ್ಯಾಂಕ್, ರೂ.೧೫೦೭ ಕೋಟಿ ನಷ್ಟವನ್ನು ದಾಖಲಿಸಿತು. ಆದರೆ ಆ ಹಿಂದಿನ ವರ್ಷದ ಇದೇ ತ್ರೈಮಾಸಿಕ ವರದಿ ಅವಧಿಯಲ್ಲಿ ರೂ.೧೧೭೯ ಕೋಟಿ ಲಾಭವನ್ನು ತೋರಿಸಿತ್ತು. ೨೦೦೪ ರಲ್ಲಿ ಆರಂಭವಾದಾಗಿನಿಂದಲೂ ಯಾವುದೇ ನಷ್ಟವನ್ನು ದಾಖಲಿಸದ ಯೆಸ್ ಬ್ಯಾಂಕ್, ಇದೇ ಮೊದಲ ಬಾರಿಗೆ ನಷ್ಟವನ್ನು ದಾಖಲಿಸಿತ್ತು.

'ಕಪೂರ್ಸ್ ವಾಚ್' ಎನ್ನುವ ಪತ್ರಿಕೆಯಲ್ಲಿ ಪ್ರಕಟವಾಗಿದ್ದ, ಅಕ್ಟೋ–ಡಿಸೆಂ, ೨೦೧೮ ರ ಕೊನೆಯ ತ್ರೈಮಾಸಿಕ ಫಲಿತಾಂಶಗಳಲ್ಲಿ ಬ್ಯಾಂಕ್, ತನ್ನ ಒಟ್ಟು ಅನುತ್ಪಾದಕ ಸಾಲದ ಅನುಪಾತ(NPA ratio)ವನ್ನು ೨.೧೦% ಎಂದು ದಾಖಲಿಸಿದ್ದರೆ, ಅವರು ನಿರ್ಗಮಿಸಿದ ನಂತರದ ಮೂರು ತ್ರೈಮಾಸಿಕಗಳಲ್ಲಿ ಈ ಅನುಪಾತವು ಕ್ರಮವಾಗಿ ೩.೨೨%, ೫.೦೧% ಮತ್ತು ೭.೩೯% ಕ್ಕೆ ಹಿಗ್ಗಿತ್ತು. ಅಂದರೆ ಅವರು ಬ್ಯಾಂಕ್ ತೊರೆದ ೯ ತಿಂಗಳುಗಳಲ್ಲಿ ವಸೂಲಾಗದ ಸಾಲದ ಪ್ರಮಾಣ ಶೇಕಡಾ ೩೫೦ ರಷ್ಟು ಹೆಚ್ಚಾಗಿತ್ತು. ವರದಿಯಲ್ಲೇ ಏನಾದರೂ ಗಂಭೀರವಾದ ಸಮಸ್ಯೆಯಿಲ್ಲದೇ ಇದು ಅಸಂಭವವಾಗಿತ್ತು.

ಇಷ್ಟಾದರೂ ಕಪೂರ್ ಇನ್ನೂ ಕೈಚೆಲ್ಲಿರಲಿಲ್ಲ. ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಸ್ಥಾನ ಕೊಡಬೇಕೆಂದು ಒತ್ತಡ ಹಾಕುತ್ತಿದ್ದರು. ಅದಕ್ಕಾಗಿ ಸಾರ್ವಜನಿಕವಾಗಿ ಎಲ್ಲರ ಮುಂದೆ ಕೂಗಾಡಿದರು. ಬ್ಯಾಂಕಿನ ಕನಿಷ್ಠ ಇಬ್ಬರು ನಿರ್ದೇಶಕರು ಮತ್ತು ಶೋಧನಾ ಸಮಿತಿಯ ಮುಖ್ಯಸ್ಥರನ್ನು ತಮ್ಮ ಕಡೆಗೆ ಸೆಳೆದುಕೊಂಡರು. ಅವರಲ್ಲಿ ತಮ್ಮ ಉತ್ತರಾಧಿಕಾರಿಯನ್ನು ಗುರುತಿಸಿ, ತ್ವರಿತವಾಗಿ ರಾಜೀನಾಮೆ ಕೊಡಲು ಪ್ರೇರೇಪಿಸಿದರು. ತಾವೇ ಸ್ಥಾಪಿಸಿದ ಬ್ಯಾಂಕಿನಲ್ಲಿ ತಮ್ಮ ಪಾಲನ್ನು ಯಾವತ್ತೂ ಹೇಗೆ ಕಳೆದುಕೊಳ್ಳುವುದು ಸಾಧ್ಯವಿಲ್ಲ ಎಂಬ ಬಗ್ಗೆ ಅತಿರಂಜಿತವಾದ ಹೇಳಿಕೆಗಳನ್ನು ನೀಡತೊಡಗಿದರು. ತಮ್ಮ ಭಾಗದ ಶೇರಿನ ಸಹಾಯದಿಂದ ಮತ್ತೊಮ್ಮೆ ಸಾರ್ವಜನಿಕವಾಗಿ ತಮ್ಮನ್ನು ತಾವು ಹರಾಜುಹಾಕಿಕೊಳ್ಳುವುದರ ಜೊತೆಗೆ ದೊಡ್ಡ ಗಂಟನ್ನೂ ಲಪಟಾಯಿಸಿದರು.

೨೦೧೭ರಿಂದ ಆರ್‌ಬಿಐ ಯೆಸ್ ಬ್ಯಾಂಕ್ ಸಮಸ್ಯೆಯಲ್ಲಿ ಮುಳುಗಿಹೋಗಿದೆ ಎಂದು ಅರ್ಥ ಸಚಿವೆ ನಿರ್ಮಲಾ ಸೀತಾರಾಮನ್ ನುಡಿದದ್ದು ಸರಿಯಾಗೇ ಇತ್ತು. ಆದರೆ ಅವರ ಸರ್ಕಾರ ಮತ್ತು ಆರ್‌ಬಿಐ ಎರಡೂ ಇತ್ತೀಚಿನವರೆಗೆ– ಮಾರ್ಚ್ ೨೦೨೦ ರಲ್ಲಿ ಈಗ ತೆಗೆದುಕೊಂಡಿರುವ ಕ್ರಮದವರೆಗೆ–ನಿಜವಾದ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಏಕೆ ತಡಮಾಡಿದರು ಎಂಬುದನ್ನು ಜನತೆಗೆ ವಿವರಿಸುವುದು ಅಗತ್ಯವೆಂದು ಸಚಿವರು ಭಾವಿಸಲೇ ಇಲ್ಲ. ನಮ್ಮ 'ಮುಖ್ಯವಾಹಿನಿ'ಯ ಮಾಧ್ಯಮಗಳು ಮತ್ತು 'ಉದಾರ ವಿಶ್ಲೇಷಕ ವೃಂದ'ವು ಸಚಿವರಿಗೆ ಅಂಥ ಮುಜುಗರದ ಪ್ರಶ್ನೆಗಳನ್ನು ಕೇಳಲೂ ಇಲ್ಲ ಎನ್ನುವುದು ಬೇರೆ ಮಾತು.

ಮಾರ್ಚ್ ೩೧, ೨೦೧೭ರ ವೇಳೆಗೆ, ಬ್ಯಾಂಕಿನ ವ್ಯವಹಾರಗಳ ವಾರ್ಷಿಕ ಹಣಕಾಸು ಪರಿಶೀಲನೆ(AFI-Annual Financial Inspection)ಯ ಸಂದರ್ಭದಲ್ಲಿಯೇ ಯೆಸ್ ಬ್ಯಾಂಕ್‌ನಲ್ಲಿನ ಗಂಭೀರ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಆರ್‌ಬಿಐನ ಗಮನಕ್ಕೆ ತರಲಾಗಿತ್ತು. ಈ ಎಎಫ್‌ಐ ವರದಿಯ ಪ್ರಕಾರ ಯೆಸ್ ಬ್ಯಾಂಕ್ ಆಡಳಿತವು ತನ್ನ NPA ಗಳ ಪ್ರಮಾಣವನ್ನು ವಾಸ್ತವಕ್ಕಿಂತ ಶೇಕಡಾ ೭೫ ರಷ್ಟು ಕಡಿಮೆ ತೋರಿಸಿದೆ. ಅಂದರೆ ರೂ.೮೩೭೭/– ಕೋಟಿಗಳಷ್ಟಿರುವ NPA ಯನ್ನು ರೂ.೨೦೧೮/– ಕೋಟಿ ಎಂದು ತನ್ನ ವರದಿಯಲ್ಲಿ ನಮೂದಿಸಿದೆ. ಇದು ನಿಜಕ್ಕೂ ಒಂದು ಪಕ್ಕಾ ದೋಷಪೂರಿತ ದಾಖಲೆಯೇ ಸರಿ. ಸ್ಪಷ್ಟವಾಗಿಯೇ, ಬ್ಯಾಂಕಿನ ಲೆಕ್ಕಪರಿಶೋಧಕರು ತಮ್ಮ ಪಾಲಿನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಲ್ಲ. ಇದೇ ಅವಧಿಯಲ್ಲಿ, ಯೆಸ್ ಬ್ಯಾಂಕ್ ತನ್ನ ಸಂಭಾವ್ಯ ಕಾರ್ಪೊರೇಟ್ ಸಾಲಗಾರರ ಕ್ರೆಡಿಟ್‌ಲೈನ್‌ಗಳಿಗೆ ಸುಲಭವಾಗಿ ಅನುಮೋದನೆಯನ್ನು ನೀಡುತ್ತಾ, ಕೆಲ ಸಮಸ್ಯಾತ್ಮಕ ಕಾರ್ಪೊರೇಟ್ ಸಾಲಗಾರರ ಕ್ರೆಡಿಟ್ ಮಾನ್ಯತೆಗಳನ್ನು ಸದ್ದಿಲ್ಲದೆ ಒಪ್ಪಿಕೊಂಡು ತನ್ನ ಕಡೆಗೆ ಸೆಳೆದುಕೊಂಡದ್ದನ್ನು ಕಂಡು ನಮ್ಮ ಕೆಲವು ಸಾರ್ವಜನಿಕ ವಲಯದ ಬ್ಯಾಂಕುಗಳು ಬೆರಗುಗೊಂಡಿದ್ದವು.

ಇಷ್ಟಾದರೂ, ವಿಶ್ವಾಸಾರ್ಹವಾದ ಹೊರಗಿನ ಯಾವುದಾದರೂ ಸಂಸ್ಥೆಯಿಂದ ಯೆಸ್ ಬ್ಯಾಂಕ್‌ನ ವಹಿವಾಟಿನ ತನಿಖಾತ್ಮಕ ಲೆಕ್ಕಪರಿಶೋಧನೆ ಮಾಡಿಸುವುದು ಅಗತ್ಯ ಎಂದು ಆರ್‌ಬಿಐಗೆ ಕಾಣಲಿಲ್ಲ. ಅಂತಹ ಒಂದು ಲೆಕ್ಕಪರಿಶೋಧನೆಯು ಯೆಸ್ ಬ್ಯಾಂಕ್‌ನ ಆಯವ್ಯಯ ಪತ್ರದಲ್ಲಿ ಅಡಗಿರುವ ತೊಡಕುಗಳನ್ನು ಸರಿಯಾಗಿ ಗುರುತಿಸಿಲು ಸಹಾಯವಾಗುತ್ತಿತ್ತು. ಹಾಗೇ ಬ್ಯಾಂಕ್‌ನ ಆಡಳಿತಾತ್ಮಕ ಸಮಸ್ಯೆಗಳ ಬಗೆಗೂ ಒಂದು ಸ್ಪಷ್ಟ ಚಿತ್ರಣ ದೊರೆಯುತ್ತಿತ್ತು. ಅದರ ಬದಲಿಗೆ, ಆರ್‌ಬಿಐ ತನ್ನ ನಿವೃತ್ತ ಉಪ ಗವರ್ನರ್‌ರೊಬ್ಬರನ್ನು ಯೆಸ್ ಬ್ಯಾಂಕ್‌ನ ಆಡಳಿತ ಮಂಡಳಿಗೆ ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಿಸಿತು. ಈ ಕ್ರಮವು ಸಕಾಲಿಕ ಮಧ್ಯಪ್ರವೇಶವಾಗಿತ್ತಾದರೂ, ಸಾಧಿಸಿದ್ದು ಗಣನೀಯವೆನ್ನಲಾಗದು. ಏಕೆಂದರೆ, ಕಪೂರ್ ನಿರ್ಗಮಿಸಿದ್ದರೂ, ಬ್ಯಾಂಕ್ ನಿರ್ವಹಣೆಯ ಎಲ್ಲ ಪ್ರಮುಖ ಸ್ಥಾನಗಳು ಯಾವ ಬದಲಾವಣೆಯೂ ಇಲ್ಲದೇ ಯೆಸ್ ಬ್ಯಾಂಕ್‌ನ ಆಡಳಿತ ನಿರ್ವಹಣಾ ತಂಡದ ಸದಸ್ಯರಲ್ಲೇ ಉಳಿದಿದ್ದವು. ಆ ತಂಡವು ಬ್ಯಾಂಕ್‌ನ ಅ–ವ್ಯವಹಾರಗಳನ್ನು ಮುಂದುವರೆಸಲು ಸಹಾಯಕವಾಗಿತ್ತೇ ಹೊರತು ಸರಿಪಡಿಸಬಹುದಾದಂಥ ಕ್ರಮಗಳಿಗಲ್ಲ. ಏನೇ ಆದರೂ ಬ್ಯಾಂಕಿನ ಬೇರುಬಿಟ್ಟ ಪೂರ್ವವ್ಯವಸ್ಥೆಯೇನಿತ್ತೋ ಅದನ್ನೇ ಉಪ ಗವರ್ನರರು ಅವಲಂಬಿಸಬೇಕಿತ್ತು. ಅದು ಎಷ್ಟು ವಿಷಯಗಳನ್ನು ಬಹಿರಂಗಪಡಿಸಿತ್ತೋ ಅಷ್ಟೇ ವಿಷಯಗಳನ್ನು ಗೌಪ್ಯವಾಗಿ ಇಟ್ಟಿತ್ತೆಂದು ಕಾಣುತ್ತದೆ.

ಸರ್ಕಾರಕ್ಕೂ ಅವರ ಬಗ್ಗೆ ಸಂತೋಷಪಡಲು ಕಾರಣವಿತ್ತು. ನೋಟು ರದ್ದತಿಯ ನಂತರದ ಸಂದರ್ಭದಲ್ಲಿ ಒಂದು ಸಾಧಾರಣ ಬೆಳವಣಿಗೆಯ ದರವನ್ನಾದರೂ ತಮ್ಮ ವರದಿಯಲ್ಲಿ ದಾಖಲಿಸಲು ಬೇರೆಲ್ಲ ಬ್ಯಾಂಕುಗಳು ಹೆಣಗಾಡುತ್ತಿದ್ದಾಗ, ಯೆಸ್ ಬ್ಯಾಂಕ್, ಕಣ್ಣುಕುಕ್ಕುವಂಥ ಬೆಳವಣಿಗೆಯ ದರವನ್ನು ನಮೂದಿಸಿತ್ತು. ೨೦೧೬ ಮತ್ತು ೨೦೧೮ ರ ನಡುವಿನ ಎರಡು ವರ್ಷಗಳ ಅವಧಿಯಲ್ಲಿ, ಈ ಬ್ಯಾಂಕಿನ ಸಾಲಗಳು ಮತ್ತು ಮುಂಗಡಗಳು ಶೇಕಡಾ ೧೦೦ ರಷ್ಟು ಏರಿಕೆಯನ್ನು ಕಂಡಿತ್ತು. ನೋಟು ರದ್ದತಿಯಂಥ ದುಸ್ಸಾಹಸವನ್ನು 'ಮಾಸ್ಟರ್ ಸ್ಟ್ರೋಕ್' ಎಂದು ಬಣ್ಣಿಸಿದ ಮೊದಲ ಬ್ಯಾಂಕರ್‌ಗಳಲ್ಲಿ ಯೆಸ್ ಬ್ಯಾಂಕ್‌ನ ಕಪೂರ್ ಒಬ್ಬರು ಎಂಬುದನ್ನಿಲ್ಲಿ ಮರೆಯುವಂತಿಲ್ಲ.

## ಸದ್ಯ ಯೆಸ್ ಬ್ಯಾಂಕ್‌ನ ಸಮಸ್ಯೆಗಳು ಎಷ್ಟು ಗಂಭೀರವಾಗಿವೆ?

ಈಗ ವಿಶ್ವಾಸಾರ್ಹ ಮಾಹಿತಿಗಳು ತುಂಬ ವಿರಳವಾಗಿರುವ ಕಾರಣ, ಸದ್ಯಕ್ಕೆ ಈ ಬ್ಯಾಂಕ್‌ನ ಸರಿಯಾದ ಮೌಲ್ಯಮಾಪನ ಮಾಡುವುದು ಕಷ್ಟ. ಅದರ ಎಲ್ಲ ಲಕ್ಷಣಗಳೂ ಪರಿಸ್ಥಿತಿ ಚೆನ್ನಾಗಿಲ್ಲದಿರುವುದನ್ನು ಸೂಚಿಸುತ್ತಿವೆ. ಲಭ್ಯವಿರುವ ಇತ್ತೀಚಿನ ತ್ರೈಮಾಸಿಕ ವರದಿ(ಜೂನ್–ಸೆಪ್ಟೆಂ ೨೦೧೯)ಯಲ್ಲಿ ಯೆಸ್ ಬ್ಯಾಂಕ್‌ನ NPA

(೧೧ನೇ ಪುಟಕ್ಕೆ

೧ನೇ ಪುಟದಿಂದ)

ಮತ್ತು ರೂಪಾಂತರಗಳನ್ನು ಅರಿಯುವಲ್ಲಿ ನಡೆದಿರುವ ಬಹುಶಿಸ್ತೀಯ ಅಧ್ಯಯನ ಫಲಿತಾಂಶ. ಈ ಅಧ್ಯಯನದ ಭಿತ್ತಿಯಾಗಿರುವ ಮಾನವ ಕಲ್ಯಾಣದ ಸಾಹಸಗಾಥೆಯನ್ನು ಸಾಮಾನ್ಯವಾಗಿ ಆಧುನಿಕ ನಾಗರೀಕತೆಯ ಕಥೆ ಎಂದೂ ಕರೆಯಲಾಗುತ್ತದೆ. ಈ ಕಥೆಯ ಸಂದೇಶವಾಗಿ ನಾವು ಕರೋನಾ ವೈರಾಣುವಿನ ಕರಾಮತ್ತನ್ನು ಅರ್ಥ ಮಾಡಿಕೊಳ್ಳಬಹುದು. ಅಂದರೆ ಕರೋನಾ ಈ ಆಧುನಿಕ ನಾಗರೀಕತೆಯ ಉತ್ತುಂಗ ಫಲ. ಅದರ ಚಿಕಿತ್ಸೆ ಈ ನಾಗರಿಕತೆಗೆ ನೀಡಬೇಕಾದ ಬಹುಶಿಸ್ತೀಯ ಹಿನ್ನೆಲೆಯ ಚಿಕಿತ್ಸೆಯ ಭಾಗವೇ ಆಗಿರುತ್ತದೆ. ಯಾವುದು ಆ ಚಿಕಿತ್ಸೆ? ಜಗತ್ತು ಅದಕ್ಕೆ ಸಿದ್ಧವಿದೆಯೆ?

ಹಾಗಾಗಿ ಈ ಕರೋನಾ ಪಿಡುಗನ್ನು ಎದುರಿಸಬೇಕಾದದ್ದು ಲಾಕ್‌ಡೌನ್ ಅಥವಾ ಒಣ ಸಂಶೋಧನೆಯ ಲಸಿಕೆಗಳ ಮೂಲಕ ಅಲ್ಲ. ಅವು ಹೆಚ್ಚೆಂದರೆ ನಾಟಕೀಯ ಮತ್ತು ತಾತ್ಕಾಲಿಕ ಪರಿಣಾಮಗಳ ಕ್ರಮಗಳು ಮಾತ್ರ. ಭಾರತ ಮಾತ್ರವಲ್ಲ, ಇಡೀ ಜಗತ್ತು ಈಗ ಜನ ಕಲ್ಯಾಣ ಅಥವಾ ಪ್ರಗತಿಯ ಹೆಸರಿನಲ್ಲಿ ತಾನು ಸೃಷ್ಟಿಯನ್ನು ನಿರ್ವಹಿಸುತ್ತಿರುವ ರೀತಿ ನೀತಿಗಳನ್ನು ಮತ್ತು ಅದಕ್ಕೆ ಆಧಾರವಾಗಿರುವ ಅದನ್ನು ಗ್ರಹಿಸಿರುವ ಕ್ರಮವನ್ನು ಮರುಪರೀಲಿಸಬೇಕಿದೆ. ಮೊದಲಾಗಿ ಪ್ರಗತಿ ಎಂಬ ಪರಿಕಲ್ಪನೆಯ ಅರ್ಥ ಸಾಧ್ಯತೆಗಳನ್ನು ಝಾಡಿಸಿ ಪರಿವೀಕ್ಷಿಸಬೇಕಾಗಿದೆ. ಅದರ ಭಾಗವಾಗಿ ತಾನು ಬದುಕುತ್ತಿರುವ ಉದ್ದೇಶ ಮತ್ತು ಮಾದರಿಗಳು ಹಾಗೂ ಅವು ಹುಟ್ಟು ಹಾಕಿರುವ ವೈವಿಧ್ಯಮಯ ಉತ್ಪಾದನೆ ಮತ್ತು ವಿತರಣೆಯ ಸಂಕೀರ್ಣ ಪ್ರಕ್ರಿಯೆಗಳು ಮತ್ತು ಸಂವಹನ ಹಾಗೂ ಸಂಚಾರ ಜಾಲಗಳು ಹೇಗೆ ಜಗತ್ತಿನ ಮೂಲ ಸ್ವರೂಪ ಹಾಗೂ ಜೀವ ಜಗತ್ತಿನ ಸಹಜ ಚಲನಶೀಲತೆಯನ್ನೇ ಅಸ್ತವ್ಯಸ್ತಗೊಳಿಸಿ ಎಂದೂ ಇಲ್ಲವಾಗುವ ಮಾರಕ ರೋಗ ಪರಂಪರೆಗೆ ನಮ್ಮನ್ನು ಬಂಧಿಸಿಟ್ಟಿದೆ ಎಂಬುದನ್ನು ಅರಿಯಬೇಕಿದೆ. ಆಧುನಿಕ ಆಸ್ಪತ್ರೆಗಳು, ಸಂಕೀರ್ಣ ಯಂತ್ರಗಳು, ರೈಲು, ಆಧುನಿಕ ನ್ಯಾಯಾಲಯಗಳು, ಇಂಗ್ಲಿಷ್ ಭಾಷೆಯ ವ್ಯಾಮೋಹ (ಈ ವ್ಯಾಮೋಹ ನಮ್ಮನ್ನು ಈ ಆತ್ಮವಿನಾಶಕ ಅವಿದ್ಯೆಯ ವಶಕ್ಕೆ ಒಪ್ಪಿಸುವುದೆಂದೂ) ಮಾಧ್ಯಮವೆಂದು) ನಮಗೆ ಬೇಡವೆಂದು ಗಾಂಧಿ ಒಂದು ಶತಮಾನದ 'ಹಿಂದೆಯೇ ತಮ್ಮ ಹಿಂದ್ ಸ್ವರಾಜ್'ನಲ್ಲಿ ಪ್ರವಾದಿಯಂತೆ ಹೇಳಿದ್ದರು. ಅವರ ಮಾತುಗಳನ್ನು ವಿಮಾನ, ದ್ರೋಣ್‌ಗಳ ಇಂದಿನ ಜಾಗತೀಕರಣದ ದಿನಗಳಿಗೆ ಅನ್ವಯಿಸಿಕೊಂಡು ಅವುಗಳ ಮೌಲ್ಯಮಾಪನ ಮಾಡಬೇಕಿದೆ. ಇಂದು ಜಗತ್ತು ಕರೋನಾ ಪೂರ್ವದ ಕಾಲದಂತೆ ಇರಲಾರದು ಎಂದು ಇಂದು ಜಗತ್ತಿನ ಕೆಲ ಮುತ್ಸದ್ದಿಗಳು ಹೇಳುತ್ತಿರುವ 'ಭವಿಷ್ಯವಾಣಿ'ಯ ಅರ್ಥವೂ ಇದೇ ಇದ್ದಿರಬೇಕು.

ಇಂದು ಕೆಲ ಮಾರ್ಕ್ಸ್‌ವಾದಿ ಚಿಂತಕರೂ ಕರೋನಾ ಬಗ್ಗೆ ತಮ್ಮದೇ ವ್ಯಾಖ್ಯಾನಗಳನ್ನು ಮಂಡಿಸುತ್ತಿದ್ದಾರೆ. ಕರೋನಾ ಮೂಲಕ ಬಂಡವಾಳಶಾಹಿಯೇ ಒಂದು ರೋಗ ಎಂಬುದೀಗ ಸಾಬೀತಾಗಿದೆ ಎನ್ನುತ್ತಿದ್ದಾರೆ., ಮಾರ್ಕ್ಸ್ ಮತ್ತು ಏಂಗೆಲ್ಸ್ ಈ ಬಗ್ಗೆ ಆಗಲೇ ಎಚ್ಚರಿಕೆ ನೀಡಿದ್ದರು ಎಂದೂ ಹೇಳುತ್ತಿದ್ದಾರೆ. ಆದರೆ ಕೋವಿಡ್-೧೯ರಿಂದ ಆರಂಭದಲ್ಲೇ ತತ್ತರಿಸಿಹೋದ ರಾಷ್ಟ್ರವಾದ ಇಟಲಿಯ ರಾಜಕೀಯ ಚಿಂತಕನೊಬ್ಬ ಕರೋನಾ, ಕನಿಷ್ಠ ಇಟಲಿಯ ಪಾಲಿಗೆ ಕಮ್ಯೂನಿಸಂನ ಫಲ ಎಂದಿದ್ದಾನೆ! ಇಟಲಿಯ ಈ ಹಿಂದಿನ ಕಮ್ಯೂನಿಸ್ಟ್ ಸರ್ಕಾರ ಕರೋನಾ ವೈರಾಣುವಿನ ತವರಾದ ಚೀನಾದ ಕಮ್ಯೂನಿಸ್ಟರ ಮೇಲಿನ ಪ್ರೇಮದಿಂದಾಗಿ ಚೀನಾದ ಉದ್ಯಮ-ವ್ಯಾಪಾರ-ಕಾರ್ಮಿಕ ಶಕ್ತಿಗಳನ್ನು ಇಟಲಿಗೆ ದೊಡ್ಡ ಪ್ರಮಾಣದಲ್ಲಿ ಬಿಟ್ಟುಕೊಂಡದ್ದೇ ಇಟಲಿಯ ದೌರ್ಭಾಗ್ಯಕ್ಕೆ ಪ್ರಮುಖ ಕಾರಣ ಎನ್ನುತ್ತಾನೆ. ಬಂಡವಾಳಶಾಹಿಮತ್ತು ಕಮ್ಯೂನಿಸಂ ಕರೋನಾಗೆ ಕಾರಣವೆಂದು ಸೂಚಿಸುತ್ತಿರುವ ಎರಡೂ ವಾದಗಳ ಹಿಂದೆ ಇರುವುದು ಒಂದೇ ಸಾಮಾನ್ಯ ಅಂಶ. ಅದು ಈ ಎರಡೂ ಅನುಸರಿಸುತ್ತಿರುವ ಪ್ರಗತಿಯ ಚಾಲಕ ಶಕ್ತಿ ದುರಾಸೆ ಎಂಬುದು. ಸಮಸ್ಯೆ ಎಂದರೆ ಭೌತವಾದಿಗಳಾದ ಮಾರ್ಕ್ಸ್‌ವಾದಿಗಳು ಮನುಷ್ಯನನ್ನು ದೇಹಾತ್ಮ ಅಸ್ತಿತ್ವವಾಗಿ ನೋಡಲು ನಿರಾಕರಿಸುತ್ತಾ ದುರಾಸೆ ಎಂಬ ಶಬ್ದದ ಹತ್ತಿರವೂ ಸುಳಿಯಲಾಗದೆ ಅದನ್ನು ಜಡ ರಾಜಕೀಯ ಪರಿಭಾಷೆಯಲ್ಲಿ ಸುತ್ತಿ ಬಂಡವಾಳಶಾಹಿ ಎನ್ನುತ್ತಾರೆ. ಹಾಗಾಗಿ ಅವರ ತರ್ಕ ಎಷ್ಟೇ ಸರಿಯಾಗಿದ್ದರೂ ಅದು ಮನುಷ್ಯರ ಆತ್ಮವನ್ನು ಮುಟ್ಟಲಾಗಿಲ್ಲ. ಅ ಕಾರಣದಿಂದಲೇ ಕಮ್ಯುನಿಸಂ ಬಂಡವಾಳಶಾಹಿಯ ರಾಜಕಾರಣಕ್ಕೆ ಒಳಗಾಗಿ ಚೀನಾದಲ್ಲಿ ಕಮ್ಯೂನಿಸಂ ಹಾಗಾಗಿದೆ. ತನ್ನ ಈ ವಿಕ್ಷಿಪ್ತತೆಯಲ್ಲಿ ಕರೋನಾವನ್ನು ಬಿತ್ತಿ ಬೆಳೆದಿದೆ.

ಆದುದರಿಂದ ಇಂದು ಎಲ್ಲ ವಾದ, ಪರಿಭಾಷೆಗಳನ್ನು ಮೀರಿ ಕರೋನಾ ಎಂಬುದು ಅಂತಿಮವಾಗಿ ಮನುಷ್ಯನನ್ನು ದುಷ್ಟನನ್ನಾಗಿ ಮಾಡಿರುವ ದುರಾಸೆಯ ಇನ್ನೊಂದು ಹೆಸರು ಎಂದು ಅರಿತು ಅದು ಕಟ್ಟಿರುವ ಬದುಕಿನ ಮಾದರಿಯ ಅಡಿಪಾಯವನ್ನೇ ಕಿತ್ತುಹಾಕಿ ಸೃಷ್ಟಿಯನ್ನು ಸಮಗ್ರತೆಯಲ್ಲಿ ಕಾಣುವ ವಿನಯ, ಕರುಣೆ, ಅಹಿಂಸೆ ಮತ್ತು ಸಹಜೀವನದ ಚೌಕಟ್ಟಿನ ಬದುಕಿನ ಹೊಸ ಮಾದರಿಯೊಂದಕ್ಕಾಗಿ ತುಡಿಯಬೇಕಿದೆ. ಇದನ್ನು ಇಂದು ಟ್ರಂಪ್-ಮೋದಿ-ಪಿಂಗ್‌ಗಳಿಂದ ನಿರೀಕ್ಷಿಸಲು ಸಾಧ್ಯವೇ?

**-ಸಂಪಾದಕ**

೫ನೇ ಪುಟದಿಂದ)

ಏಕೆ? ವಿದೇಶಗಳಲ್ಲಿ ಸಿಕ್ಕು ಹಾಕಿಕೊಂಡ ಭಾರತೀಯರನ್ನು ವಾಪಸ್ಸು ಕರೆತರುವುದರಲ್ಲಿ ಸರ್ಕಾರಗಳು ನಿರತರಾಗಿದ್ದಾಗ ಗಂಡಸರು, ಹೆಂಗಸರು, ಮಕ್ಕಳು ಹೆದ್ದಾರಿಗಳಲ್ಲಿ ತಮ್ಮ ಊರುಗಳಿಗೆ ತಲುಪುವುದಕ್ಕಾಗಿ ತಮ್ಮ ಬೊಬ್ಬೆಯೆದ್ದ ಕಾಲುಗಳಲ್ಲೇ ನಡೆಯುವಂತಾಗಿದ್ದು ಏಕೆ? ಒಂದು ರಾತ್ರಿ ವಾರ್ತಾ ಪ್ರಸಾರವೊಂದರಲ್ಲಿ ಇಡೀ ಪ್ರದೇಶವೊಂದರಲ್ಲಿ ಎಷ್ಟೋ ಜನ ಕ್ಯಾಮರಾವನ್ನು ದೃಷ್ಟಿಸುತ್ತಾ ಆಹಾರಕ್ಕಾಗಿ ಬೇಡುತ್ತಿದ್ದುದನ್ನು ತೋರಿಸಲಾಯಿತು. ಇದಕ್ಕೊಂದು ಕ್ರೂರ ವೈರುಧ್ಯವೆಂಬಂತೆ ಒಬ್ಬ ಶಾಸಕ ಕರ್ಫ್ಯೂ ನಿಯಮಗಳನ್ನು ಉಲ್ಲಂಘಿಸಿದವರನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಬೇಕೆಂದು ಹೇಳುತ್ತಿದ್ದ ದೃಶ್ಯವೂ ಕಂಡುಬಂತು. ಗುಂಡಿಕ್ಕಿ ಕೊಲ್ಲಲಾಗದಿದ್ದರೆ ಕೊನೇ ಪಕ್ಷ ಅಂತಹವರ ಕಾಲುಗಳನ್ನಾದರೂ ಮುರಿದ ಪೊಲೀಸರಿಗೆ ಹಣದ ಬಹುಮಾನ ನೀಡುವುದಾಗಿ ಆತ ಹೇಳುತ್ತಿದ್ದ.

ಅಂದಿನ ಬೆಳಿಗ್ಗೆ ನಮ್ಮ ಮನೆಯ ಸುತ್ತಲ ರಸ್ತೆಗಳು ಬಹುಮಟ್ಟಿಗೆ ನಿರ್ಜನವಾಗಿದ್ದವು, ಕೆಲವೇ ಕಾರುಗಳು ಸ್ಕೂಟರ್‌ಗಳು ಕೆಲವು ಸೈಕಲ್‌ಗಳು ಕಂಡವು. ಆದರೆ ನಡೆದು ಹೋಗುತ್ತಿದ್ದ ಒಬ್ಬರಾದರೂ ಕಾಣಲಿಲ್ಲ. ದೆಹಲಿಯ IIT ಕ್ಯಾಂಪಸ್ಸಿನ ಒಳಗೆ, ಗಸ್ತು ತಿರುಗುವ ಕಾವಲಿನವರ ಭಯವಿಲ್ಲದ ಸುರಕ್ಷಿತ ಸ್ಥಳದಲ್ಲೂ ಕೂಡ ಯಾರೂ ನಡೆದಾಡುತ್ತಿರಲಿಲ್ಲ. ಸದಾ ಅಲ್ಲಲ್ಲಿ ಕುಳಿತಿರುತ್ತಿದ್ದ ಜನರೂ ಕೂಡ ಕಾಣಲಿಲ್ಲ. ಮನೆಗಳ ಬಾಲ್ಕನಿಗಳಲ್ಲೂ ಜನ ಕಾಣುತ್ತಿರಲಿಲ್ಲ. ಒಂದು ಪ್ರಮುಖ ಕ್ಷಣದಲ್ಲಿ ನಮ್ಮ ದಾರಿಗಳನ್ನು ಹೇಗೆ ಬದಲಾಯಿಸಿಕೊಳ್ಳಬಹುದು, ಒಂದು ಜೀವನ ಕ್ರಮವಾಗಿ ಮತಿಹೀನ ಅಭಿವೃದ್ಧಿಯನ್ನು ತಡೆಯುವ ಬಗ್ಗೆ ಮತ್ತು ಅವಪ್ರಗತಿಯ (degrowth) ಕಡೆಗೆ ಸುಲಭವಾಗಿ ಬದಲಾಗುವ ಬಗ್ಗೆ ಯೋಚಿಸಬಹುದಾದ ಕಾಲದಲ್ಲಿ ನಾವು ಹೆಪ್ಪುಗಟ್ಟಿದ್ದೇವೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಪರಸ್ಪರ ದೂರಾಗಿದ್ದೇವೆ. ಒಂದು ಮರುಚಿಂತನೆಯನ್ನು ಸಾಧ್ಯವಾಗಿಸಬಹುದಾಗಿದ್ದ, ಹೊಸ ಚಿಂತನೆಗಳ ಹುಟ್ಟಿನ ವಸಂತವೊಂದು ಪುನಃ ಪ್ರಾರಂಭಗೊಳ್ಳಲು ಅವಕಾಶವೊಂದನ್ನು ಸಾಧ್ಯಗೊಳಿಸಬಲ್ಲ, ಪ್ರಕೃತಿಯೇ ಕಲ್ಪಿಸಿರುವ ವೇಗದ ಈ ತಡೆಯ ಅವಕಾಶ ವ್ಯರ್ಥವಾಗಿ ಹೋಗಬಹುದೇನೋ..... ಜಗತ್ತು ಪುನಃ ತನ್ನ ಎಂದಿನ-ಹಿಂದಿನ-ವ್ಯವಹಾರದಲ್ಲಿ ತೊಡಗುತ್ತದೆ; ಅದೇ ಹಳೆಯ ಚಿಂತನೆ, ಅದೇ ಕೊನೆಗೊಂಡ ದಾರಿಯಲ್ಲೇ ಓಟ. ಜಾಗತಿಕ ಆರ್ಥಿಕತೆಗೆ ಏಟು ಬಿದ್ದಿರುವುದರಿಂದ ಅದೇ ಅವಪ್ರಗತಿ ಮುಂದುವರೆಯುತ್ತದೆ. ಆದರೆ ಬೆಳವಣಿಗೆಯ ಯಂತ್ರವು ಕೀಲೆಣ್ಣೆ ಹಚ್ಚಿಕೊಂಡು ಪುನಃ ಚಲಿಸಲಾರಂಭಿಸಿದರೂ ಕಳೆದುಹೋಗಿರುವ ಬಡಜನರ ಉದ್ಯೋಗಗಳು ಬಹುಶಃ ಮತ್ತೆ ಮರಳಲಾರವು.

ಈ ಸಂಕಷ್ಟವು ಕಥೆಯ ಅಂತ್ಯವಲ್ಲ, ಭವಿಷ್ಯಕ್ಕಾಗಿ ನಾವು ನಮ್ಮ ದಾರಿಯನ್ನು ಸರಿಪಡಿಸಿಕೊಳ್ಳಬೇಕಾದ ಗಂಭೀರ ಮುನ್ನೆಚ್ಚರಿಕೆ. ಏಕೆಂದರೆ ಜಗತ್ತು ಹೆಚ್ಚು ಸಂಪರ್ಕ ಪಡೆದಂತೆ ಮತ್ತು ವಾಸ್ತವ ನೆಲೆಯಿಂದ ದೂರಾದಂತೆಲ್ಲಾ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತವೆ. ಒಂದು ಕಾಲಕ್ಕೆ ಆಫ್ರಿಕಾದ ದಟ್ಟ ಕಾನನಗಳಲ್ಲಿ ಇದ್ದ ಎಬೋಲಾ ರೋಗಾಣುಗಳು ನಗರಗಳನ್ನು ತಲುಪಿದಾಗ ಒಂದು ಹೊಸ ವಿಪತ್ತಿನ ಹಂತವನ್ನು ತಲುಪುತ್ತವೆ. ಇದನ್ನೆಲ್ಲಾ ನಾವು ಒಂದೆರಡು ದಿನಗಳಲ್ಲಿ ಕಲಿಯಬೇಕೆಂಬುದು ಅತಿಯಾದ ನಿರೀಕ್ಷೆಯಾದೀತು. ಆದರೆ ನಾವೀಗ ಅಚ್ಚರಿಗಳು ಕಾದಿರುವ ಒಂದು ಹೊಸ ಜಗತ್ತಿನಲ್ಲಿದ್ದೇವೆ. ಹೊಸ ಕಾಲವೊಂದರ ಅನುಭವವನ್ನು ಪಡೆಯುತ್ತಾ ಮನೆಯೊಳಗೆ ಹೆಚ್ಚು ಕಾಲ ಕಳೆಯಬೇಕಿದೆ. ಆಗಲೇ ಕೊನೆಯಿಲ್ಲದ ಅಭಿವೃದ್ಧಿಯ ಮಾದರಿಗೆ ಕೊನೆ ಹಾಡಿ. ನಾವೀಗ ಸಂಪೂರ್ಣವಾಗಿ ಬೆಳೆದಿದ್ದೇವೆ, ನಾವೀಗ ಮಾಡಬೇಕಿರುವುದು ಬೆಳವಣಿಗೆಯನ್ನು ನಿಧಾನಗೊಳಿಸಿ ಸುಸ್ಥಿರತೆ ಸಾಧ್ಯವಾಗುವಂತೆ ಮಾಡುವುದು ಎಂಬ ಅರಿವಿಗೆ ಬರುವಂತಾಗುವುದು.

**(ಟ್ರಿನಿಡಾಡ್‌ನಲ್ಲಿ ಭಾರತೀಯ ಸಂಜಾತ ಕುಟುಂಬವೊಂದರಲ್ಲಿ ಜನಿಸಿದ ಪೆಗ್ಗಿ ಮೋಹನ್, ಈಗ ದೆಹಲಿಯಲ್ಲಿ ವಾಸವಾಗಿರುವ ಭಾಷಾಶಾಸ್ತ್ರಜ್ಞೆ ಮತ್ತು ಬರಹಗಾರ್ತಿ)**



**(ಕೃಪೆ: *ಔಟ್‌ಲುಕ್*, ೧೩ ಏಪ್ರಿಲ್, ೨೦೨೦**

**ಕನ್ನಡಕ್ಕೆ: ಎಂ ರಾಜು)**

**ಸರಳ ಸಜ್ಜನ ರಾಜಕಾರಣಿ ಎಂ.ವಿ. ರಾಜಶೇಖರನ್ ಹಿರಿಯ ಸಮಾಜವಾದಿ ರಾಚಪ್ಪ ಹಡಪದ ಹಾಗೂ ಹಿರಿಯ ಲೇಖಕ ರಾಜೇಗೌಡ ಹೊಸಹಳ್ಳಿ ಅವರ ನಿಧನಕ್ಕಾಗಿ ಪತ್ರಿಕೆ ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.- ಸಂ.**

ಸ್ಮರಣೆ

# ಕಸ್ತೂರಬಾ-೧೫೦ (೩)



ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವ ವರ್ಷವೇ ಅವರ ಪತ್ನಿ ಕಸ್ತೂರಬಾ ಅವರ ೧೫೦ನೇ ಜನ್ಮೋತ್ಸವ ವರ್ಷವೂ ಆಗಿದ್ದು, ಅದರ ಅಂಗವಾಗಿ 'ಹೊಸ ಮನುಷ್ಯ' ಕಳೆದ ಎರಡು ಸಂಚಿಕೆಗಳಿಂದ ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ದಿಂದ ಬಾ ಅವರ ಬದುಕಿನ ಮುಖ್ಯ ಘಟನೆಗಳನ್ನು ಆಯ್ದು ನಿರೂಪಿಸುವ ಪ್ರಯತ್ನ ಮಾಡುತ್ತಿದೆ. ಇದು ಈ ಘಟನಾವಳಿಯ ಕೊನೆಯ ಭಾಗ-ಸಂ.

## ಮಾಡು ಇಲ್ಲವೇ ಮಡಿ: ತಲೆ ಚಚ್ಚಿಕೊಂಡ ಬಾ



ಅವರನ್ನು ಬಾಂಬೆ ವಿ.ಟಿ. ರೈಲ್ವೇ ನಿಲ್ದಾಣಕ್ಕೆ ಕರೆದೊಯ್ಯಲಾಯಿತು. ಅಲ್ಲಿ ನೋಡಿದರೆ ನೆಹರೂ, ಪಟೇಲ್, ಆಜ಼ಾದ್ ಮುಂತಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನೂ ಬಂಧಿಸಿ ಕರೆತರಲಾಗಿತ್ತು. ಇನ್ನೊಂದೆಡೆ ಅಶೋಕ ಮೆಹ್ತಾ, ಯೂಸುಫ್ ಮೆಹ್ರೋಲಿ, ಎನ್.ಜಿ.ಗೋರೆ ಮುಂತಾದ ಯುವ ಸಮಾಜವಾದಿಗಳ ತಂಡವನ್ನು ಬಂಧಿಸಿ ಕೂರಿಸಲಾಗಿತ್ತು. ಅವರನ್ನೆಲ್ಲ ಪೂನಾ ಕಡೆ ಹೊರಟ ರೈಲು ಗಾಡಿಗೆ ಹತ್ತಿಸಲಾಯಿತು. ಪಟೇಲ್ ಗಾಂಧಿ ಕೂತಿದ್ದ ಡಬ್ಬಿಗೆ ಬಂದು ಮಾತಾಡತೊಡಗಿದಾಗ ಅವರನ್ನು ಅವರ ಡಬ್ಬಿಗೆ ಮರಳಲು ಪೊಲೀಸರು ಸೂಚಿಸಿದರು. ಕಿಟಕಿ ಬಳಿ ಕೂತಿದ್ದ ಕಸ್ತೂರಬಾ ರೈಲು ನಿಲ್ದಾಣದಲ್ಲಿ ನಡೆದಿದ್ದ ಜನಜೀವನವನ್ನು ತದೇಕಚಿತ್ತದಿಂದ ಗಮನಿಸಿದರು. ಗಾಡಿಗಳು ಬರುತ್ತಿದ್ದವು, ಹೋಗುತ್ತಿದ್ದವು. ಜನ ಇಳಿದು ಹತ್ತುತ್ತಿದ್ದರು. ಕೂಲಿಗಳು ಪ್ರಯಾಣಿಕರೊಂದಿಗೆ ಕೂಲಿ ವಿಷಯದಲ್ಲಿ ವಾದ ಮಾಡುತ್ತಿದ್ದರು. ಪೊಲೀಸರು ಬೀಡಿ ಸಿಗರೇಟು ಸೇದುತ್ತಾ, ಪಾನ್ ಅಗಿಯುತ್ತಾ ತಮ್ಮ ಕಷ್ಟ ಸುಖಗಳನ್ನು ಮಾತಾಡಿಕೊಳ್ಳುತ್ತಾ ನಿಂತಿದ್ದರು. ಅಲ್ಲಿದ್ದ ಇಡೀ ಜನಸ್ತೋಮ ಪೊಲೀಸ್ ಕಾರ್ಯಾಚರಣೆಯ ಗಮನವೇ ಇಲ್ಲದೆ ತಮ್ಮ ಪಾಡಿಗೆ ತಾವು ಸರಬರನೆ ಓಡಾಡುತ್ತಾ ತಾವು ಬಂದ ಕೆಲಸಗಳಲ್ಲಿ ತೊಡಗಿದ್ದರು. ಕಸ್ತೂರಬಾಗೆ ಏನನ್ನಿಸಿತೋ ಏನೋ ಅವರು ಪಕ್ಕದಲ್ಲಿದ್ದ ಸುಶೀಲಾ ನಯ್ಯರ್‌ಗೆ, 'ನೋಡೇ ಸುಶೀಲಾ, ಜಗತ್ತು ಹೇಗೆ ತನ್ನ ಪಾಡಿಗೆ ತಾನು ಯಾವ ತಕರಾರೂ ಇಲ್ಲದೆ ಸುಮ್ಮನೆ ನಡೆಯುತ್ತಿದೆ! ನಿಮ್ಮ ಗಾಂಧಿ ಇವರಿಗೆ ಪೂರ್ಣ ಸ್ವರಾಜ್ಯ ಕೊಡಿಸಲು ಹೊರಟಿದ್ದಾರೆ!' ಎಂದು ಹಣೆ ಚಚ್ಚಿಕೊಂಡರು.

## ಸೆರೆಮನೆಯ ಶೂನ್ಯತೆ-ಅಸ್ವಸ್ಥರಾದ ಕಸ್ತೂರಬಾ

ಈ ಮಧ್ಯೆ ಕಸ್ತೂರಬಾ ತೀವ್ರ ಅಸ್ವಸ್ಥರಾಗಿದ್ದರು. ೧೯೪೩ರ ಡಿಸೆಂಬರ್‌ನಲ್ಲೇ ಅವರಿಗೆ ಎರಡು ಬಾರಿ ಲಘು ಹೃದಯಾಘಾತಗಳಾಗಿದ್ದವು. ಅವರು ಉಸಿರಾಟದ ತೀವ್ರ ತೊಂದರೆಯಿಂದ ನರಳಲಾರಂಭಿಸಿದ್ದರು. ದೇವದಾಸ್ ಮತ್ತು ರಾಮದಾಸ್ ಸೆರೆಮನೆಗೆ ಬಂದು ಅವರನ್ನು ಕಂಡುಹೋದರು. ಡಾ. ಎಂ.ಡಿ. ಗಿಲ್ಡರ್, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿದ್ದರಾದರೂ ಡಾ. ಸುಶೀಲಾ ನಯ್ಯರ್ ಅವರ ಎಲ್ಲ ಸೇವೆ ಮಾಡುತ್ತಿದ್ದರಾದರೂ, ಬಾ ಭಾವನಾತ್ಮಕ ಸಮಸ್ಯೆಗಳಿಂದ ಬಾಧಿತರಾಗಿದ್ದಾರೆಂಬುದು ಗಾಂಧಿಯವರಿಗೆ ಗೊತ್ತಿತ್ತು. ಮಕ್ಕಳು-ಮೊಮ್ಮಕ್ಕಳು ಮತ್ತು ಇತರ ಬಂಧು ಬಾಂಧವರಿಂದ ದೂರಾಗಿ, ಸೆರೆಮನೆಯ ಒಂಟಿತನದಿಂದ ಬೇಸತ್ತು ಒಮ್ಮೆ ಗಾಂಧಿಯವರಿಗೆ 'ಈ ಇಂಗ್ಲಿಷ್‌ನವರೊಂದಿಗೆ ಎಷ್ಟು ದಿನ ಕಾದಾಡುವಿರಿ? ಇಬ್ಬರೂ ಒಟ್ಟಿಗೆ ಇರುವ ಒಪ್ಪಂದವನ್ನೇಕೆ ಮಾಡಿಕೊಳ್ಳಬಾರದು?' ಎಂದು ಕೇಳಿದ್ದರು. ಅದಕ್ಕೆ ಗಾಂಧಿ, 'ಅವರು ಆಳುವವರಾಗದೆ ಸೋದರರಂತೆ ಒಟ್ಟಿಗೆ ಬಾಳಲು ಸಿದ್ಧರಾದರೆ ನಾನೂ ಸಿದ್ಧ. ನೀನೇ ಒಪ್ಪಂದ ಮಾಡಿಸು' ಎಂದಾಗ ಬಾ ಜೋರಾದ ಮುಗ್ಧ ನಗೆ ನಕ್ಕು ಸುಮ್ಮನಾಗಿದ್ದರು.

ಗಾಂಧಿ, ಬಾಗೆ ಪ್ರತಿದಿನ ಐದನೆಯ ತರಗತಿಯ ಗುಜರಾತಿ ಪಠ್ಯಪುಸ್ತಕವನ್ನಿಟ್ಟುಕೊಂಡು ಓದು ಬರಹ ಕಲಿಸುತ್ತಿದ್ದರು. ಸಾಮಾನ್ಯ ಜ್ಞಾನ ಹೇಳಿಕೊಡುತ್ತಿದ್ದರು. ಇಬ್ಬರಿಗೂ ಬೇಸರವಾದಾಗ ರಾತ್ರಿ ಇಬ್ಬರೂ ಪಠ್ಯಪುಸ್ತಕದ ಪದ್ಯಗಳನ್ನು ಒಟ್ಟಿಗೆ ಹಾಡುತ್ತಾ ಕಾಲ ಕಳೆಯುತ್ತಿದ್ದರು. ಗಾಂಧಿ ಹೇಗೋ ಪ್ರಾರ್ಥನೆ, ಎಣ್ಣೆ ಸ್ನಾನ, ಪತ್ರಿಕೆ ಓದು, ನೂಲುವುದು, ಪ್ಯಾರೇಲಾಲ್ ಮತ್ತು ಸುಶೀಲಾ ನಯ್ಯರ್‌ರೊಂದಿಗೆ ರಾಜಕೀಯ ಚರ್ಚೆ ಇತ್ಯಾದಿಗಳಲ್ಲಿ ಕಾಲ ಕಳೆಯುತ್ತಿದ್ದರಾದರೂ ಬಾಗೆ ಸೆರೆಮನೆ ಬಿಡುಗಡೆಯ ಬೆಳಕೇ ಕಾಣದ ಕಗ್ಗತ್ತಲ ಜಗತ್ತಾಗಿ ಕಂಡು, ತಾನಿನ್ನು ಹೊರಜಗತ್ತನ್ನು ಕಾಣಲಾರೆನೇನೋ ಎಂದು ಭಯವಿಹ್ವಲರಾಗಿದ್ದರು. ಗಾಂಧಿ ಇದನ್ನು ಅರಿತು, ಬಾ ಅವರನ್ನು ಕಾಣಲು ಆಕೆಯ ಬಂಧುಗಳಿಗೆ ಹೆಚ್ಚಿನ ಅವಕಾಶ ನೀಡಬೇಕೆಂದೂ ಮತ್ತು ಬಾಗೆ ಪ್ರಿಯರಾದ ಪ್ರಭಾವತಿ ದೇವಿ(ಜೆಪಿಯವರ ಪತ್ನಿ), ಮನು ಗಾಂಧಿಯನ್ನು(ಮಗನ್‌ಲಾಲರ ಸೋದರ ಸಂಬಂಧಿ) ಅವಳ ಉಪಚಾರಕ್ಕಾಗಿ ಅನುಮತಿ ನೀಡಬೇಕೆಂದು ಸೆರೆಮನೆಯ ಮೇಲ್ವಿಚಾರಕರನ್ನು ಕೋರಿದರು. ಬಾ ರಾತ್ರಿಯೆಲ್ಲ ಒಂದು ಮರದ ಸ್ಟೂಲಿನ ಮೇಲೆ ತಲೆ ಇಟ್ಟುಕೊಂಡು ಏದುಸಿರುಬಿಡುತ್ತಾ, ಕೆಮ್ಮುತ್ತಾ ನಿದ್ರೆಗೆ ಪ್ರಯತ್ನಿಸುತ್ತಿರುವುದನ್ನು ಕಂಡು, ಗಾಂಧಿ ಆಕೆ ಮುಕ್ತಿಗಾಗಿ ಹಾತೊರೆಯುತ್ತಿದ್ದಾಳೆ ಎಂದು ಭಾವಿಸಿ ಪತ್ನಿಯ ಸಾಂತ್ವನಕ್ಕಾಗಿ ರಾಮ್‌ಧುನ್ ಹಾಡುತ್ತಿದ್ದರು. ಆಗೆಲ್ಲ ಬಾ ಶಾಂತಿಯಿಂದ ಮಲಗುತ್ತಿದ್ದರು. ಬಾ ಅವರನ್ನು ಬಂಧನದಿಂದ ಬಿಡುಗಡೆ ಮಾಡಿ ಸೇವಾಗ್ರಾಮಕ್ಕೆ ಸ್ಥಳಾಂತರಿಸುವ ಸಲಹೆಯೊಂದನ್ನು ಸರ್ಕಾರ ಪರಿಶೀಲಿಸಿತಾದರೂ, ಅದು ಗಾಂಧಿಯವರ ತಾತ್ಕಾಲಿಕ ಬಿಡುಗಡೆಯನ್ನೂ ಅನಿವಾರ್ಯವಾಗಿಸಿ ಪರಿಸ್ಥಿತಿ ಜಟಿಲವಾಗುವುದೆಂದು ಆ ಸಲಹೆಯನ್ನು ತಿರಸ್ಕರಿಸಿತು. ಗಾಂಧಿ ಕೂಡ ಪತ್ನಿಯ ಬಿಡುಗಡೆಗಾಗಿ ಅರ್ಜಿ ಸಲ್ಲಿಸಲು ನಿರಾಕರಿಸಿದರು.



ಬಾಗೆ ಮೂರನೆಯ ಬಾರಿಗೆ ಹೃದಯಾಘಾತವಾಗಿ ಅವರ ಅಂತ್ಯ ಸಮೀಪಿಸುತ್ತಿದೆ ಎನ್ನುವಾಗ ಪ್ರಭಾವತಿ ಮತ್ತು ಮನು ಗಾಂಧಿ, ಬಾ ಅವರ ಉಪಚಾರಕ್ಕಾಗಿ ಸೆರೆಮನೆಗೆ ಬರಲು ಅನುಮತಿ ನೀಡಲಾಯಿತು. ಗಾಂಧಿಯವರ ಮನವಿಯ ಮೇರೆಗೆ ಆಯುರ್ವೇದ ವೈದ್ಯ ಶಿವಶರ್ಮ ಮತ್ತು ನಿಸರ್ಗ ಚಿಕಿತ್ಸಾ ತಜ್ಞ ದೀನ್‌ಶಾ ಮೆಹ್ತಾ ಬಂದು ರೋಗಿಯನ್ನು ಪರೀಕ್ಷಿಸಿ ಕೆಲ ಸಲಹೆಗಳನ್ನು ನೀಡಿದರು. ಎಲ್ಲ ಚಿಕಿತ್ಸೆಗಳಿಗಿಂತ ಹೆಚ್ಚಾದ ಚಿಕಿತ್ಸೆ ಬಾಗೆ ಮಕ್ಕಳ ದರ್ಶನ ಮತ್ತು ಕನು ಹಾಡುವ ಸುಶ್ರಾವ್ಯ ಭಜನೆಗಳಿಂದ ದೊರಕುತ್ತಿತ್ತು. ಆದರೆ ಹರಿಲಾಲ ಬಂದಾಗ ಅವರು ಭಾವಾವೇಶಕ್ಕೆ ಒಳಗಾಗುತ್ತಿದ್ದರು. ಒಮ್ಮೆ ಅವನು ಪಾನಮತ್ತನಾಗಿಯೇ ಬಂದಾಗ ಅವರು ತೀವ್ರ ಅಶಾಂತರಾಗಿದ್ದರು.

## ಕಸ್ತೂರಬಾ ನಿಧನ-ಕಲ್ಲಾಗಿ ಕೂತ ಗಾಂಧಿ

ಬಾಗೆ ಶ್ವಾಸಕೋಶದ ತೀವ್ರ ಸೋಂಕು ಉಂಟಾಗಿತ್ತು, ದೇವದಾಸ್ ಆಗ ಮಾರುಕಟ್ಟೆಯಲ್ಲಿ ಅಲಭ್ಯವಾಗಿದ್ದ ಪೆನ್ಸಿಲಿನ್ ಅನ್ನು ಕಷ್ಟಪಟ್ಟು ಹುಡುಕಿ ತಂದಿದ್ದ. ಆದರೆ ಗಾಂಧಿ ಅದರ ಪ್ರಯೋಗ ಬೇಡವೆಂದರು. 'ಸಾವಿನೆಡೆಗೆ ಸಾಗುತ್ತಿರುವ ಜೀವಕ್ಕೆ ದಿನಕ್ಕೆ ಮೂರು ಬಾರಿ ಅದನ್ನು ಚುಚ್ಚಿ ಅನಗತ್ಯ ನೋವು ತರುವಿರೇಕೆ?' ಎಂದು ಕೇಳಿದರು. ಅಲ್ಲಿದ್ದ ವೈದ್ಯರುಗಳಿಗೂ ಆ ಪ್ರಶ್ನೆ ಹಾಕಿದರು. ಆದರೆ ಇತರ ಆಧುನಿಕ ಚಿಕಿತ್ಸೆಗೆ ಅವರು ಅಡ್ಡಿ ಬರಲಿಲ್ಲ. ಬಾ ಯಾವ ಚಿಕಿತ್ಸೆಗೂ ಸ್ಪಂದಿಸದೆ ಅರೆ

ಪ್ರಜ್ಞಾವಸ್ಥೆಗೆ ಜಾರಿದರು. ಅಂದು ೧೯೪೪ರ ಫೆಬ್ರುವರಿ ೨೨. ಶಿವರಾತ್ರಿಯ ದಿನ. ಸಂಜೆ ಸುಮಾರು ಆರು ಘಂಟೆಯ ಹೊತ್ತಿಗೆ ಬಾ ಗಾಂಧಿಯವರಿಗೆ ಹತ್ತಿರ ಬರಲು ಸನ್ನೆ ಮಾಡಿದರು. ಆತಂಕದಿಂದ ಗಾಂಧಿ ತಮ್ಮ ಪತ್ನಿಯ ಭುಜ ಎತ್ತಿ ತಮ್ಮ ಎದೆಗೆ ಆನಿಸಿಕೊಂಡರು. ಆ ಕ್ಷಣದಲ್ಲೇ ಬಾ ಅವರ ಪ್ರಾಣ ಪಕ್ಷಿ ಹಾರಿಹೋಗಿತ್ತು. ವೈದ್ಯರು ನಾಡಿ ನೋಡಿ ಪರೀಕ್ಷಿಸಿ ಸಾವನ್ನು ಖಚಿತಪಡಿಸಿದರು. ದೇವದಾಸ ಅಮ್ಮನನ್ನು ತಬ್ಬಿ ಸಣ್ಣ ಮಗುವಿನಂತೆ ರೋದಿಸತೊಡಗಿದ. ಅವನನ್ನು ತಡೆಯುವ ಮನಸ್ಸು ಅಲ್ಲಿ ಯಾರಿಗೂ ಇರಲಿಲ್ಲ.

ಬಾ ಅವರ ದೇಹಕ್ಕೆ ಸ್ನಾನ ಮಾಡಿಸಲು ಹೊರಟಾಗ ಗಾಂಧಿ ಯಾರ ಮಾತನ್ನೂ ಒಪ್ಪದೆ, ತಾವೂ ಅದರಲ್ಲಿ ಸೇರಿಕೊಂಡರು. ನಂತರ ಗಾಂಧಿ ನೂತಿದ್ದ ನೂಲಿನಿಂದಲೇ ನೇಯ್ದಿದ್ದ ಖಾದಿ ಸೀರೆಯೊಂದನ್ನು ಆಯ್ದು ಮೃತ ದೇಹಕ್ಕೆ ಉಡಿಸಲಾಯಿತು. ಖಾದಿ ಹಾರವೊಂದನ್ನು ತೊಡಿಸಲಾಯಿತು.

ಬಾ ಅವರ ಅಂತಿಮ ಸಂಸ್ಕಾರಕ್ಕೆ, ಆ ಅರಮನೆಯ ಬಯಲಿನ ಒಂದೆಡೆ ಸಿದ್ಧತೆಗಳು ನಡೆದಿದ್ದಾಗ ಗಾಂಧಿ ದೇಹದ ಬಳಿ ಕಲ್ಲಿನಂತೆ ಕೂತಿದ್ದರು. ಅಂತಿಮ ಸಂಸ್ಕಾರಕ್ಕಾಗಿ ದೇಹವನ್ನು ಒಯ್ದ ಮೇಲೂ ಅವರು ತಾಸುಗಟ್ಟಲೆ ಅಲ್ಲಿಯೇ ಹಾಗೇ ಕುಳಿತಿದ್ದರು. ಅರವತ್ತು ವರ್ಷಗಳ ದಾಂಪತ್ಯವದು. ಪೋರ್‌ಬಂದರ್, ರಾಜಕೋಟೆ, ಬಾಂಬೆ, ಜೊಹಾನ್ಸ್‌ಬರ್ಗ್, ಫೀನಿಕ್ಸ್, ಟಾಲ್‌ಸ್ಟಾಯ್ ಆಶ್ರಮ, ಸಬರ್ಮತಿ, ವರ್ಧಾ ಹೀಗೆ ಹಲವೆಡೆ ನೆಲೆಯೂರಿ ಬಾಳುವೆ ಮಾಡಿದ್ದ ಜೋಡಿಯದು. ಗಾಂಧಿಯವರ ಹಲವು ಹುಚ್ಚಾಟಗಳನ್ನೂ, ಚಿತ್ರವಿಚಿತ್ರ ವ್ರತಗಳನ್ನೂ, ಸರ್ವ ದಿಕ್ಕುಗಳಿಂದಲೂ ಬರುತ್ತಿದ್ದ ನೂರಾರು ನೈತಿಕ ನಿಯಮಗಳನ್ನು ಸಹಿಸಿಯೋ, ಮೆಚ್ಚಿಯೋ, ಹೊಂದಿಕೊಂಡೋ ಹಣ್ಣಾಗಿದ್ದ ಮುಗ್ಧ ಜೀವವದು. ಒಂದು ಹಂತದ ನಂತರ ಗಂಡನ ಉಪಚಾರದ ಹೊಣೆಯನ್ನು ಯಾವುದೇ ಕಹಿ ಇಲ್ಲದೆ ಇತರ ಹೆಣ್ಣುಮಕ್ಕಳಿಗೆ ಬಿಟ್ಟುಕೊಟ್ಟಿದ್ದ ಉದಾರಿ ಸ್ತ್ರೀ ಹೃದಯವದು. ಹಲವಾರು ಬಾರಿ ಗಂಡನೊಡನೆ ಹೋರಾಟಗಳಲ್ಲಿ ಸೇರಿಕೊಂಡು ಸೆರೆಮನೆಗೂ ಹೋಗಿ ಬರುತ್ತಾ, ಈಗ ಸೆರೆಮನೆಯಲ್ಲೇ ಮಣ್ಣಾದ ತ್ಯಾಗಶೀಲ ವ್ಯಕ್ತಿತ್ವವದು.



ಹೊರಗೆ ದೇವದಾಸ ತಮ್ಮ ತಾಯಿಯ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿಯಾಗಿತ್ತು. ಗಾಂಧಿ ಎದ್ದು, ಬಾ ರಾತ್ರಿ ಕೆಮ್ಮಲು ಸರಾಗವಾಗಿ ಉಸಿರಾಡಲು ಬಳಸುತ್ತಿದ್ದ ಮರದ ಸ್ಟೂಲನ್ನು ಒಮ್ಮೆ ಆತ್ಮೀಯವಾಗಿ ಸವರಿ ಒಂದು ಕಡೆ ಎತ್ತಿಟ್ಟುಕೊಂಡರು. ಅದು ಅವರು ಬದುಕಿರುವವರೆಗೂ ಅವರ ಊಟದ ಪುಟ್ಟ ಮೇಜಾಯಿತು.

ಅಹಮದಾಬಾದ್, ಬಾಂಬೆ, ಸೂರತ್, ನಾಸಿಕ್, ಮೀರಜ್, ಜಬ್ಬಲಪುರ ಸೇರಿದಂತೆ ದೇಶದ ನೂರಾರು ಊರುಗಳಲ್ಲಿ ಬಂದ್ ಆಚರಿಸಿ ಬಾ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ದರ್ಬಾನ್ ಮತ್ತು ಜೋಹಾನ್ಸ್‌ಬರ್ಗ್‌ಗಳಲ್ಲೂ ಜನ ಸಭೆ ಸೇರಿ ಶ್ರದ್ಧಾಂಜಲಿ ಅರ್ಪಿಸಿದರಲ್ಲದೆ, ಫೀನಿಕ್ಸ್ ಆಶ್ರಮದ ಆವರಣದಲ್ಲಿ ಬಾ ಸ್ಮರಣಾರ್ಥ ಬಾಲಿಕೆಯರ ಶಾಲೆಯೊಂದನ್ನು ಸ್ಥಾಪಿಸಲು ಆ ಸಭೆಯಲ್ಲೇ ಐದು ಸಾವಿರ ಪೌಂಡ್‌ಗಳ ನಿಧಿ ಸಂಗ್ರಹಿಸಲಾಯಿತು. ಜಗತ್ತಿನ ಮೂಲೆ ಮೂಲೆಗಳಿಂದ ಶೋಕ ಮತ್ತು ಸಂತಾಪ ಸೂಚಕ ಸಂದೇಶಗಳು ಬಂದವು. ಆದರೆ ಈ ಯಾವ ಶೋಕ–ಸಂತಾಪ ಸಂದೇಶಗಳೂ ಭರಿಸಲಾಗದ ಶೂನ್ಯ ಗಾಂಧಿಯವರನ್ನು ಆವರಿಸಿತ್ತು. ಅವರು ವೈಸ್‌ರಾಯ್ ವೇವೆಲ್ ಮತ್ತು ಅವರ ಪತ್ನಿ ಕಳಿಸಿದ್ದ ಸಂದೇಶಕ್ಕೆ ಉತ್ತರಕೊಡುತ್ತಾ, 'ಅವಳು ಕೊನೆಯುಸಿರೆಳೆದಾಗ ಅವಳು ಯಾತನೆಯಿಂದ ಮುಕ್ತಳಾದಳೆಂದು ಸಮಾಧಾನಪಟ್ಟುಕೊಂಡಿದ್ದೆ. ಆದರೆ ಈಗ ಅವಳ ವಿಯೋಗ ನಾನೆಣಿಸಿದ್ದಕ್ಕಿಂತ ಎಷ್ಟು ದೊಡ್ಡ ಅವಗಢ ಎಂದು ಗೊತ್ತಾಗುತ್ತಿದೆ. ಅವಳ ದೃಢ ಮನಸ್ಕತೆ, ಸಂಕಲ್ಪ ಶಕ್ತಿಗಳಿಂದ ನಾನು 'ನಿರಾಕರಣೆ'ಯ ಶಕ್ತಿ ಎಂಥದು ಎಂಬುದನ್ನು ಅರಿತೆ. ಅವಳು ನನಗೆ ಗುರುವಾಗಿದ್ದಳು' ಎಂದು ಬರೆದಿದ್ದುದರಲ್ಲೇ ಇದು ಸುಸ್ಪಷ್ಟವಾಗಿ ವ್ಯಕ್ತವಾಗಿತ್ತು.

## ಗಾಂಧಿ ಕಂಡ ಕಸ್ತೂರಬಾ ದರ್ಶನ

ಗಾಂಧಿ ಬಂಗಾಳ ಬಿಟ್ಟು, ತಮಗೆ ಕರೆ ಬಂದಿದ್ದ ಬಿಹಾರಕ್ಕೆ ಹೊರಡುವ ಮಾರ್ಗದಲ್ಲಿ, ಫೆಬ್ರುವರಿ ೧೯ರಂದು ಬಿರಾಂಪುರದಲ್ಲಿದ್ದರು. ಅಂದು ಶಿವರಾತ್ರಿ, ಕಸ್ತೂರಬಾ ಅವರ ಮರಣದ ದಿನ. ಅಂದು ಗಾಂಧಿ ಕೋರಿಕೆಯಂತೆ ಮನೂ ಇಡೀ ಭಗವದ್ಗೀತೆಯನ್ನು ಓದಿದಳು. ನಂತರ ಗಾಂಧಿ, ಮನೂಳ ಸೋದರಿಯರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದ್ದರು: 'ಎಂಟನೆಯ ಅಧ್ಯಾಯದ ನಂತರ ನನಗೆ ಸ್ವಲ್ಪ ಆಯಾಸವಾದಂತಾಗಿ ಕಾಲು ಚಾಚಿ ಪವಡಿಸಿದೆ. ಆಗ ಕಸ್ತೂರಬಾ ಬಂದು ನನ್ನ ತೊಡೆಯ ಮೇಲೆ ತಲೆ ಇಟ್ಟು ಮಲಗಿದ ಅನುಭವ ನನಗಾಯಿತು'.



ಗಾಂಧಿ ನೌಖಾಲಿಯಿಂದ ಈಗ ಕರೆ ಬಂದಿದ್ದ ಬಿಹಾರದತ್ತ ಹೊರಟಿದ್ದರು. ಇನ್ನೊಂದು ಅಗ್ನಿ ಪರೀಕ್ಷೆಯ ಪಯಣದ ಹಾದಿಯಲ್ಲಿ. ಅವರೇ ಮೀರಾಗೆ ಬರೆದ ಒಂದು ಪತ್ರದಲ್ಲಿ ಬರೆದಂತೆ 'ಸತ್ಯದ ಹಾದಿ ತುಂಬ ಅಸ್ಥಿಪಂಜರಗಳೇ ತುಂಬಿವೆ. ಆದರೇನು, ನಾವು ಧೈರ್ಯದಿಂದ ಹೆಜ್ಜೆ ಹಾಕಲೇಬೇಕು. (ಮುಗಿಯಿತು)

(ರೇಖಾ ಚಿತ್ರಗಳು: **ಬಿ.ಜಿ. ಗುಜ್ಜಾರಪ್ಪ**)

---

**೮ನೇ ಪುಟದಿಂದ)**

ರೂ.೯೨೦೦/- ಕೋಟಿಗೆ ಏರಿಕೆಯಾಗಿದೆ. ನಿವ್ವಳ ನಷ್ಟ ರೂ.೬೦೦/- ಕೋಟಿ ಆಗಿದೆ. ಖರ್ಚಿನ ಬಾಪ್ತಿನಲ್ಲಿ ಸೇರುವ ನಷ್ಟದ ಪ್ರಮಾಣಾನುಪಾತವು (provision coverage ratio) ೪೩% ಆಗಿದ್ದು ತೀರಾ ಆತಂಕಕಾರಿಯಾಗಿದೆ.

ಜೆಪಿ ಮೋರ್ಗನ್ ಮತ್ತು ಮ್ಯಾಕ್ವರಿ ಕ್ಯಾಪಿಟಲ್ ಇಬ್ಬರೂ, ಯೆಸ್ ಬ್ಯಾಂಕ್‌ನ ಒಟ್ಟು ಸಂಪತ್ತಿನ(ಅಂದಾಜು ರೂ.೨೫೦೦೦ ಕೋಟಿ) ಮೌಲ್ಯವು ತೀವ್ರ ಕುಸಿತ ಕಂಡಿದೆಯೆಂದೂ, ಬ್ಯಾಂಕಿನ ಶೇರು ಮೌಲ್ಯವು ರೂ.೧ ಕ್ಕಿಂತ ಹೆಚ್ಚು ಇರುವುದು ಸಾಧ್ಯವಿಲ್ಲವೆಂದೂ ಪರಿಗಣಿಸುತ್ತಾರೆ.

ಒಟ್ಟು ರೂ.೨೦೦,೦೦೦ ಕೋಟಿ ಸಾಲದ ಕಡತದಲ್ಲಿ ಏನಿಲ್ಲವೆಂದರೂ ಕನಿಷ್ಠ ಶೇಕಡಾ ೧೫ ರಷ್ಟು ಭಾಗದ ಕ್ರೆಡಿಟ್ ರೇಟಿಂಗ್(ಸಾಲ ತೀರಿಸುವ ಭರವಸೆಯ ಅಂದಾಜು), ಕಡಿಮೆ(ಜಂಕ್) ದರ್ಜೆಯದ್ದು. ಮತ್ತೆ ಶೇಕಡಾ ೨೫ ರಷ್ಟು ಅತೀ ಕಡಿಮೆ ದರ್ಜೆಯದ್ದು. ಈ ಎರಡೂ ದರ್ಜೆಗಳ ಸಾಕಷ್ಟು ಪ್ರಮಾಣದ ಸಾಲವನ್ನು ಮನ್ನಾ ಮಾಡಿದರೂ ಕೂಡ ಸದ್ಯದ ನಿವ್ವಳ ಮೌಲ್ಯವು ಸೊನ್ನೆಗೆ ಹತ್ತಿರದಲ್ಲಿದೆ ಎಂದು ಮ್ಯಾಕ್ವರಿ ಅಭಿಪ್ರಾಯಪಡುತ್ತಾರೆ.



**(ಅಂಜನ್ ಬಸು ಮೂರು ದಶಕಗಳ ಕಾಲ ಎಸ್.ಬಿ.ಐ. ಸೇರಿದಂತೆ ಭಾರತದ ಅತಿದೊಡ್ಡ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಉನ್ನತ ಹುದ್ದೆಗಳನ್ನಲಂಕರಿಸಿದ್ದ ನಮ್ಮ ಬ್ಯಾಂಕಿಂಗ್ ಪರಿಣತರಲ್ಲೊಬ್ಬರಾಗಿದ್ದಾರೆ.)**

(ಕೃಪೆ: ***ಜನತಾ***, ೧೫, ಮಾರ್ಚ್, ೨೦೨೦

ಸಂಗ್ರಹಾನುವಾದ: **ಟಿ.ಎಲ್.ರೇಖಾಂಬ** )


## ಗಾಂಧಿ-ಲೋಹಿಯಾ ಕುರಿತ ಹೊಸ ಪುಸ್ತಕಗಳು

**ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ'ದ ನಾಲ್ಕನೇ ಮುದ್ರಣಕ್ಕೆ ಸಿದ್ಧವಾಗುತ್ತಿದ್ದು, ಮೂರನೆಯ ಮುದ್ರಣದ ಕೆಲವೇ ಪ್ರತಿಗಳು ಉಳಿದಿದ್ದು. ಅವು ಮತ್ತು ಡಿ.ಎಸ್. ನಾಗಭೂಷಣ ಅವರೇ ಸಂಪಾದಿಸಿರುವ 'ರಸಿಕರುದ್ರ ತಪಸ್ವಿ ಲೋಹಿಯಾ' ಮತ್ತು 'ಸಮಾಜವಾದದ ಸಾಲು ದೀಪಗಳು' ಎಂಬ ಇನ್ನೆರಡು ಸಮಾಜವಾದಿ ಸಾಹಿತ್ಯ ಕೃತಿಗಳು ಈಗ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯವಿವೆ.**







**ಗಾಂಧಿ ಕಥನ ರಸಿಕ ರುದ್ರತಪಸ್ವಿ ಲೋಹಿಯಾ ಸಮಾಜವಾದದ ಸಾಲುದೀಪಗಳು**

**ಆಸಕ್ತರು ಪ್ರತಿಗಳಿಗಾಗಿ ಸಂಪರ್ಕಿಸಿ: ೯೪೮೧೩೫೧೦೭**

**ಕಥೆ**

# ಕೂರಿಗೆ

**–ಮಹಾಂತೇಶ ಓಶಿಮಠ**



**ಚಿತ್ರ: ಗುಜ್ಜಾರ್**

**ಸರಳ ಸುಂದರ ಮತ್ತು ಸ್ಫಟಿಕ ಶುದ್ಧ ಹಾಗೂ ಮುಗ್ಧ ನಿರೂಪಣೆಯ ಈ 'ಕಥೆ'ಯನ್ನು, ಆ ನಿರೂಪಣೆಯ ಸೊಗಸನ್ನು ಆಸ್ವಾದಿಸಲೆಂದೇ ಓದಬೇಕು.. ಇಲ್ಲಿ ಯಾವುದೇ ಬೆಡಗು–ಬಿನ್ನಾಣಗಳಿಲ್ಲದೆ, ಇದ್ದರೂ ಇಲ್ಲದಂತಿರುವ 'ಕಥೆ'ಗಾಗಿ ಅಲ್ಲ. ಇದೇನೂ ಕಥೆಗಾರಿಕೆಯ ಸಾಮಾನ್ಯ ಹದವಲ್ಲ.**–ಸಂ.

"ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ"–**ಗಾಂಧೀಜಿ**

**ರೈ**ತ ಚನ್ನಬಸವಯ್ಯ ವಿಶಾಲವಾದ ಹೊಲದಲ್ಲಿ ಬೆಳೆದು ನಿಂತ ಫಸಲನ್ನು ನೋಡುತ್ತಾ ಆನಂದಭರಿತನಾಗಿ ಮುಖಕ್ಕೆ ತಣ್ಣೀರನ್ನು ಚಿಮಿಕಿಸಿಕೊಳ್ಳುತ್ತಿದ್ದ. ಸಮೀಪದಲ್ಲೆ ಮಗಳು ಶಾರದೆ ಹಾಗೂ ಮಡದಿ ದಾಕ್ಷಾಯಿಣಿ ಬುತ್ತಿಗಂಟನ್ನು ಬಿಚ್ಚುತ್ತಾ ಹುಣಸೆ ಮರದ ನೆರಳಿನಲ್ಲಿ ಕುಳಿತಿದ್ದರು. ರಾಯಚೂರಿನ ಕೃಷಿ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿ ಹಿಂದಿರುಗಿದ್ದ ಪುತ್ರ ಚಂದ್ರಶೇಖರ ಹೊಲದ ಮತ್ತೊಂದು ಅಂಚಿನಿಂದ ಹೆಂಟೆಗಳನ್ನು ನವಣೆ ತೆನೆಗಳತ್ತ ತೂರುತ್ತಾ ತಂದೆಯೆಡೆಗೆ ಧಾವಿಸಿ ಬರುತ್ತಿದ್ದ. ಬಂದವನೆ ತುಸು ಕೋಪದಿಂದ "ಅಪ್ಪ, ನಿನಗ್ ಎಷ್ಟ್ ಸರ್ತಿ ಹೇಳಿನಿ ಈ ಹಾಳು ಕಬ್ಬಕ್ಕಿ, ರಾಟವಾಳ ಮತ್ತ್ ಗಿಣಿಗಳನ್ನ್ ಹೊಲದಿಂದ ಓಡಸಾಕ್ ಮಷಿನ್ ತರೋಣಂತ್, ನೀ ನೋಡಿದ್ರ ನಾ ಹೇಳಿದ್ದ್ ತಲ್ಯಾಗ ಹಾಕ್ಕೊಳ್ಳೊದಿಲ್ಲಾಗಿ" ಅಂತ ಬೇಸರಿಸಿದ. ಚನ್ನಬಸವಯ್ಯ ಕೈಯಲ್ಲಿರುವ ನೀರಿನ ತಂಬಿಗೆಯನ್ನು ಮಗನಿಗೆ ಕೊಟ್ಟು "ಈಗ ಊಟಕ್ಕ್ ಹೊತ್ತಾಗೈತಿ, ಕೈ ತೊಳಿ" ಅಂತ ಸಮಾಧಾನ ಪಡಿಸಿದ. ತಂದೆ–ಮಗ ಊಟಕ್ಕೆ ಕುಳಿತುಕೊಳ್ಳುತ್ತಿದ್ದಂತೆ, ಆರನೆಯ ತರಗತಿಯಲ್ಲಿ ಕಲಿಯುತ್ತಿರುವ ಬೊಗಸೆಗಣ್ಣಿನ ಶಾರದೆ ಇಬ್ಬರಿಗೂ ಮುತ್ತಲ ಎಲೆಗಳ ಪತ್ರಾವಳಿಗಳಲ್ಲಿ ಜೋಳದ ರೊಟ್ಟಿಗಳನ್ನು ರಂಜಕಾ, ಅಗಸೆಚಟ್ನಿ, ಮೊಸರು, ಈರುಳ್ಳಿ ಹಾಗೂ ಎಣ್ಣೆಗಾಯಿ ಪಲ್ಯಗಳೊಂದಿಗೆ ಬಡಿಸಿದಳು.

ಕಾಲೇಜಿಗೆ ಸೇರುತ್ತಿದ್ದಂತೆ ಚಂದ್ರಶೇಖರ ಕೃಷಿ ಕ್ಷೇತ್ರದ ನವನವೀನ ಅವಿಷ್ಕಾರಗಳು, ಹನಿ ನೀರಾವರಿ ಹಾಗೂ ಇನ್ನಿತರ ನವನವೀನ ಬೆಳವಣಿಗೆಗಳನ್ನು ನೋಡುತ್ತಾ, ಕಲಿಯುತ್ತಾ ತಂದೆಗೆ ಮಾರ್ಗದರ್ಶನ ಮಾಡಲಾರಂಭಿಸಿದ್ದ. ಕೃಷಿ ಮೇಳಗಳಿಗೆ ತಂದೆ, ತಾಯಿ ಹಾಗೂ ಪುಟ್ಟ ತಂಗಿಯನ್ನು ಕರೆದುಕೊಂಡು ಹೋಗುತ್ತಿದ್ದ. ಚನ್ನಬಸವಯ್ಯ ತನಗೆ ಸರಿ ಅನಿಸಿದ ಹನಿನೀರಾವರಿ, ಅಂತರಬೆಳೆ ಹಾಗೂ ಎರೆಹುಳು ಗೊಬ್ಬರ ತಯಾರಿಸುವ ಮಗನ ವಿಚಾರಗಳಲ್ಲಿ ಸಾಥ್ ಕೊಟ್ಟಿದ್ದ. ಆದರೆ, ಹೊಲದಲ್ಲಿ ಮತ್ತೊಂದು ಬೋರವೆಲ್ ಕೊರೆಸುವುದಕ್ಕೆ ಮತ್ತು ಹಕ್ಕಿಗಳನ್ನು ಓಡಿಸಲು ಯಂತ್ರವನ್ನು ಖರೀದಿಸಲು ಸುತಾರಾಂ ಮನಸ್ಸು ಮಾಡಿರಲಿಲ್ಲ. ಹೊಸ ತಲೆಮಾರಿನ ಮಗ ಹಾಗೂ ಹಳೆ ವಿಚಾರಗಳ ಅಪ್ಪನ ನಡುವೆ ಅನೇಕ ವಿಷಯಗಳಲ್ಲಿ ವಾದಗಳು ನಡೆಯುತ್ತಿದ್ದವು. ಇವನ್ನು ಗಮನಿಸುತ್ತಿದ್ದ ದಾಕ್ಷಾಯಿಣಿ ನಡುವೆ ಬಂದು ಸಂಧಾನಕ್ಕಿಳಿಯುತ್ತಿದ್ದಳು. ಜಗಳವೆಲ್ಲಿ ವಿಕೋಪಕ್ಕೆ ಹೋಗಿ ಮಗ ನಮ್ಮಿಂದ ದೂರವಾದಾನೋ ಎಂಬ ಅಳುಕು ಬೇರೆ ಅವಳಿಗೆ! ಊಟಕ್ಕೆ ಕುಳಿತಿದ್ದ ತಂದೆ–ಮಗ ಸಮನಾಗಿ ಐದ್ಯೆದು ರೊಟ್ಟಿಗಳನ್ನು ತಿಂದು, ಮೇಲೆ ಅಂಬಲಿಯನ್ನು ಕುಡಿದು ಕೈತೊಳೆದು ನೆರಳಿನಲ್ಲಿರುವ ಹೊರುಸುಗಳ ಮೇಲೆ ಮೈಚೆಲ್ಲಿದರು. ಇತ್ತ ಅವ್ವ ಮತ್ತು ಮಗಳು ಊಟವನ್ನು ಬಡಿಸಿಕೊಳ್ಳಲು ಪ್ರಾರಂಭಿಸುತ್ತಿದ್ದಂತೆ, ಅಪ್ಪ ಮಗ ನಿದ್ರೆಗೆ ಜಾರಿದರು.

ಚಂದ್ರಶೇಖರನ ಅಜ್ಜ ಶಂಕರಯ್ಯ ತನ್ನಿಬ್ಬರು ಪುತ್ರರಾದ ನಾಗಯ್ಯ ಹಾಗೂ ಚನ್ನಬಸವಯ್ಯನಿಗೆ ತನ್ನಲ್ಲಿದ್ದ ೨೦ ಎಕರೆ ಹೊಲವನ್ನು ಸಮನಾಗಿ ಹಂಚಿದ್ದ. ಇಬ್ಬರು ಪುತ್ರರ ಹೊಟ್ಟೆಯ ಮೇಲೆ ಹುಟ್ಟಿದ್ದ ಮಗಳು ಸುಮಂಗಲೆಯನ್ನು ಪಕ್ಕದ ಊರಿನ ಶ್ಯಾನುಬೋಗರ ಮನೆಗೆ ಮದುವೆ ಮಾಡಿಕೊಟ್ಟಿದ್ದ. ಹೊಲ ಮನೆ ಪಾಲಾದ ನಂತರ ತಂದೆ–ತಾಯಿ ಕಿರಿಯ ಚನ್ನಬಸವಯ್ಯನ ಆಶ್ರಯದಲ್ಲೆ ಜೀವನ ಸಾಗಿಸಿ ದಶಕದ ಹಿಂದೆ ಒಬ್ಬರ ಹಿಂದೊಬ್ಬರು ಲಿಂಗೈಕ್ಯರಾಗಿದ್ದರು. ಸಹೋದರರಿಬ್ಬರು ಉಳುತ್ತಿದ್ದ ಮಳೆಯಾಶ್ರಿತ ಭೂಮಿಯ ಮಣ್ಣಿನ ಫಲವತ್ತತೆ ಸಮೃದ್ಧವಾಗಿತ್ತು. ಮುಂಗಾರು ಹಾಗೂ ಹಿಂಗಾರು ಬೆಳೆಗಳನ್ನು ಆರ್ಥಿಕ ನಷ್ಟವಿಲ್ಲದೆ ಬೆಳೆಯುತ್ತಿದ್ದರು. ಒಂದೆ ಹಂದರದಲ್ಲಿ ಲಗ್ನವಾದ ವರ್ಷದಲ್ಲೆ ಇಬ್ಬರಿಗೂ ಚೊಚ್ಚಲ ಗಂಡು ಮಕ್ಕಳು ಹುಟ್ಟಿದವು. ಹೀಗೆ ಸುಖಿ ಸಂಸಾರಗಳನ್ನು ನಡೆಸುತ್ತಿದ್ದ ಸಹೋದರರಿಬ್ಬರೂ ಬೋರ್‌ವೆಲ್ ಕಂಪನಿಗಳ ದುಂಬಾಲಿಗೆ ಬಿದ್ದು ತಮ್ಮ ತಮ್ಮ ಹೊಲಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸಿದರು. ಹಿರಿಯ ನಾಗಯ್ಯನಿಗೆ ೨೦೦ ಅಡಿಗಳಿಗೆ ಮೂರು ಇಂಚುಗಳಷ್ಟು ನೀರು ಚಿಮ್ಮಿದರೆ ಕಿರಿಯನಿಗೆ ೪೦೦ ಅಡಿಗಳಿಗೆ ಕೇವಲ ಒಂದಿಂಚು ದಪ್ಪ ನೀರು ಹರಿಯಿತು.

## ೨

ಕೆಲ ಋತುಮಾನಗಳಲ್ಲಿ ಮಳೆಬರದೆ ಬರವಿದ್ದರೂ ಧೃತಿಗೆಡದೆ ಕೇವಲ ಮಂಜಿನ ತೇವಾಂಶದಲ್ಲೇ ಬೆಳೆಯನ್ನು ಬೆಳೆದು ಊರಿಗೆ ಮಾದರಿಯಾಗಿದ್ದ ಶಂಕರಯ್ಯನ ಹಿರಿಯ ಮಗ ನಾಗಯ್ಯ ಕೊಳವೆ ಬಾವಿಗಳೆಂಬ ಅಂತರಗಂಗೆಯ ಮೋಹದಿಂದ ಜೋಳ, ಶೇಂಗಾ, ಸೂರ್ಯಕಾಂತಿ, ನವಣೆಗಳ ಬದಲಾಗಿ ಕಬ್ಬು ಹಾಗೂ ಭತ್ತದ ಕಡೆಗೆ ವಾಲಿದ. ಹೊಸದಾಗಿ ಕೊಳವೆ ಬಾವಿಯ ನೀರುಂಡ ಭೂಮಿಯು ಮೊದಲ ನಾಲ್ಕು ವರುಷಗಳಲ್ಲಿ ಬಂಪರ್ ಬೆಳೆ ಕೊಟ್ಟಿದ್ದಕ್ಕೆ ಮರುಳಾಗಿ ನಾಗಯ್ಯ ಬೋರ್‌ವೆಲ್ ಕಂಪನಿಗಳಿಗೆ ದುಂಬಾಲು ಬಿದ್ದು ಮತ್ತೆರಡು ಕೊಳವೆ ಬಾವಿಗಳನ್ನು ಕೊರೆಸಿದ. ಆದರೆ, ಅವನಿಗೆ ಈ ಪ್ರಯತ್ನಗಳಲ್ಲಿ ಅಂತರಗಂಗೆ ಒಲಿಯಲಿಲ್ಲ. ಲಕ್ಷಗಟ್ಟಲೆ ಹಣ ನಷ್ಟವಾಯಿತಲ್ಲದೆ ಮೂರು ವರುಷದ ಪ್ರಾಯದ ಎರಡನೆಯ ಮಗ, ಮೂರನೆಯ ಕೊಳವೆ ಬಾವಿಯ ಆಳಕ್ಕೆ ಜಾರಿ ಹತನಾದ. ಆದರೆ ಇತ್ತ ಕಿರಿಯ ಚನ್ನಬಸವಯ್ಯ ಅಪ್ಪನ ಮಾತುಗಳನ್ನು ಕೇಳಿ ಮುಕ್ಕಾಲು ಭಾಗದಲ್ಲಿ ಹಳೆಯ ಬೆಳೆಗಳನ್ನು ಉಳಿಸಿಕೊಂಡಿದ್ದ. ಸಮಗ್ರ ಕೃಷಿಯತ್ತ ಮನಸ್ಸು ಮಾಡಿ ಮಡದಿ ದಾಕ್ಷಾಯಿಣಿಯ ಸಲಹೆ ಸಹಕಾರಗಳೊಂದಿಗೆ ವಿವಿಧ ಬೆಳೆಗಳನ್ನು ಬೆಳೆಯುವುದರೊಂದಿಗೆ ಅಲ್ಲಲ್ಲಿ ಹಣ್ಣಿನ ಮರಗಿಡಗಳನ್ನು ನೆಡಿಸಿದ. ಮಗ ಚಂದ್ರಶೇಖರನನ್ನು ಪಿ.ಯು.ಸಿ ಮುಗಿಸುತ್ತಿದ್ದಂತೆ ಕೃಷಿ ಕಾಲೇಜಿಗೆ ಸೇರಿಸಿದ.

ಪ್ರತಿಭಾನ್ವಿತ ಚಂದ್ರಶೇಖರ ಕಾಲೇಜಿನ ಮೊದಲ ಸೆಮಿಸ್ಟರನಲ್ಲೇ ಅಧ್ಯಾಪಕರ ಹಾಗೂ ಸಹಪಾಠಿಗಳ ಮನ ಗೆದ್ದಿದ್ದ. ಗಂಡು ಮೆಟ್ಟಿನ ಗ್ರಾಮ ಅಂಗ್ರೊಳ್ಳಿಯ ರೈತರು ಚಂದ್ರಶೇಖರನ ವಿಶಾಲ ಭುಜಗಳನ್ನು ಹಾಗೂ ಎತ್ತರದ ನಿಲುವನ್ನು ಕುಸ್ತಿಪಟುವಾಗಿದ್ದ ಅವನ ಅಜ್ಜ ಶಂಕರಯ್ಯನಿಗೆ ಹೋಲಿಸುತ್ತಿದ್ದರು. ಸ್ಫುರದ್ರೂಪಿ ಚಂದ್ರಶೇಖರ ಓದಿನೊಂದಿಗೆ ಭಾಷಣ, ಕ್ರೀಡೆ, ಪರಿಸರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂದಿದ್ದ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಸ್ಥೈರ್ಯ ತುಂಬುತ್ತಿದ್ದ. ಸವ್ಯಸಾಚಿ ವ್ಯಕ್ತಿತ್ವದ ಚಂದ್ರಶೇಖರನಲ್ಲಿ ತನಗೆ ಅರಿವಿಲ್ಲದೆ ಸಹಪಾಠಿ ಅವನಿಯು ಆಕರ್ಷಿತಳಾಗಿದ್ದಳು. ಅವನೂ ಅಷ್ಟೇ. ಓದಿನಲ್ಲಿ ಕಾಲೇಜಿಗೆ ಪ್ರಥಮಳಾಗಿ ಉತ್ತೀರ್ಣಳಾಗುತ್ತಿದ್ದ ಅವನಿಯಲ್ಲಿ ಮೋಹಗೊಂಡಿದ್ದ. ಆದರೆ ಆಂತರ್ಯದ ಈ ತುಮುಲಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳದೆ ಮನದಲ್ಲೆ ಹುದುಗಿಸಿಕೊಂಡಿದ್ದರು. ಓದಿನೊಂದಿಗೆ ಸಾಮಾಜಿಕ ಹಾಗೂ ರಾಜಕೀಯ ಬೆಳವಣಿಗೆಗಳನ್ನು ಚರ್ಚಿಸುತ್ತಾ ಅನ್ಯೋನ್ಯವಾಗಿ ಪದವಿ ಕಾಲೇಜಿನ ದಿನಗಳನ್ನು ಮುಗಿಸಿ, ಸ್ನಾತಕೋತ್ತರ ಪದವಿಗಳನ್ನು ಪಡೆಯಲು ದೇಶದ ಬೇರೆ ಬೇರೆ ಅತ್ಯುನ್ನತ ವಿಶ್ವವಿದ್ಯಾಲಯಗಳಿಗೆ ಆಯ್ಕೆಯಾಗಿದ್ದರು.

"ಚಂದು...ಚಂದು.....ಏಳೋ.....ಹೊತ್ತ ಮುಳುಗುದಕ್ಕ್ ಬಂದೈತಿ ಏಳೊ" ಅಂತ, ಅವ್ವ ಮಗನ ಭುಜವನ್ನು ಅಲ್ಲಾಡಿಸಿದಾಗಲೇ ಅವನಿಗೆ ಮಂಪರು ಕಳೆದಿತ್ತು. ತನ್ನನ್ನು ಅವಚಿಕೊಂಡು ಮಲಗಿದ್ದ ತಂಗಿಯನ್ನು ಎಳಿಸುತ್ತಾ ಮೈಮುರಿದ ಚಂದ್ರಶೇಖರ. ಅತ್ತ, ಹುಣಸೆಮರದ ನೆರಳಿನ ತಂಪಿನಲ್ಲಿ ಗಡದ್ದಾಗಿ ನಿದ್ದೆ ಮಾಡುತ್ತಿದ್ದ ಗಂಡ ಚನಬಸವಯ್ಯನನ್ನು ಸಹ ಎಬ್ಬಿಸಿದಳು ಮಡದಿ. ಮುಖಕ್ಕೆ ನೀರು ಹಾಕಿ ಟವೆಲಿನಿಂದ ಒರೆಸಿಕೊಳ್ಳುತ್ತಾ ತೆನೆಗಳಲ್ಲಿನ ಕಾಳುಗಳನ್ನು ಕೀಳುತ್ತಿದ್ದ ಹಕ್ಕಿಗಳನ್ನು ನೋಡುತ್ತಾ ಕುಳಿತ ಮಗನನ್ನು ಗಮನಿಸಿದ ಚನ್ನಬಸವಯ್ಯ ಶಾಂತ ಮನಸ್ಸಿನಿಂದ ಅವನ ಹೆಗಲಿಗೆ ಕೈಹಾಕಿ "ನೋಡ ಮಗನ ನನ್ನ ಕಾಲಿನ ಗಾಯದ ಗುರ್ತನ್ನು" ಎಂದು ತನ್ನ ಬಲಗಾಲನ್ನು ಮಂಚದ ಮೇಲಿಟ್ಟು ತೋರಿಸಿದ. ಮಾಸಿರದ ಬರೆಯ ಬಾಸುಂಡೆಗಳನ್ನು ಅಚ್ಚರಿಯಿಂದ ನೋಡಿದ ಮಗಳು ಶಾರದೆ ಅವುಗಳನ್ನು ತನ್ನ ಪುಟ್ಟ ಬೆರಳುಗಳಿಂದ ಸ್ಪರ್ಶಿಸಿದಳು. ಈ ಮೊದಲು ತಂದೆಯ ಮೀನಖಂಡದ ಮೇಲಿರುವ ಬಾಸುಂಡೆಗಳನ್ನು ಮಗ ಗಮನಿಸಿರಲಿಲ್ಲ. ತಂದೆಯೇ ಮುಂದುವರೆದು "ಈ ಬರೀ ಅದಾವ್ ನೋಡ್, ನಿನ್ನಜ್ಜ ನಾ ಚಿಕ್ಕವ್ನಿರುವಾಗ್ ಹಾಕ್ಕಿದ್ದು, ನಿನ್ನ

ದೊಡ್ಡಪ್ಪನ ಮಾತಿಗ್ ಮರ್ಳಾಗಿ ನಾವಿಬ್ರು ಹೊಲಕ್ಕ ಬರತ್ತಿದ್ದ್ ನವಿಲುಗಳಿಗೆ ವಿಷ ಇಟ್ಟದ್ದ ಕಾರಣಾತ್ ನೋಡಪಾ" ಎಂದು ತಾನು ಚಿಕ್ಕವನಿರುವಾಗಿನ ಘಟನೆಯನ್ನು ನೆನಪಿಸಿ ನವಿಲುಗಳನ್ನು ಕೊಂದಿದ್ದಕ್ಕೆ ತಂದೆ ಶಿಕ್ಷೆ ಕೊಟ್ಟಿದ್ದನ್ನು ಮಗನಿಗೆ ವಿವರಿಸಿದ. ಹಾಗೆಯೇ ಮಗನ ಕೈಹಿಡಿದು ದನದ ಕೊಟ್ಟಿಗೆಗೆ ನಡೆದ. ಪುಟ್ಟ ಶಾರದೆಯು ಅಣ್ಣನ ಕೈಹಿಡಿದು ಮುನ್ನಡೆದಳು.

೩

ಕೊಟ್ಟಿಗೆಯ ಮಾಳಿಗೆಗೆ ಜೋತುಬಿದ್ದಿದ್ದ ಬೀಜ ಬಿತ್ತುವ ಕೂರಿಗೆಯನ್ನು ಕೆಳಗಿಳಿಸುವಂತೆ ಚನ್ನಬಸವಯ್ಯ ಮಗನಿಗೆ ಹೇಳಿದ. ಚಂದ್ರಶೇಖರನಿಗೆ ಅಪ್ಪ ಯಾಕೆ ಇದನ್ನು ತೋರಿಸುತ್ತಿದ್ದಾನೆ ಎಂದು ತಟ್ಟನೆ ಹೊಳೆಯಲಿಲ್ಲ. ಚನ್ನಬಸವಯ್ಯ "ಚಂದು ನೀ ಕೂರಿಗೆಯೇನ್ ಮೊದ್ಲ್ ಸಲಾ ನೋಡಾಕ್ಕತ್ತಿಲ್ಲ ತಮ್ಮಾ, ನೀ ಸಣ್ಣವ್ನಿರುವಾಗ ಬೀಜ ಬಿತ್ತೊ ವೇಳ್ಯಾದಾಗ ನನ್ನ್ ಜೊತಿ ಇದ್ದವ್ನ ಅದಿ. ಈಗ್ ನೋಡಿಲ್ಲೆ, ಒಂದ್ ಕೂರಿಗ್ಯಾಗ್ ಒಟ್ಟ ಮೂರ್ ತಾಳ ಇರ್ತ್ತಾವ್. ತಾಳ ಅಂದ್ರ ಅಳತೆ–ಪಾಲು. ಒನ್ನೆ ತಾಳ ಭೂಮಿಗೆ ಅಂದ್ರ್ ಮಣ್ಣು, ಹುಳು ಹುಪ್ಪಟ್ಟಿಗಳದ್. ಎರ್ಡನೆ ತಾಳ ನಮ್ಮದು ಅಂದ್ರ್ ರೈತಂದೂ, ಇನ್ನ್ ಮೂರನೇ ತಾಳ ಹಕ್ಕಿಪಕ್ಷಿಗಳದ್ದು ನೋಡಪಾ" ಅಂತ ಕೂರಿಗೆ ಹಾಗೂ ಬಿತ್ತುವ ಅಳತೆಗಳನ್ನು ವಿವರಿಸಿ, ಚನ್ನಬಸವಯ್ಯ ಮುಂದುವರಿದು 'ಚಂದು, ಈ ವಿಶ್ಯ ನಿನಗ್ ನಾ ಮೊದ್ಲ್ ಹೇಳಿಲ್ಲ್, ನಂದ್ ತಪ್ಪೈತಿ. ಕೂರಿಗೆಯೊಳಗಿನ್ ಈ ಮೂರು ಅಳತಿ ನೋಡ್ ತಮ್ಮಾ ನಮ್ಮಜ್ಜ, ಮುತ್ತಜ್ಜನ್ ಕಾಲ್ದಿಂದಲ್ಲೂ ಬಂದಾವ್ ನೋಡಪಾ' ಎಂದು ಹೇಳುತ್ತಾ ತಾನು ಯಾಕೆ ಹಕ್ಕಿಗಳನ್ನು ಓಡಿಸುವ ಯಂತ್ರವನ್ನ ಖರೀದಿಮಾಡಲಿಲ್ಲ ಎಂದು ಮಗನಿಗೆ ವಿವರಿಸಿದ. ತಲೆ ತಲಾಂತರಗಳಿಂದ ಬಂದ ಮಾನವೀಯತೆಯ ಪರಂಪರೆಗೆ ತಂದೆ ಕೊಟ್ಟ ಗೌರವವನ್ನು ನೆನೆದು ಯುವ ಕೃಷಿಕ ತಲೆದೂಗಿದ. ಕೊಟ್ಟಿಗೆಯ ಹೊಸ್ತಿಲಿನಲ್ಲಿ ನಿಂತು ಸಂಭಾಷಣೆಯನ್ನು ಆಲಿಸುತ್ತಿದ್ದ ದಾಕ್ಷಾಯಿಣಿ ಭಾವನೆಗಳನ್ನು ತಡೆಯಲಾಗದೆ ಸೆರಗಿನಿಂದ ತೇವವಾದ ಕಣ್ಣುಗಳನ್ನು ಒರೆಸಿಕೊಳ್ಳುತ್ತಿದ್ದಳು.

ದೂರದ ಪಂಜಾಬಿನ ವಿಶ್ವವಿದ್ಯಾಲಯಕ್ಕೆ ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ಆಯ್ಕೆಯಾಗಿದ್ದ ಚಂದ್ರಶೇಖರನ ತರಗತಿಗಳು ಇನ್ನೆರಡು ವಾರಗಳಲ್ಲಿ ಶುರುವಾಗಲಿದ್ದವು. ಅದಕ್ಕೂ ಮುನ್ನ ಅವನು ಮನಸ್ಸಿನಲ್ಲಿರುವ ಒಂದು ಮುಖ್ಯ ಕೆಲಸ ಮಾಡುವುದು ಬಾಕಿಯಿತ್ತು. ಅದೇನೆಂದರೆ ಮಲೆನಾಡಿನ ಗೆಳತಿ, ಸಹಪಾಠಿ ಅವನಿ ಮನೆಗೆ ಭೇಟಿಕೊಡುವುದು. ಅವನಿ ಬೆಂಗಳೂರಿನಲ್ಲಿರುವ ವಿಶ್ವವಿದ್ಯಾಲಯಕ್ಕೆ ಆಯ್ಕೆಯಾಗಿದ್ದಳು. ಕಳೆದೆರೆಡು ವರುಷಗಳಿಂದ ಅವಳು ತನ್ನ ಊರಿಗೆ ಬಾ ಎಂದು ಚಂದುನಲ್ಲಿ ಗಂಟು ಬಿದ್ದಿದ್ದರೂ ಇವನಿಗೆ ಹೋಗಲು ಆಗಿರಲಿಲ್ಲ. ಫೋನಿನಲ್ಲಿ ತನ್ನ ಮನೆಯ ಪರಿಸರ ಹಾಗೂ ತೋಟದ ಛಾಯಾಚಿತ್ರಗಳನ್ನು ಅನೇಕ ಬಾರಿ ತೋರಿಸಿ ಅವನಿಗೆ ಉತ್ಸಾಹ ತುಂಬಿದ್ದಳು. ಅನೇಕ ದಿನಗಳಿಂದ ಮೆಸೇಜ್ ಕಳುಹಿಸುತ್ತಾ ಬರಲೇಬೇಕು ಎಂದು ಅರುಹಿದ್ದಳು. ಬೆಳಿಗ್ಗೆ ಎದ್ದು ಚಂದು ಸ್ನಾನಾದಿಗಳನ್ನು ಮಾಡಿಕೊಂಡು ಇಷ್ಟಲಿಂಗದ ಪೂಜೆ ನೆರವೇರಿಸಿದ. ಉಪಹಾರ ಮುಗಿಸಿ ಅವನಿಯ ಊರಾದ ಗುಂಡಿಗದ್ದೆಗೆ ಹೊರಡಲನುವಾದ. ಹುರಕ್ಕಿ ಹೋಳಿಗೆ ಹಾಗೂ ತುಪ್ಪದ ಡಬ್ಬವನ್ನು ಕೊಟ್ಟ ಅವ್ವನಿಗೆ ನಮಸ್ಕರಿಸಿ ಬಸ್ ನಿಲ್ದಾಣಕ್ಕೆ ಹೋಗಲು ಅಪ್ಪನ ಬೈಕ್ ಏರುತ್ತಿದ್ದಂತೆ ಚಂದುಗೆ ಏನೊ ನೆನಪಾಯಿತು. ಇಳಿದು ತನ್ನ ಕೋಣೆಗೆ ಓಡಿ, ಪದವಿ ಕೊನೆಯ ವರುಷದ ಶೈಕ್ಷಣಿಕ ಪ್ರವಾಸದಲ್ಲಿ ಹೈದರಾಬಾದಿನಲ್ಲಿ ಕೊಂಡ ಕಿವಿಯೋಲೆಯನ್ನು ಜೇಬಿನಲ್ಲಿ ತುರುಕಿ ತಿರುಗಿ ಬೈಕೇರಿದ. ಪ್ರವಾಸದ ಸಮಯದಲ್ಲಿ ಧೈರ್ಯಸಾಲದೆ ಕಿವಿಯೋಲೆಯನ್ನು ಅವನಿಂದ ಗೆಳತಿಗೆ ಕೊಡಲಾಗಿರಲಿಲ್ಲ.

ಶಿವಮೊಗ್ಗೆಗೆ ಬಸ್ಸು ಹೊರಡುತ್ತಿದ್ದಂತೆ ಅಪ್ಪನಿಗೆ ಕೈ ಬೀಸಿ ಜೇಬಿನಲ್ಲಿದ್ದ ಕಿವಿಯೋಲೆಯನ್ನು ಬ್ಯಾಗಿಗೆ ವರ್ಗಾಯಿಸಿದ. ಮಧ್ಯಾಹದ ಹೊತ್ತಿಗೆ ಬಸ್ಸು ಶಿವಮೊಗ್ಗೆ ತಲುಪಿತು. ಅಲ್ಲಿ ಚಂದು ಮನೆಯಿಂದ ತಂದ ಊಟವನ್ನು ಮುಗಿಸಿ ಮತ್ತೊಂದು ಬಸ್ ಏರಿದ. ಸಾಗರ, ಹೊಸನಗರ ಊರುಗಳನ್ನು ದಾಟಿ ಘಟ್ಟಗಳ ತಿರುವಿನಲ್ಲಿ ತಿರುಗುತ್ತಾ ಏರುತ್ತಾ ಇಳಿಯುತ್ತಾ ಬಸ್ ಅರಣ್ಯದ ಮಧ್ಯೆ ಒಂದು ಕಡೆ ನಿಂತಿತು. ನಿರ್ವಾಹಕ "ಗುಂಡಿಗದ್ದೆ ...ಗುಂಡಿಗದ್ದೆ ..ಯಾರಿದ್ದೀರಿ ಇಳಿರಿ ಬೇಗ" ಅಂತ ಕೂಗಿದ. ಚಂದು ದಡಬಡಿಸಿ ಬ್ಯಾಗನ್ನು ತೆಗೆದುಕೊಂಡು ಕೆಳಗಿಳಿದ. ಸಂಜೆಯ ಮಬ್ಬುಗತ್ತಲಿನಲ್ಲಿ ಅಜಾನುಬಾಹು ವ್ಯಕ್ತಿಯೊಬ್ಬರು ಚಂದುವಿನಲ್ಲಿ ಬಂದು "ಚಂದ್ರಶೇಖರ, ಅಲ್ವಾ" ಅಂದರು. ಅವನು "ಹೌದು" ಅನ್ನುವುದರಲ್ಲೇ ಭುಜ ತಟ್ಟಿ, ತಾನೇ ಅವನಿಯ ತಂದೆ ವೃಷಭೇಂದ್ರಯ್ಯ ಎಂದು ಪರಿಚಯಮಾಡಿಕೊಂಡು ಚಂದುನನ್ನು ಬೈಕ್ ಹಿಂದೆ ಕೂಡಿಸಿಕೊಂಡರು. ಬೈಕ್ ಪಟ್..ಪಟ್.. ಅಂತ ಅರ್ಧ ಘಂಟೆ ಚಲಿಸಿ ತೆರೆದಿಟ್ಟ ಗೇಟಿನ ಮೂಲಕ ದಾಟಿ ನಿಂತಿತು. ಮನೆಯಂಗಳದ ದೀಪಗಳ ಬೆಳಕಿನಲ್ಲಿ ಅವನಿ ತನ್ನ ತಾಯಿಯ ಪಕ್ಕ ನಿಂತಿರುವುದು ಚಂದುನಿಗೆ ಕಾಣಿಸಿತು. ಏನೋ ಪುಳಕ ಮನದಲ್ಲಿ ಸುಳಿದು ಅವಳ ಕಣ್ಣುಗಳನ್ನು ನೇರವಾಗಿ ದಿಟ್ಟಿಸಲಾಗಲಿಲ್ಲ ಅವನಿಗೆ. ಅವನಿ ಕೂಡ ನಿಂತೆ ಇದ್ದಳು. ತಾಯಿ ಪಾರ್ವತಿ ಮುಂದೆ ಬಂದು ಚಂದುನನ್ನ ಬರಮಾಡಿಕೊಂಡಳು. ಹಜಾರದ ಕಟ್ಟೆಯ ಮೇಲೆ ಕುಳಿತ್ತಿದ್ದ ಅವನಿಯ ಅಜ್ಜಯ್ಯ "ಬಾ ಇಲ್ಲಿ ಕುಳಿತು ಕೋ" ಎಂದು ತನ್ನ ಪಕ್ಕಕ್ಕೆ ಕೂರಿಸಿಕೊಂಡ. ಚಂದುವಿನ ಕುರಿತು ಮೊದಲೆ ತಿಳಿದಿದ್ದ ಅಜ್ಜಯ್ಯ ಬಸ್ ಪ್ರಯಾಣದ ಕುರಿತು ಮಾತ್ರ ವಿಚಾರಿಸಿದ. ಕೈ ಕಾಲು ತೊಳೆದುಕೊಂಡು ಬಂದ ಚಂದುನಿಗೆ ಅವನಿ ಪಾನಕ ನೀಡುತ್ತಾ ಅವನನ್ನು ಕಣ್ಣಿನಲ್ಲೆ ಸ್ವಾಗತಿಸಿದಳು. ಚಂದು ಅವ್ವ ಕೊಟ್ಟ ಹೋಳಿಗೆಯ ಡಬ್ಬವನ್ನು ಅವನಿ ಕೈಗೆ ಹಸ್ತಾಂತರಿಸಿದ. ಪ್ರಯಾಣದ ಆಯಾಸವು ಊಟವಾದ ಬಳಿಕ ಚಂದು ಹಾಸಿಗೆಗೆ ಉರುಳುತ್ತಿದ್ದಂತೆ ನಿದ್ರೆಗೆ ಜಾರಿಸಿತು. ಇತ್ತ ಮತ್ತೊಂದು ಕೋಣೆಯಲ್ಲಿ ಅವನಿ ಚಂದು ಬಂದ ಖುಷಿಗೆ ನಿದ್ರೆ ಬರದೆ ಸೂರಿನ ಹೆಂಚುಗಳನ್ನು ಎಣಿಸುತ್ತಿದ್ದಳು.

೪

ಹಕ್ಕಿಗಳ ಚಿಲಿಪಿಲಿ ಕಲರವ ಕೇಳಿ ಚಂದುನಿಗೆ ಎಚ್ಚರವಾಗಿ, ಮೈ ಮುರಿದು ನೋಡುತ್ತಾನೆ ಅವನಿ ಪಕ್ಕದಲ್ಲಿ ನಿಂತು ಅವನು ಏಳುವುದನ್ನೆ ನಿರೀಕ್ಷಿಸುತ್ತಿದ್ದಾಳೆ. ಹಳದಿ ಬಣ್ಣದ ಉಡುಗೆಯಲ್ಲಿದ್ದ ಹುಡುಗಿಯನ್ನು ದಿಟ್ಟಿಸಿದ ಚಂದು ಇವಳು ಅವನಿನೇನಾ? ಎಂದುಕೊಂಡ. ಈ ಮೊದಲು ಕಾಲೇಜಿನಲ್ಲಿ ಅವನಿ ಯಾವಾಗಲೂ ಇಷ್ಟು ಸುಂದರವಾಗಿ ಅವನಿಗೆ ಕಂಡಿರಲಿಲ್ಲ. ನಾಚಿಕೊಂಡ ಹುಡುಗಿ ಗಡಿಬಿಡಿಯಿಂದ ಟವೆಲ್ ಕೊಟ್ಟು ಚಂದುನನ್ನು ಬಚ್ಚಲು ಮನೆಗೆ ದೂಡಿದಳು. ಉಪಹಾರವನ್ನು ವೃಷಭೇಂದ್ರಯ್ಯ ಹಾಗೂ ಚಂದು ಉಭಯಕುಶಲೋಪರಿಯೊಂದಿಗೆ ಮುಗಿಸಿ ದೊಡ್ಡ ಲೋಟಗಳಲ್ಲಿ ಎರೆಡೆರಡು ಬಾರಿ ಚಹಾ ಪಾನ ಮಾಡಿದರು. ಮನೆಯಂಗಳದಿಂದ ಹೊರ ಬಂದ ಚಂದು ಸುತ್ತಲೂ ಕಣ್ಣಾಡಿಸಿದಾಗ ವನರಾಶಿ ಹಚ್ಚಹಸಿರಿನಿಂದ ಶೃಂಗಾರಗೊಂಡು ಮದುವಣಗಿತ್ತಿಯಂತೆ ತೋರಿತು. ಕಣಿವೆಯ ಆಳದಲ್ಲಿದ್ದ ವೃಷಭೇಂದ್ರಯ್ಯನವರ ತೋಟವು ಬೆಟ್ಟಗಳ ತಪ್ಪಲಿನವರೆಗೂ ಹಬ್ಬಿತ್ತು. ಜುಳು ಜುಳು ನಿನಾದದ ತೊರೆಯೊಂದು ಮನೆಯ ಅಂಗಳವನ್ನು ಬಳಸಿಯೇ ಹರಿಯುತ್ತಿದೆ. ಸುತ್ತಲೂ ಬೆಟ್ಟಗಳು ಸುತ್ತುವರಿದಿರುವುದಿಂದ ಈ ಸ್ಥಳಕ್ಕೆ ಗುಂಡಿಗದ್ದೆ ಎಂಬ ಹೆಸರು ಬಂದಿದೆ ಎಂದು ಅವನಿಗೆ ಮನವರಿಕೆಯಾಯಿತು.

ಕವಳ ಜಗಿಯುತ್ತಾ ಬಂದ ವೃಷಭೇಂದ್ರಯ್ಯ ಅತಿಥಿಗೆ ತೋಟವನ್ನು ತೋರಿಸಲು ನಡೆಯುತ್ತಾರೆ. ಹಿಂದಿನಿಂದ ಅವನಿ ಜೊತೆಯಾಗುತ್ತಾಳೆ. ಬಯಲು ಸೀಮೆ ಹೊಲಗಳನ್ನು ನೋಡಿದ್ದ ಚಂದು ಕಾನನದ ನಟ್ಟನಡುವಿರುವ ತೋಟವನ್ನು ಹೊಕ್ಕಿದ್ದು ಇದೇ ಮೊದಲ ಬಾರಿಯಾಗಿತ್ತು. ಅವನಿಯ ಮಾತುಗಳಲ್ಲಿ ಕೇಳಿದ್ದ ತೋಟದ ವರ್ಣನೆಯನ್ನು ಇಂದು ಕಣ್ಣಾರೆ ನೋಡುವ ಸದಾವಕಾಶ ಅವನಿಗೆ ದೊರಕಿತ್ತು. ಅಡಿಕೆ ಮರಗಳು, ಅವುಗಳಿಗೆ ಸುತ್ತುವರಿದ ಕರಿ ಮೆಣಸಿನ ಬಳ್ಳಿಗಳು, ಅಲ್ಲಲ್ಲಿ ಮುರಗಲು, ಉಪ್ಪಾಗೆಹುಳಿ, ಕರಿಮಾದಲು, ಜಾಪತ್ರೆ ಹಾಗೂ ಯಾಲಕ್ಕಿ ಗಿಡಗಳನ್ನು ಕೂತೂಹಲದಿಂದ ವಿಕ್ಷೀಸಿದ ಚಂದು ಕೊನೆಗೌಡ ಅಡಿಕೆ ಗೊನೆಗಳನ್ನು ಇಳಿಸುವ ಪರಿ ನೋಡಿ ಬೆಕ್ಕಸ ಬೆರಗಾದ. ಮಂಗಗಳು ಕಚ್ಚಿ ಅಲ್ಲಲ್ಲಿ ಬೀಳಿಸಿದ ಹಸಿ ಅಡಿಕೆ ಬೆಟ್ಟಗಳನ್ನು ತೋರಿಸಿ ವೃಷಭೇಂದ್ರಯ್ಯ ಕೋತಿಗಳ ಉಪಟಳವನ್ನು ಶಪಿಸುತ್ತಾ ಈ ಕಾಡಿನಲ್ಲಿರುವುದೇ ಸಾಕಾಗಿದೆ ಎಂದು ತಮ್ಮ ಅಲವತ್ತನ್ನು ಹೇಳಿಕೊಂಡ. ಮೂವರೂ ತೋಟವನ್ನು ಸುತ್ತಾಡಿ ಮನೆಯ ಅಂಗಳಕ್ಕೆ ಬರಲು ಪಾರ್ವತಿ ಆಸರೆಗೆ ಬೆಲ್ಲ ಹಾಗೂ ನೀರನ್ನು ಮಗಳ ಕೈಯಿಂದ ಚಂದುಗೆ ಕೊಡಿಸಿದಳು.

ತುಸು ವಿಶ್ರಾಂತಿಯ ಬಳಿಕ ಮಧ್ಯಾಹ್ನದ ಊಟದಲ್ಲಿ ಸಿಹಿ ಕಡುಬು, ಅನ್ನದೊಂದಿಗೆ ಪತ್ರೊಡೆ, ಮೊಗ್ಗೆ ಕಾಯಿಯ ಸಾಂಬಾರು ಹಾಗೂ ಮಾವಿನ ಹೂವಿನ ಸಾಸಿವೆಯನ್ನು ಹೊಟ್ಟೆ ಬಿರಿಯುವಂತೆ ಸವಿದ ಚಂದು, ವೃಷಭೇಂದ್ರಯ್ಯನವರಲ್ಲಿ ತಾನು ನಾಳೆ ಬೆಳಿಗ್ಗೆ ಮೊದಲ ಬಸ್ಸಿನಲ್ಲೇ ವಾಪಸ ಹೊರಡುವೆ ಎಂದ. ಇದನ್ನು ಆಲಿಸಿ ಅವನಿಯ ಮುಖ ಸಣ್ಣದಾಯಿತು. ಮನೆಯೊಡತಿ ಪಾರ್ವತಿಯು ಮಗಳನ್ನು ನೋಡಿ ಬೇಸರಗೊಂಡಳು. ಕೈ ತೊಳೆದ ವೃಷಭೇಂದ್ರಯ್ಯ ಅವನಿಯನ್ನು ಕರೆದು ಚಂದುವಿಗೆ ಬೆಟ್ಟದ ತುದಿಯಲ್ಲಿರುವ ಸೂರ್ಯಕಲ್ಯಾಣಿ ಗುಡ್ಡವನ್ನು ತೋರಿಸಿಕೊಂಡು ಬಾ ಎಂದು ಹೇಳಿ, ಹೊತ್ತು ಮುಳುಗುವ ಮುನ್ನವೇ ಮನೆ ಸೇರಿ ಎನ್ನುವ ಸೂಚನೆ ಕೊಟ್ಟು ಜಗಲಿಯ ಮೇಲಿದ್ದ ಮಂಚದ ಮೇಲೆ ವಿರಮಿಸಿದರು.

ಲಗುಬಗೆಯಿಂದ ತಯಾರಾದ ಅವನಿ ಚಂದುನನ್ನು ಕರೆದುಕೊಂಡು ಬೆಟ್ಟದತ್ತ ನಡೆದಳು. ಜಗುಲಿಯ ಕಂಬಗಳಿಗೆ ಒರಗಿ ನಿಂತಿದ್ದ ಪಾರ್ವತಿ ಹಾಗೂ ಅಜ್ಜಯ್ಯ ಜೋಡಿ ಕಾಣುವವರೆಗೂ ತದೇಕಚಿತ್ತದಿಂದ ನೋಡುತ್ತಿದ್ದರು. ತೋಟದ ಅಂಚಿಗೆ ಬಂದು ವಿದ್ಯುತ್ ತಂತಿಬೇಲಿಯನ್ನು ದಾಟುವಾಗ ಬೇಲಿಯ ವಿಶೇಷತೆಯನ್ನು ವಿವರಿಸುತ್ತಾ ಅವನಿ ತಮ್ಮ ತೋಟದ ಮುಖಾಂತರ ದಾಟುತ್ತಿದ್ದ ಕಾಡುಪ್ರಾಣಿಗಳ ರೋಚಕ ಕಥೆಗಳನ್ನು ಹೇಳಿ, ಬೇಲಿ ಹಾಕಿದ ನಂತರ ಅವುಗಳ ಉಪಟಳ ಇಲ್ಲವೆಂದು ವಿಶದಪಡಿಸಿದಳು. ಇಬ್ಬರೂ ತೋಟದ ಪಕ್ಕದ ಸೊಪ್ಪಿನಬೆಟ್ಟವನ್ನು ದಾಟಿ ಅಗಾಧವಾಗಿ ಬೆಳೆದ ಕಾಡುಮರಗಳ ನಡುವಿನ ಕಾಲುದಾರಿಯಿಂದ ಬೆಟ್ಟವನ್ನು ಹತ್ತಲು

ಪ್ರಾರಂಭಿಸಿದರು. ಅವರು ಉತ್ಸಾಹದಿಂದ ಚಾರಣ ಮಾಡುತ್ತಾ ನಡುವೆ ಸಿಕ್ಕ ಚಿಕ್ಕ ಚಿಕ್ಕ ತೊರೆಗಳನ್ನು ದಾಟುತ್ತಾ ಮುನ್ನಡೆದರು. ಹಾರಾಡುತ್ತಿದ್ದ ತರಹೇವಾರಿ ಹಕ್ಕಿಗಳನ್ನು ಅವನಿ ತೋರಿಸುತ್ತಾ ಹೆಸರುಗಳನ್ನು ಹೇಳಿದಳು. ಒಂದರ್ಧ ಘಂಟೆಯಲ್ಲಿ ಇಬ್ಬರೂ ಬೆಟ್ಟದ ತುತ್ತ ತುದಿಗೆ ತಲುಪಿದ್ದರು. ಚಂದು ಬೆಟ್ಟದ ಶೃಂಗದ ಸುತ್ತಲಿನ ನಿಸರ್ಗದ ಸೊಬಗನ್ನು ಕಂಡು ವಿಸ್ಮಯಗೊಂಡ. ಇಬ್ಬರೂ ಬಂಡೆಯ ಮೇಲೆ ಕುಳಿತು ಸಾಕಷ್ಟು ಹರಟೆ ಹೊಡೆದರು. ಕಾಲೇಜಿನ ಸಹಪಾಠಿ ಹಾಗೂ ಅಧ್ಯಾಪಕರನ್ನು ಗೇಲಿ ಮಾಡಿ ನಕ್ಕು ನಲಿದರು. ಅವನಿ ತಂದೆಯ ಮಾತನ್ನು ಚಂದುನಿಗೆ ನೆನಪಿಸಿದಾಗ, ಅವರು ಬೇಗ ಮನೆ ಸೇರಲು ಬೆಟ್ಟ ಇಳಿಯಲು ಪ್ರಾರಂಭಿಸಿದರು. ಒಂದು ಕಡೆ ರಾಶಿ ಬಣ್ಣ ಬಣ್ಣದ ಚಿಟ್ಟೆಗಳು ಪುಷ್ಪಗಳಿಗೆ ಮುತ್ತಿಕ್ಕಿದ್ದನ್ನು ನೋಡುತ್ತಾ ನಿಂತ ಸೌಂದರ್ಯವತಿ ಅವನಿಯ ರೂಪವನ್ನು ಕಣ್ಣುತುಂಬಿಕೊಳ್ಳುತ್ತಾ ಚಂದು, "ಅಯ್ಯೋ ನಾನು ಕಿವಿಯೋಲೆಯನ್ನು ಮನೆಯಲ್ಲಿಯೇ ಬಿಟ್ಟೆ, ತಂದಿದ್ದರೆ ಚೆನ್ನಾಗಿತ್ತು" ಎಂದು ಸ್ವಗತದಲ್ಲೆ ತನ್ನನ್ನು ಹಳಿದುಕೊಂಡ.

೫

ವಿದ್ಯುತ್ ತಂತಿಬೇಲಿ ದಾಟಿ ತೋಟಕ್ಕೆ ಇಬ್ಬರೂ ಮರು ಪ್ರವೇಶಿಸಿದಾಗ ಸೂರ್ಯನ ಕಿರಣಗಳು ಇನ್ನೂ ಮಾಸಿರಲಿಲ್ಲ. ಇಳಿಜಾರಿನಲ್ಲಿ ಲಗುಬಗೆಯಿಂದ ಓಡಿ ಬಂದಿದ್ದ ಇಬ್ಬರ ಮುಖದಲ್ಲೂ ಬೆವರ ಹನಿಗಳು ಮೂಡಿದ್ದವು. ದೀರ್ಘವಾದ ಉಸಿರನ್ನು ಎಳೆಯುತ್ತಿದ್ದ ತಾರುಣ್ಯವತಿ ಅವನಿಯು ಕಾನನದ ದೇವತೆಯಂತೆ ಚಂದುಗೆ ಕಾಣುತ್ತಿದ್ದಳು. ಚಂದು ಅವಳ ಸುಂದರ ಮೊಗವನ್ನು ನೋಡಿ ಆಸ್ವಾದಿಸುತ್ತಿದ್ದಾಗ ಢಮಾರ್! ಎನ್ನುವ ಸದ್ದು ತೋಟದಲ್ಲಿ ಮೊಳಗಿತು. ಅಡವಿ ಮೈನಾಗಳ ಗುಂಪೊಂದು ಬೆದರಿ ಕಿರುಚುತ್ತಾ ಕಾನನದ ಹಸಿರಿನಲ್ಲಿ ಲೀನವಾಯಿತು. ತೋಟದೊಳಗಿಂದ ಭಯಭೀತ ಕಿರುಚಾಟಗಳು ಕೇಳಿ ಚಂದು ಸದ್ದು ಬಂದ ಕಡೆ ಓಡಲು ಅನುವಾದ. ಅವನಿ ತಡೆಯಲು ಮುಂದಾಗಿ ಆತನ ಕೈ ಹಿಡಿದರೂ ಬಿಡಿಸಿಕೊಂಡು ಓಡಿದ. ಅಡಿಕೆ ಮರಗಳ ನೂರಾರು ಸಾಲುಗಳನ್ನು ಜಿಗಿಯುತ್ತಾ ಚಂದು ಒಂದು ಕಡೆ ನಿಂತಾಗ ವೃಷಭೇಂದ್ರಯ್ಯ ಕೋವಿ ಹಿಡಿದು ನಿಂತಿದ್ದು ಕಂಡಿತು. ಅವನ ಪಕ್ಕ ಆಳು ಮನುಷ್ಯನೊಬ್ಬ ಕೋಲಿನಿಂದ ಏನನ್ನೊ ಎತ್ತಿ ನೋಡುತ್ತಿದ್ದಾನೆ. ಏದುಸಿರು ಬಿಡುತ್ತಿದ್ದ ಚಂದು ಬಗ್ಗಿ ನೋಡಿದಾಗ ದೊಡ್ಡ ಗಾತ್ರದ ಮಂಗ ಬೋರಲಾಗಿ ಸತ್ತು ಬಿದ್ದಿದೆ. ಅದರ ಕಣ್ಣುಗಳು ಇನ್ನೂ ತೆರೆದೆ ಇವೆ. "ಚಂದು, ನಾನು ಗುಂಡಿಕ್ಕಿದ ಎಪ್ಪತ್ತನೆಯ ಮಂಗವಿದು, ಹಾಳು ಮಂಗಗಳು ತೋಟಕ್ಕೆ ನುಗ್ಗಿ ಬೆಳೆ ಹಾಳುಮಾಡುವುದನ್ನು ಯಾರು ಸಹಿಸುತ್ತಾರೆ" ಎಂದು ತನ್ನ ಸಿಟ್ಟನ್ನು ವೃಷಭೇಂದ್ರಯ್ಯ ಹೊರ ಹಾಕಿದ. ಮುಖದಲ್ಲಿನ ಕೌರ್ಯ ಇನ್ನೂ ಎದ್ದು ಕಾಣುತ್ತಿತ್ತು. ಚಂದುನ ಹೊಟ್ಟೆ ತೊಳಿಸಿದಂತಾಗಿ ತಲೆ ಸುತ್ತು ಬಂದಿತ್ತು. ಪೇಲವ ಮುಖ ಹೊತ್ತು ಅವನಿಯೊಂದಿಗೆ ಮನೆ ಸೇರಿದಾಗ ಕತ್ತಲು ಕವಿದಿತ್ತು. ಊಟದ ಶಾಸ್ತ್ರ ಮುಗಿಸಿ ಕೋಣೆ ಸೇರಿದ ಚಂದ್ರಶೇಖರನಿಗೆ ಸಂಜೆಯ ಘಟನೆಯಿಂದಾಗಿ ನಿದ್ದೆ ಬರದೆ ಅತ್ತಿತ್ತ ಹೊರಳಾಡುತ್ತಾ ಚಡಪಡಿಸುತ್ತಿದ್ದ. ಅತ್ತ ಅವನಿ ಎರಡು ವರುಷಗಳ ಹಿಂದೆಯೇ ಬರೆದಿಟ್ಟ ಪ್ರೇಮ ನಿವೇದನೆಯ ಸಂದೇಶವಿರುವ ಅರಳಿ ಎಲೆಯನ್ನು ಚುಂಬಿಸಿ ಬೆಳಿಗ್ಗೆ ಚಂದುವಿಗೆ ಕೊಡುವುದೆಂದು ಪುಸ್ತಕದಲ್ಲಿಟ್ಟು ನಿದ್ರೆಗೆ ಜಾರಿದಳು.

ಮರುದಿನ ಮುಂಜಾನೆ ತೆರೆದ ಜೀಪೊಂದು ಬಸ್ ನಿಲ್ದಾಣಕ್ಕೆ ಹೊರಡಲು ಗೇಟಿನಲ್ಲಿ ಬಂದು ನಿಲ್ಲುತ್ತಿದ್ದಂತೆ, ಚಂದುನನ್ನು ಬೀಳ್ಕೊಡಲು ವೃಷಭೇಂದ್ರಯ್ಯ ಮಗಳನ್ನು ಜೀಪು ಹತ್ತಿಸಿ ಮಡದಿಯೊಂದಿಗೆ ಅಂಗಳದಿಂದಲೆ ಕೈಬೀಸಿದ. ಜೀಪು ಗಟ್ಟಿ ಧ್ವನಿ ಮೊಳಗಿಸಿತ್ತಾ ಘಟ್ಟವನ್ನು ಸುತ್ತಿ ಸುತ್ತಿ ಏರುತ್ತಿದ್ದರೆ ಚಂದು ಮೌನದ ಆಳಕ್ಕೆ ಇಳಿಯುತ್ತಿದ್ದ. ಅವನಿಯ ಹೃದಯವು ಪುಸ್ತಕದಲ್ಲಿರುವ ಅರಳಿ ಎಲೆಯನ್ನು ನೆನೆದು ಢವ ಢವ ಎನ್ನುತ್ತಿತ್ತು. ಘಟ್ಟದ ಮುಂದಿನ ತಿರುವಿನಲ್ಲಿ ಜೀಪಿನ ಹಾರ್ನ್ ಮೊಳುಗುತ್ತಿದ್ದಂತೆ ಅವನಿ ಹಾಗೂ ಚಂದುನ ಮೇಲೆ ಹತ್ತಾರು ಅತ್ತಿ ಹಣ್ಣುಗಳು ಟಪ್ ಟಪ್ ಬಿದ್ದವು. ಚಂದು ಇದೇನಿದು ಅಂತ ಮೇಲೆ ನೋಡಿದ, ವಿಶಾಲವಾದ ಅತ್ತಿ ಮರದ ಕೊಂಬೆಗಳಲ್ಲಿ ಮಂಗಟ್ಟೆ ಹಕ್ಕಿಗಳು ಮತ್ತು ಮಂಗಗಳು ಹಾರ್ನ್ ಸದ್ದಿಗೆ ಬೆದರಿ ಅತ್ತಿಂದಿತ್ತ ಜಿಗಿದಾಡುತ್ತಿದ್ದವು. ತನ್ನ ಬಳಿ ಬಿದ್ದ ಹಣ್ಣನ್ನು ಸವಿಯುತ್ತ ಚಂದು ರೆಪ್ಪೆಗಳನ್ನು ನಿಧಾನವಾಗಿ ಮುಚ್ಚಿದ. ನಿನ್ನೆ ಸತ್ತ ಮಂಗನ ಕಣ್ಣುಗಳು ಮುಂದೆಬಂದಂತಾದವು. ಅದರ ಹಿಂದೆಯೇ ಅಪ್ಪ ಹೊಲದಲ್ಲಿ ಕೂರಿಗೆ ಹೂಡಿದ್ದಾನೆ, ಅವ್ವ ಸೆರಗಿನಲ್ಲಿರುವ ಬಿತ್ತನೆ ಬೀಜಗಳನ್ನು ಕೂರಿಗೆಯ ತಾಳಗಳಲ್ಲಿ ಮೃದುವಾಗಿ ಹಾಕುತ್ತಿದ್ದಾಳೆ. "ನೋಡಿಲ್ಲಿ, ಒಂದ್ ಕೂರಿಗ್ಯಾಗ್ ಒಟ್ಟ ಮೂರ್ ತಾಳ ಇರ್ತಾವ್. ತಾಳ ಅಂದ್ರ ಆಳತೆ(ಪಾಲು) ಒನ್ನೆ ತಾಳ ಭೂಮಿಗೆ ಅಂದ್ರ್ ಮಣ್ಣು, ಹುಳು ಹುಪ್ಪಟ್ಟೆಗಳಿಗೆ, ಎರ್ಡನೆ ತಾಳ ನಮ್ಮದು ಅಂದ್ರ್ ರೈತಂದೂ, ಇನ್ನ್ ಮೂರನೇ ತಾಳ ಹಕ್ಕಿಪಕ್ಷಿಗಳದ್ದು ನೋಡಪಾ" ಎಂದು ಅಪ್ಪ, ಚಂದುನಿಗೆ ಸಕಲ ಜೀವರಾಶಿಗಳಿಗೂ ಲೇಸನ್ನು ಬಯಸಬೇಕೆನ್ನುವ ತತ್ವ ಹೇಳುತ್ತಿದ್ದಾನೆ. ಚಂದು, ತನ್ನ ದೊಡ್ಡಪ್ಪ ನಾಗಯ್ಯನ ಹಪಹಪಿತನವನ್ನೂ ನೆನೆದ. ದೊಡ್ಡಪ್ಪ ಹೊಲಕ್ಕೆ ಬಂದ ನವಿಲುಗಳಿಗೆ ವಿಷ ಇಟ್ಟಿದ್ದ. ಹಾಗೆಯೇ ವೃಷಭೇಂದ್ರಯ್ಯ ಕೋತಿಗೆ ಗುಂಡಿಕ್ಕಿದ್ದೂ ಕಣ್ಣಿನ ಮುಂದೆ ಬಂದಿತು. ಮಾನವನ ದುರಾಸೆ ಅವನನ್ನು ಎಷ್ಟೊಂದು ಅಧಃಪತನಕ್ಕೆ ಒಯ್ಯುತ್ತಿದೆ, ಈ ದುರಾಸೆ ಒಂದು ದಿನ ತನಗೆ ಮುಳುವಾಗುವುದೆನ್ನುವ ಅರಿವು ಅವನಿಗೆ ಎಂದಿಗಾದರೂ ಬರುವುದೇ? ಎಂದು ತನ್ನನ್ನೆ ಪ್ರಶ್ನಿಸಿಕೊಳ್ಳತೊಡಗಿದ. ಅಷ್ಟರಲ್ಲಿ ಜೀಪು ಬಸ್ ನಿಲ್ದಾಣ ತಲುಪುತ್ತಿದ್ದಂತೆ ಬಸ್ ಬಿಡಲು ಅನುವಾಗುವುದಕ್ಕೂ ಸರಿಯಾಗಿತ್ತು. "ಬೇಗ ಹತ್ತಿ....ಬೇಗ ಹತ್ತಿ...." ಎಂಬ ಕಂಡಕ್ಟರನ ಚೀರುವ ಧ್ವನಿಯು ಚಂದುವಿನ ಕಿವಿಗೆ ಬಿದ್ದು ಕೆಳಗಿಳಿದು ಓಡಿ ಬಸ್ ಏರಿದ. ಈ ತರಾತುರಿಯಲ್ಲಿ ಅರಳಿ ಎಲೆಯಿರುವ ಪುಸ್ತಕ ಅವನಿಯ ಕೈಯಲ್ಲೆ ಉಳಿಯಿತು. ಅವನಿಗೆ ಕೊಡಬೇಕಿದ್ದ ಕಿವಿಯೋಲೆಗಳು ಚಂದುವಿನ ಬಳಿಯೇ ಉಳಿದುಹೋದವು. ಬಸ್, ಘಟ್ಟದ ತಿರುವಿನಲ್ಲಿ ಧೂಳೆಬ್ಬಿಸುತ್ತಾ ಕಣ್ಮರೆಯಾಯಿತು.



**(ಉ.ಕ. ದ ಕೈಗಾದಲ್ಲಿನ ಅಣು ವಿದ್ಯುತ ಕೇಂದ್ರದ ನೌಕರರಾಗಿರುವ ಕಥೆಗಾರ ಮಹಾಂತೇಶ, ಹವ್ಯಾಸಿ ಪತ್ರಕರ್ತ ಮತ್ತು ಕ್ರೀಡಾ ಸಂಘಟಕರೂ ಆಗಿದ್ದಾರೆ)**

---

## ನವಿಲುಗರಿ

### ನನ್ನಪ್ಪ ಕೆಬಿ ಎಂದರೆ...



ಕೆ ಬಿ ಎಂದರೆ ಅಪ್ಪಟ ರೇಷ್ಮೆ ಕೂದಲಿನ
ಮಲ್ಲಿಗೆಯಂತ ಮುಗ್ಧ ಮಗುವಿನ
ಮನಸ್ಸಿನವನು
ಅ.ಆ. ಬಿಳಿಕೂದಲಿನ ಗಡ್ಡವೇ ಚೆಲುವು
ಕನ್ನಡ ಕಾವ್ಯ ಪರಂಪರೆಯ
ಸಿದ್ಧಮಾದರಿಯ ಸೀಳುತ್ತಲೆ ಬಕಾಲ ಮುನಿಯ "ಮುಟ್ಟಿ"
ಮುಟ್ಟಬಾರದ ಅಕ್ಷರವ ಮೆಟ್ಟಿ ಮೆಟ್ಟಿ ಮೆಟ್ಟು
ಹೊಲೆದಂತೆ ಹೊಲೆದ
ಮಹಾ ಆದಿಗನು

ದರ್ರೈಸ್ತ್ರೀ ಯ ವಿಮೋಚನೆಗಾಗಿ ತನ್ನ ಬೆನ್ನಿಗೆ ಬಿದ್ದ
ಜಾತಿಯ ಸಂಕಟವನ್ನೇ
ಎಡಗೈಯಿಂದ ಕಿತ್ತೆಸೆದನು
ಕುಲದ ಕುಲುಮೆಯಲಿ ಬೆಂದು
ಕಾಲಜ್ಞಾನದ ತಿದಿ ಎಳೆದೆಳೆದು
ಅಕ್ಷರಗಳ ನಕ್ಷತ್ರಗಳಾಗಿ ಕುಣಿಸಿದ



ದಿಕ್ಕು ದಿಕ್ಕಿಗು ದಿಕ್ಕೆಟ್ಟ ರುದ್ರನಂತೆ ತಿರುಗಿ
ಆತ್ಮದಲ್ಲೇ ಅನಾತ್ಮನಾಗಿ
"ಬುದ್ಧ" ಗುರುವಿನ ಹಾದಿ ತುಳಿದು
ಕತ್ತಲನ್ನು ಕಾಲಿಂದ ಒದ್ದು,
ಅಲ್ಲಮನ ಅಂಗೈಯಲ್ಲಾಡುವ ಜ್ಯೋತಿಯಾದನು
ಶ್. ಈಗ ಮೌನದಿಂದಿರಿ
ಕೆ.ಬಿ. ಗಲ್ಲೆಬಾನಿಯೊಳಗೆ ಧ್ಯಾನಿಸುತ್ತಿದಾರೆ
ಆ ಶಿವನ ಪರಶಿವನ
ಡಮರುಗವೇ ಕಿತ್ತು ಬೀಳುವಂತೆ
ಅಕ್ಷರಗಳ ಜೋಲೆಗೆ ನರ್ತಿಸುತ್ತಿದ್ದಾರೆ
ಮುಟ್ಟಿದರೆ ಮಿಡಿಯುತ್ತಾರೆ



ಇಲ್ಲ ಇಲ್ಲ ಅಸಾಧ್ಯ ಕೆ ಬಿ ಸತ್ತಿಲ್ಲ
ಸಾಯುವುದು ಇಲ್ಲ
ನನ್ನಮ್ಮನ ಕಣ್ಣ ಗುಡ್ಡೆಗಳಲ್ಲಿ
ಹುಗ್ಗಿಯ ನಗು ಚೆಲ್ಲುತ್ತಿದ್ದಾರೆ
ಹೀಗೆ ಕೆ ಬಿ ಎಂದರೆ
ಕನ್ನಡ ಖಂಡಕಾವ್ಯಗಳ ಕ್ರಾಂತಿ ಭೂಪ.

**–ಅನಿಕೇತನ ಟಿ.ಎಸ್**

ಧರ್ಮ ವಿಚಾರ ಪುಟ



# ಧರ್ಮಚಕ್ರ ಪ್ರವರ್ತನ

**ನಾಲ್ಕು ಅರಿಯ (ಆರ್ಯ) ಸತ್ಯಗಳು ಬುದ್ಧ ಬೋಧಿಸಿದ ಧರ್ಮದ ಅಡಿಪಾಯವಿದ್ದಂತೆ. ಅವನ್ನು ಆಧರಿಸಿಯೇ ಇಡೀ ಬೌದ್ಧ ಸಂಕಥನದ ಸೌಧ ನಿಂತಿರುವುದು. ಗೋತಮನು ಈ ನಾಲ್ಕು ಅರಿಯ ಸತ್ಯಗಳನ್ನು ಸಾಕ್ಷಾತ್ಕರಿಸಿಕೊಂಡು ಬುದ್ಧನಾದ ನಂತರ ಈ ಜ್ಞಾನೋದಯವನ್ನು ಮೊದಲು ಹಂಚಿಕೊಳ್ಳಲು ಯಾರು ಅರಿಹಂತರು ಎಂದು ಯೋಚಿಸಿ ಮೊದಲು ಮನಸ್ಸಿಗೆ ಬಂದ ಈ ಹಿಂದಿನ ಸಾಧನಾ ಕಾಲದ ತನ್ನ ಇಬ್ಬರು ಸಹ ಸಂನ್ಯಾಸಿಗಳಾದ ಅಲಾರಕಾಲಾಮ ಮತ್ತು ಉದ್ಧಕರಾಮ ಪುತ್ತರು ಈಗ ಮರಣ ಹೊಂದಿದ್ದಾರೆಂದು ಅರಿತು ತಾನು ಬೋಧಿ ಪಡೆಯಲು ಕಠಿಣ ತಪಃಶ್ಚರ್ಯೆಯನ್ನು ಕೈಗೊಂಡಾಗ ತನ್ನ ಸೇವೆಗೈದ ಐವ್ವರು ಪರಿವ್ರಾಜಕರಿಗೆ ಧರ್ಮೋಪದೇಶ ಮಾಡಲು ನಿಶ್ಚಯಿಸಿದನು. ಬುದ್ಧನು ಗಯೆಯಿಂದ ಆ ಪರಿವ್ರಾಜಕರು ಈಗ ಇದ್ದ ಋಷಿಪಟ್ಟಣದ ಮೃಗವನದತ್ತ ಸಾರಿದನು.**

**ಆ ಐವ್ವರು ಪರಿವ್ರಾಜಕರು ಬುದ್ಧನನ್ನು ನೋಡಿ ಮೊದಲು ಈತ ಕಠಿಣ ತಪಃಶ್ಚರ್ಯೆಯಾದಿಗಳನ್ನು ಬಿಟ್ಟು ಸುಖ ಸಾಧನವಾದ ಅನ್ಯ ಮಾರ್ಗವನ್ನು ಹಿಡಿದವನೆಂದು ನಿರ್ಲಕ್ಷಿಸಲು ನಿರ್ಧರಿಸಿದರಾದರೂ, ಬುದ್ಧ ಅವರ ಬಳಿ ಸಾರಿದಂತೆ ಅವರೆಲ್ಲ ಈತ ಎಷ್ಟಾದರೂ ತಮ್ಮ ಹಳೆಯ ಮಿತ್ರ ಗೋತಮನಲ್ಲವೆ ಎಂಬ ಮಿತ್ರ ಭಾವದಿಂದ ಬುದ್ಧನ ಕಾಲಿಗೆ ನೀರು ಕೊಟ್ಟು ಆಸನ ನೀಡಿ ಉಪಚರಿಸಲು ಉದ್ಯುಕ್ತಾದರು.**

***

ಪರಿವ್ರಾಜಕರು ತನ್ನನ್ನು ಮಿತ್ರ ಭಾವದಿಂದ ಹೆಸರಿನಿಂದ ಸಂಬೋಧಿಸುತ್ತಿರುವುದನ್ನು ಗಮನಿಸಿದ ಬುದ್ಧ ಅವರಿಗೆ ಹೀಗೆ ಹೇಳಿದನು: "ಓ ಗೆಳೆಯರೇ, ತಥಾಗತನು ಗೆಳೆಯನೆಂದೂ ಗೋತಮನೆಂದೂ ಅವನನ್ನು ಹೆಸರಿನಿಂದ ಸಂಬೋಧಿಸಬಾರದು. ತಥಾಗತನು ಅರಿಹಂತನಾಗಿ ಬೋಧಿಯನ್ನು ಪಡೆದಿದ್ದಾನೆ. ಕೇಳಿರಿ ನಾನು ಅಮರತ್ವವನ್ನು ಅರಿತಿದ್ದೇನೆ. ಎಚ್ಚರ, ನಾನು ಸತ್ಯವನ್ನು ಬೋಧಿಸುತ್ತೇನೆ. ನನ್ನ ಬೋಧನೆಯನ್ನು ಪಾಲಿಸಿದ್ದಾದರೆ ಈ ಪವಿತ್ರತೆಯ ಫಲವನ್ನೂ ಈ ಇದೇ ಜೀವನದಲ್ಲಿ, ಕೆಲವೇ ದಿನಗಳಲ್ಲಿ ನೀವೂ ಅನುಭವಿಸುವಿರಿ.

ಇದನ್ನು ಕೇಳಿ ಆ ಐವ್ವರು ತಾಪಸಿಗಳು ಹೀಗೆ ನುಡಿದರು: "ಓ ಮಿತ್ರ ಗೋತಮಾ ಆಚರಣೆಯಿಂದ, ಆ ದೇಹದಂಡನೆಯಿಂದಾ ತಪಃಶ್ಚರ್ಯೆಯಿಂದ ಮಹಾಮಾನವನಾಗಲು ಸಾಧ್ಯವಿಲ್ಲದಾಗ ಈ ಘನವಾದ ಸೂಕ್ಷ್ಮ ಪರಿಜ್ಞಾನದ ಮಾತೇ ಬೇಡ. ಐಶ್ವರ್ಯದಲ್ಲಿ ಇದ್ದುಕೊಂಡು, ವಿಲಾಸ ಜೀವನ ಕೈಗೊಂಡು ಮಹಾಮಾನವನಾಗಲು ಸಾಧ್ಯವಿಲ್ಲದ ನಿನಗೆ ಆ ಘನವಾದ ಸೂಕ್ಷ್ಮ ಜ್ಞಾನದ ಮಾತೇಕೆ?"

ಬುದ್ಧನು ವಿವರಿಸಿದನು "ಓ ತಪಸ್ವಿಗಳೇ, ತಥಾಗತನು ಐಶ್ವರ್ಯ ಹೊಂದಿದವನಲ್ಲ. ತನ್ನ ಪ್ರಯತ್ನದಲ್ಲಿ ಉದಾಸೀನನಾಗಿರಲಿಲ್ಲ. ಆತನು ವಿಲಾಸಭೋಗಕ್ಕೆ ಅಂಟಿಕೊಂಡಿರಲಿಲ್ಲ. ತಥಾಗತನು ಅರಹಂತನಾಗಿ ಬುದ್ಧನಾಗಿದ್ದಾನೆ.

ಆ ಐದು ತಪಸ್ವಿಗಳು ಮತ್ತೆ ಅದನ್ನೇ ನುಡಿದರು. ಬುದ್ಧನು ಅವರಿಗೆ ಮತ್ತೆ ಅದನ್ನೇ ವಿವರಿಸಿದನು. ಮೂರನೇ ಬಾರಿಯ ಅವರು ಹಾಗೆಯೇ ಪ್ರಶ್ನಿಸಿದರು. ಆಗ ಬುದ್ಧನು ಹೇಳಿದನು– "ತಪಸ್ವಿಗಳೇ. ಈ ಹಿಂದೆ ನಾನು ಎಂದಾದರೂ ಈ ನನಗೆ ಪರಿಪೂರ್ಣ ಬೋಧಿ ಪ್ರಾಪ್ತವಾಗಿದೆ ಎಂದು ನುಡಿದಿದ್ದೇನೆಯೇ?

"ಇಲ್ಲ ಸ್ವಾಮಿ" ಎಂದು ಒಪ್ಪಿದರು.

ಹೀಗೆ ಬುದ್ಧನು ಅವರಿಗೆ ಮನವರಿಕೆ ಮಾಡಲು ಯಶಸ್ವಿಯಾದನು. ಆಗ ಐದು ಪರಿವ್ರಾಜಕರು ಆತನ ವ್ಯಾಖ್ಯಾನಕ್ಕೆ ಕಿವಿಗೊಟ್ಟು ಕೇಳಲು ಸಿದ್ಧರಾದರು.

ಆಗ ಬುದ್ಧನು ಧರ್ಮಚಕ್ರ ಉರುಳಿಸಲು ಆ ಐದು ಪರಿವ್ರಾಜಕರಿಗೆ ಪ್ರಥಮ ಧರ್ಮೋಪದೇಶ ಪ್ರಾರಂಭಿಸಿದನು.

"ಓ ತಪಸ್ವಿಗಳೇ, ಎರಡು ವೈಪರಿತ್ಯಗಳುಂಟು, ಸಂಸಾರತ್ಯಾಗಿಯು ಅವುಗಳನ್ನು ಬಿಡಬೇಕು. ಒಂದು ವಿಲಾಸಭೋಗ, ಇಂದ್ರಿಯ ಸುಖ ಪಡೆಯುವುದು; ಅದು ತುಚ್ಛ, ಅಸಂಸ್ಕೃತ, ಸಾಮಾನ್ಯ ವಿಚಾರ, ಅಗೌರವವಾದದ್ದು; ಮತ್ತು ಅದು ದುಃಖವನ್ನು ತರುವಂಥಾದ್ದು, ಮತ್ತೊಂದು ದೇಹದಂಡನೆ; ಅದು ನೋವುಳ್ಳದ್ದು, ಅಸಂಸ್ಕೃತವಾದದ್ದು ಮತ್ತು ದುಃಖವನ್ನೇ ತರುವಂಥಾದ್ದು. ಓ ಭಿಕ್ಷುಗಳೆ, ತಥಾಗತನು ಇವೆರಡನ್ನು ಬಿಟ್ಟು ಮಧ್ಯಮ ಮಾರ್ಗವನ್ನು ಅನುಸರಿಸಿದ್ದಾನೆ. ಅದು ವಿವೇಕವನ್ನು, ಜ್ಞಾನವನ್ನು ಉತ್ಪತ್ತಿಸುತ್ತದೆ. ಅದು ಮನಃಶಾಂತಿಗೆ, ಶ್ರೇಷ್ಠಜ್ಞಾನಕ್ಕೆ, ಬುದ್ಧತ್ವಕೆ ಮತ್ತು ವಿಮುಕ್ತಿಗೆ ಪ್ರಯೋಜನಕಾರಿ."

"ಓ ತಪಸ್ವಿಗಳೇ, ತಥಾಗತನು ಕಂಡ ಈ ಮಧ್ಯಮ ಮಾರ್ಗ ಯಾವುದು? ಅದೇ ಆ ಅರಿಯ ಅಷ್ಟಾಂಗಿಕ ಮಾರ್ಗ, ಸಮ್ಮಾ ದೃಷ್ಟಿ, ಸಮ್ಮಾ ಸಂಕಲ್ಪ, ಸಮ್ಮಾ ವಾಚಾ, ಸಮ್ಮಾಕರ್ಮ, ಸಮ್ಮಾಜೀವನ, ಸಮ್ಮಾ ವ್ಯಾಯಾಮ, ಸಮ್ಮಾ ಸ್ಮೃತಿ, ಸಮ್ಮಾ ಸಮಾಧಿ."

"ತಪಸ್ವಿಗಳೇ, ದುಃಖವೆಂಬ ಅರಿಯ ಸತ್ಯ ಹೀಗಿದೆ; ಜಾತಿ ದುಃಖ, ಜರಾ ದುಃಖ, ವ್ಯಾಧಿ ದುಃಖ, ಮರಣ ದುಃಖ, ಅಪ್ರಿಯರನ್ನೊಡಗೂಡಿರುವುದು ದುಃಖ, ಪ್ರಿಯರಿಂದ ಅಗಲುವುದು ದುಃಖ, ತಾನು ಅಪೇಕ್ಷಿಸಿದ್ದು ದೊರೆಯಲಾರದ್ದು ದುಃಖ, ಅಂದರೇ ಪಂಚಖಂದಗಳೇ ದುಃಖ"

" ಓ ತಪಸ್ವಿಗಳೇ, ಈ ಮಹಾ ಸತ್ಯವೇ ದುಃಖಕ್ಕೆ ಕಾರಣ: ಪುನರ್ಜನ್ಮ ತರುವ ಸಂತೋಷ. ರಾಗದಿಂದೊಡಗೂಡಿರುವ, ಅಲ್ಲಲ್ಲಿ ಸಂತೋಷವನ್ನು ಬಯಸುವ ತೃಷ್ಣೆ, ಅಂದರೆ ಅಭಿಲಾಷೆಯ ಕಾಮತೃಷ್ಣೆ, ಅಸ್ತಿತ್ವದ ಭವತೃಷ್ಣೆ, ನಾಶದ ವಿಭವ ತೃಷ್ಣೆ.

" ಓ ತಪಸ್ವಿಗಳೇ, ಈ ಮಹಾಸತ್ಯವೇ ದುಃಖ ನಿವಾರಣೆ: ಆ ತೃಷ್ಣೆಯನ್ನು ತಡೆಯುವದು, ನಿಲ್ಲಿಸುವುದು, ಬಿಟ್ಟುಬಿಡುವುದು, ಅದರಿಂದ ವಿಮೋಚನೆಗೊಳ್ಳುವುದು ಕಳಚಿಕೊಳ್ಳುವುದು."

"ಓ ತಪಸ್ವಿಗಳೇ, ಈ ಶ್ರೇಷ್ಠ ಸತ್ಯವೇ ದುಃಖ ನಿವಾರಣೆಯ ಮಾರ್ಗ, ಅದೇ ಅರಿಯ ಅಷ್ಟಾಂಗಿಕ ಮಾರ್ಗ;

"ಓ ತಪಸ್ವಿಗಳೇ, ಇದೇ ದುಃಖ ಅರಿಯ ಸತ್ಯವು", ಈ ಸತ್ಯವನ್ನು ತಪಸ್ವಿಗಳೇ, ಪೂರ್ಣ ಅರಿತುಕೊಳ್ಳಬೇಕು. ಅದನ್ನು ನಾನು ಅರಿತುಕೊಂಡಿದ್ದೇನೆ. ಈ ಮೊದಲು ಎಂದೂ ಕೇಳದ ಧರ್ಮಗಳಲ್ಲಿ ನನಗೆ ಜ್ಞಾನೋದಯವಾಯಿತು, ಅರಿವಾಯಿತು. ತಿಳುವಳಿಕೆ ಆಯಿತು. ಪ್ರಕಾಶಗೊಂಡಿತು,

"ಓ ತಪಸ್ವಿಗಳೆ, ಇದು ದುಃಖದ ಕಾರಣ ಅರಿಯ ಸತ್ಯ" ಈ ದುಃಖ ಕಾರಣವನ್ನು ತಪಸ್ವಿಗಳೆ, ನಾಶಗೊಳಿಸಬೇಕು. ಅದನ್ನು ನಾನು ನಾಶಗೊಳಿಸಿದ್ದೇನೆ". ಈ ಮೊದಲು ಎಂದೂ ಕೇಳಿರದ ಧಮ್ಮದಲ್ಲಿ ನನಗೆ ಜ್ಞಾನೋದಯವಾಯಿತು, ಅರಿವಾಯಿತು, ತಿಳುವಳಿಕೆ ಆಯಿತು, ಪರಿಜ್ಞಾನವಾಯಿತು, ಪ್ರಕಾಶಗೊಂಡಿತು,

"ಓ ತಪಸ್ವಿಗಳೆ, ಇದೇ ದುಃಖನಿವಾರಣೆ ಅರಿಯ ಸತ್ಯ. ಈ ದುಃಖನಿವಾರಣೆಯನ್ನು ತಪಸ್ವಿಗಳೆ, ಸಾಕ್ಷಾತ್ಕರಿಸಿಕೊಳ್ಳಬೇಕು; ನಾನು ಸಾಕ್ಷಾತ್ಕರಿಸಿಕೊಂಡಿದ್ದೇನೆ." ಈ ಮೊದಲು ನಾನು ಕೇಳಿರದ ಧರ್ಮದಲ್ಲಿ ನನಗೆ ಜ್ಞಾನೋದಯವಾಯಿತು, ಅರಿವಾಯಿತು, ತಿಳುವಳಿಕೆ ಆಯಿತು, ಪರಿಜ್ಞಾನವಾಯಿತು, ಪ್ರಕಾಶಗೊಂಡಿತು,

"ಓ ತಪಸ್ವಿಗಳೆ, ಇದೇ ದುಃಖನಿವಾರಣೆ ಮಾರ್ಗದ ಅರಿಯ ಸತ್ಯ. ಈ ಶ್ರೇಷ್ಠ ಸತ್ಯವನ್ನು, ತಪಸ್ವಿಗಳೆ, ಬೆಳೆಸಿಕೊಳ್ಳಬೇಕು; ನಾನು ಅದನ್ನು ಬೆಳೆಸಿಕೊಂಡಿದ್ದೇನೆ." ಈ ಎಂದೂ ಹಿಂದೆ ನಾನು ಕೇಳಿರದ ಧಮ್ಮದಲ್ಲಿ ನನಗೆ ಜ್ಞಾನೋದಯವಾಯಿತು, ಅರಿವಾಯಿತು, ತಿಳುವಳಿಕೆ ಆಯಿತು, ಪರಿಜ್ಞಾನವಾಯಿತು, ಪ್ರಕಾಶಗೊಂಡಿತು,

"ಓ ಭಿಕ್ಷುಗಳೆ, ಎಲ್ಲಿಯವರೆಗೆ ಈ ನಾಲ್ಕು ಸತ್ಯಗಳನ್ನು ಮೂರು ಮೂರು ರೀತಿಗಳಲ್ಲಿ, ಅಂದರೆ ಹೀಗೆ ಒಟ್ಟು ಹನ್ನೆರಡು ಯಥಾರ್ಥವಾದ ಜ್ಞಾನದರ್ಶನ ಪರಿಶುದ್ಧವಾಗಲಿಲ್ಲವೋ ಅಲ್ಲಿಯವರೆಗೆ ಬುದ್ಧತ್ವವನ್ನು ಪಡೆದೆನೆಂದು ಮಾನವರಿಗಾಗಲಿ, ದೇವತೆಗಳಿಗಾಗಲಿ, ಮಾರನಿಗಾಗಲಿ, ಬ್ರಹ್ಮನಿಗಾಗಲಿ, ಸಮಣನಿಗಾಗಲಿ, ಬ್ರಾಹ್ಮಣರಿಗಾಗಲಿ, ನಾನು ಪ್ರಕಟಪಡಿಸಿರಲಿಲ್ಲ."

"ಭಿಕ್ಷುಗಳೆ, ಯಾವಾಗ ನಾಲ್ಕು ಸತ್ಯಗಳನ್ನು ಮೂರು ರೀತಿಗಳಲ್ಲಿ, ಒಟ್ಟು ಹನ್ನೆರಡು ಬಗೆಯಲ್ಲಿ ಯಥಾರ್ಥವಾದ ಜ್ಞಾನದರ್ಶನ ಪರಿಶುದ್ಧವಾಯಿತೋ ಆಗ ನಾನು ಬುದ್ಧತ್ವವನ್ನು ಪಡೆದೆನು– ಎಂದು ಮಾನವರಿಗೆ, ದೇವತೆಗಳಿಗೆ, ಮಾರನಿಗೆ, ಬ್ರಹ್ಮನಿಗೆ, ಸಮಣರಿಗೆ, ಬ್ರಾಹ್ಮಣರಿಗೆ, ಪ್ರಕಟಪಡಿಸಿದೆ. ನನ್ನಲ್ಲಿ ಅಲುಗದ ಮಾನಸಿಕ ವಿಮುಕ್ತಿಯ ಅರಿವು, ಜ್ಞಾನವು ಮೂಡಿತು. ಇದೇ ನನ್ನ ಕೊನೆಯ ಜನ್ಮ; ನನಗೆ ಪುನರ್ಜನ್ಮವಿಲ್ಲ."

ಹೀಗೆ ಧಮ್ಮವನ್ನು ಘೋಷಿಸಿದೊಡನೆ ಪೂಜ್ಯ ಕೊಂಡಜ್ಞನಿಗೆ ಸ್ಪಷ್ಟ ತಿಳುವಳಿಕೆ ಆಯಿತು, "ಹುಟ್ಟುವ ಸ್ವಭಾವ ಹೊಂದಿದ್ದೆಲ್ಲವೂ ನಶಿಸುವ ನಿಯಮಕ್ಕೆ ಒಳಪಟ್ಟಿದೆ." ಈ ಜ್ಞಾನವನ್ನು ಅನುಭವಿಸಿದವರು ನಿರ್ವಾಣವನ್ನು ಸಾಕ್ಷಾತ್ಕರಿಸಿಕೊಂಡು ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಅಥವಾ ಅರಹಂತ ಸ್ಥಿತಿಯನ್ನು ಹೊಂದುತ್ತಾರೆ.

ಬುದ್ಧನು ಧರ್ಮಚಕ್ರವನ್ನು ಉರುಳಿಸಿದೊಡನೆ ಸ್ವರ್ಗಲೋಕದ ದೇವತೆಗಳು ಡಂಗುರ ಸಾರಿದರು: "ಇಲ್ಲಿ ಸಾರನಾಥದ ಋಷಿಪಟ್ಟಣದ ಮೃಗವನದಲ್ಲಿ ಸಮ್ಮಾಸಂಬುದ್ಧನು ಧರ್ಮಚಕ್ರ ಪ್ರವರ್ತನಗೈದನು. ಅದನ್ನು ಸಮಣರಿಂದಾಗಲಿ, ಮಾನವರಿಂದಾಗಲಿ, ದೇವತೆಗಳಿಂದಾಗಲಿ, ಮಾರನಿಂದಾಗಲಿ, ಬ್ರಹ್ಮನಿಂದಾಗಲಿ ಹಿಂದಕ್ಕೆ ಉರುಳಿಸಲು ಸಾಧ್ಯವಿಲ್ಲ.

**(ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ ವೈ.ಬಿ.ನಂದನ ಅವರ 'ಭಗವಾನ್ ಬುದ್ಧ' ಕೃತಿಯಿಂದ ಆಯ್ದ ಭಾಗ)**

## ಸಾಹಿತ್ಯ–ಸಂಸ್ಕೃತಿ–ಕಲೆ–ಹವ್ಯಾಸ:

# ಬೆರಗು ಹುಟ್ಟಿಸಿದ ಎರಡು ಜೀವಗಳು




ನಮ್ಮ ಪತ್ರಿಕೆಯ ಕೆಲ ತಿಂಗಳುಗಳ ಹಿಂದಿನ ಸಂಚಿಕೆಯೊಂದರಲ್ಲಿ ಚಿತ್ರದುರ್ಗ ಜಿಲ್ಲೆಯ ಮೂಲೆಯೊಂದರ ಹಳ್ಳಿಯ ಚಮ್ಮಾರ ಕುಲದ ಹುಡುಗನೊಬ್ಬನ 'ನನ್ನದೂ ಒಂದಿಷ್ಟು' ಎಂಬ ಶೀರ್ಷಿಕೆಯ ಬಾಲ್ಯದ ನೆನಪುಗಳ ಬರಹವೊಂದನ್ನು ಓದಿದ ನೆನಪು ನಮ್ಮ ಕೆಲವು ಓದುಗರಿಗಾದರೂ ಇರಬೇಕು. ಅದರ ಜೀವಂತ ವಿವರ ಮತ್ತು ಶೈಲಿಯ ಮುಗ್ಧತೆಗಳಿಗಾಗಿ ಮೆಚ್ಚಿದ ಓದುಗರಲ್ಲಿ ಒಂದಿಬ್ಬರು ಆ ಪುಸ್ತಕವನ್ನು ಲೇಖಕರಿಂದ ತರಿಸಿಕೊಂಡಿದ್ದ ನೆನಪು. ಆ ಬರಹದ ಲೇಖಕರ ನಿಜ ನಾಮಧೇಯ ತಿಪ್ಪೇಸ್ವಾಮಿ ಎಂಬುದಾದರೂ, ಅವರು ಬರೆಯುವುದೆಲ್ಲ ತಮ್ಮ ಹುಟ್ಟೂರಿನ ಋಣದ ಪ್ರತೀಕವಾಗಿ ಬಿ.ಟಿ. ಬೆಳಗಟ್ಟ ಎಂಬ ಹೆಸರಿನಲ್ಲೇ. ಊರನ್ನು ಕುರಿತ ಪ್ರೀತಿಯಷ್ಟೇ ಅವರಿಗೆ ಚರ್ಮದ ಕೆಲಸ ಮಾಡುತ್ತಿದ್ದ (ಇದನ್ನು ತಿಪ್ಪೇಸ್ವಾಮಿ ಒಂದೆಡೆ 'ಚರ್ಮಶಿಲ್ಪ' ಎಂದು ಕರೆದಿದ್ದಾರೆ!) ತಮ್ಮ ತಂದೆ ಬೋಸಯ್ಯನವರ ಬಗ್ಗೆಯೂ ಪ್ರೀತಿ. ಇದರ ಸಾಕಾರ ರೂಪವೆಂದರೆ ಅವರು ನಡೆಸುತ್ತಿರುವ ಕೆಳಗಿನಮನೆ ಬೋಸಯ್ಯ ಪುಸ್ತಕ ಮಾಲೆ. ವೃತ್ತಿಯಿಂದ ಬಿಎಸ್‌ಎನ್‌ಎಲ್‌ನಲ್ಲಿ ಇಂಜಿನಿಯರ್ ಆಗಿದ್ದ ತಿಪ್ಪೇಸ್ವಾಮಿಯವರ ಈ ಸಾರಸ್ವತ ಕಾಳಜಿ– ಸಂಭ್ರಮಗಳು ಬೆರಗು ಹುಟ್ಟಿಸುವಂತಹದ್ದು, ವಿಶೇಷವಾಗಿ ಈ ದಿನಗಳಲ್ಲಿ. ಇವರ ಪ್ರಕಾಶನದ ಕಿರು ಪುಸ್ತಕಗಳ ಬಗ್ಗೆ ಇನ್ನೊಮ್ಮೆ ಬರೆಯುವೆ.



ಮೇರೆವರಿಯದ್ದು ಎಂದೆ. ಏಕೆಂದರೆ ತಿಪ್ಪೇಸ್ವಾಮಿ ಇವುಗಳಿಂದಷ್ಟೇ ತೃಪ್ತರಾಗದೆ ತಾವೀಗ ನೆಲೆಸಿರುವ ದಾವಣಗೆರೆಯಿಂದ 'ಬೆಳಗಟ್ಟ' ಎಂಬ ವಾರಪತ್ರಿಕೆಯನ್ನೂ ಹೊರತರುತ್ತಿದ್ದಾರೆ. ಹತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ. ಬರುತ್ತಿರುವ ಈ ಪತ್ರಿಕೆಗೆ, ಅವರು ಸರ್ಕಾರಿ ನೌಕರಿಯಲ್ಲಿದ್ದುದರಿಂದ ಸಂಪಾದಕತ್ವ ಅವರ ಪತ್ನಿ ಸುನಂದಮ್ಮನವರ ಹೆಸರಿನಲ್ಲಿದೆಯಷ್ಟೆ. ಇವರ ಈ ಎಲ್ಲ ಸಾಹಸಗಳ ಬಗ್ಗೆ ನಾನಿಲ್ಲಿ ಬರೆಯಲು ಕಾರಣ, ಅವರು ಇದನ್ನೆಲ್ಲ ಕೈ ಕಾಸು ಕಳೆದುಕೊಳ್ಳುವ ಹವ್ಯಾಸವಾಗಿ ಮಾಡುತ್ತಿದ್ದಾರೆ ಎಂಬುದು. ಕಳೆದ ತಿಂಗಳು ಅವರ ಪತ್ರಿಕೆಯ ಒಂದು ಸಂಚಿಕೆ ನನಗೆ ಬಂತು. ಅದೊಂದು ಯಾವುದೇ ರಾಜಕೀಯ ಸುದ್ದಿ ಇಲ್ಲದ ಸಾಮಾನ್ಯ ಜ್ಞಾನದ, ಸ್ಥೂಲವಾಗಿ ಶೈಕ್ಷಣಿಕ ಉದ್ದೇಶವುಳ್ಳದ್ದು ಎಂದು ಹೇಳಬಹುದಾದ ೪ ಪುಟಗಳ ಸದಭಿರುಚಿಯ ಪತ್ರಿಕೆ. ಅದರಲ್ಲಿ ಸಿದ್ಧಗಂಗೆ ಶ್ರೀಗಳ ಕುರಿತ ಒಂದು ನೆನಪಿನ ಶ್ರದ್ಧಾ ಬರಹ, ಬೀಚಿಯವರ 'ಉತ್ತರಭೂಪ'ದಿಂದ ಆಯ್ದ ಪ್ರಶ್ನೋತ್ತರ, ಬೆಳಗೆರೆ ಕೃಷ್ಣಶಾಸ್ತ್ರಿಗಳ ಪುಸ್ತಕದಿಂದಾಯ್ದ ಒಂದು ವ್ಯಕ್ತಿ ಚಿತ್ರ ಇದೆ. ಸಾಂಚಿಯ ಸ್ತೂಪದ ಪರಿಚಯ ಲೇಖನದ ಜೊತೆಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರ್‌ಗೆ ಸಂದಿರುವ ಒಂದು ಪ್ರತಿಷ್ಠಿತ ಪ್ರಶಸ್ತಿಯ ನೆಪದಲ್ಲಿ ಅವರನ್ನು ಕುರಿತ ಪರಿಚಯ ಲೇಖನವಿದೆ. ಇನ್ನು ಸುದ್ದಿಯಾಗಿ ಚಿಮೂ ಅವರನ್ನು ನೆನೆಯುವ ಪುಟ್ಟ ಟಿಪ್ಪಣಿಯೂ ಇದೆ. ಇದೆಲ್ಲದರ ಜೊತೆಗೆ ಎಲ್ಲ ಪತ್ರಿಕೆಗಳ ಸ್ಥಿರ ಐಟಂಗಳಾದ ಅಮೃತ ಸಿಂಚನ (ನುಡಿಮುತ್ತು). ಅಲ್ಲಿಂದ ಇಲ್ಲಿಂದ ಆಯ್ದ ಸುದ್ದಿ ತುಣುಕುಗಳೂ ಇವೆ; ಮರೆತೆ, ಪದಬಂದವೂ ಇದೆ! ಈ ಸಂಚಿಕೆಯಲ್ಲಿ ನನ್ನ ಆಸಕ್ತಿ ಕೆರಳಿಸಿದ ಸಂಗತಿ ಎಂದರೆ ತಿಪ್ಪೇಸ್ವಾಮಿಯವರ 'ನನ್ನದೂ ಒಂದಿಷ್ಟು' ಅನುಭವ ಕಥನ ಇಲ್ಲಿ ಮುಂದುವರೆಸಿರುವುದು. ಅದಕ್ಕಾಗಿ ನಾನಂತೂ ಕಾಯುತ್ತೇನೆ.

ನಾನು ಮೊನ್ನೆ ತಿಪ್ಪೇಸ್ವಾಮಿಯವರೊಂದಿಗೆ ದೂರವಾಣಿಯಲ್ಲಿ ಮಾತನಾಡುತ್ತಾ, 'ಯಾರಿಗಾಗಿ ಈ ಪತ್ರಿಕೆ?' ಎಂದು ಕೇಳಿದೆ. ಅವರು 'ನಮ್ಮ ಸ್ನೇಹಿತರ ಕಿರುಬಳಗಕ್ಕಾಗಿ ಸಾರ್!' ಎಂದು ಸಾಕಷ್ಟು ಉತ್ಸಾಹ ಪ್ರಕಟಿಸುತ್ತಲೇ ಹೇಳಿದರು. ಹಣಕಾಸು? 'ಕೈಯಲ್ಲಿ ಹಣದ ಅನುಕೂಲವಿದ್ದಾಗ ಹೇಗೋ ನಡೆಯುತ್ತದೆ. ಎಂಬುದು ಅವರ ಉತ್ತರ. ಇದನ್ನು ಕೇಳಿ ನಾನು ಅವರನ್ನು ಮೊದಲಾಗಿ ಯಾರಿಗಾಗಿ ಈ ಪತ್ರಿಕೆ?' ಎಂದು ಕೇಳಬಾರದಾಗಿತ್ತು ಅನ್ನಿಸಿತು. ಏಕೆಂದರೆ ಅದು ಅವರು ತಮಗಾಗಿಯೇ ನಡೆಸುತ್ತಿರುವ ಪತ್ರಿಕೆ ಎಂಬುದು ಇಂತಹುದೇ ಹಲವು ಹುಚ್ಚುಗಳ ನನಗೆ ಗೊತ್ತಾಗಬೇಕಿತ್ತು! ತಿಪ್ಪೇಸ್ವಾಮಿಯವರಿಗೆ 'ಹೊಸ ಮನುಷ್ಯ'ನ ಪರವಾಗಿ ಒಂದು ಸಲಾಂ!

## ಪ್ರವಾಸದಲ್ಲಿ ಎದುರಾದ ಒಂದು ಬಹುಮುಖ ಪ್ರತಿಭೆ

ಗೆಳೆಯ ಜಿ.ಬಿ. ಶಿವರಾಜು ಅವರು ಬಹಳ ದಿನಗಳಿಂದ ನನ್ನನ್ನು ಪತ್ನೀ ಸಮೇತರಾಗಿ ತಮ್ಮೂರಿಗೆ ಬರಬೇಕೆಂದು ಆಹ್ವಾನವೀಯುತ್ತಿದ್ದರು. ಅವರೂರು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಅಂಚಿನ ಗ್ರಾಮ ಗೊಟ್ಟಿಕೆರೆ. ಅದು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಗಡಿಗೆ ಅಂಟಿಕೊಂಡಿರುವ ಊರು. ಮೊನ್ನೆ ಅವರು ತಾವು ತಮ್ಮ ತೋಟದಲ್ಲಿ ಎರಡು ಕೋಣೆಗಳ ಒಂದು ಸರಳ ಸಭ್ಯ ಅತಿಥಿ ಗೃಹ ಕಟ್ಟಿಸಿದ್ದು, ಅಲ್ಲಿ ಮೊದಲ ವಾಸ್ತವ್ಯ ನಿಮ್ಮದೇ ಆಗಬೇಕೆಂದು ಆಗ್ರಹಿಸಿ, ನನಗೆ ಅನುಕೂಲವಾದ ದಿನವನ್ನೇ ಅದಕ್ಕೆ ನಿಗದಿ ಮಾಡಿ ನನ್ನನ್ನು ಬಂಧಿಸಿದ್ದರಿಂದ ಕರೋನಾ ಬೀಗಮುದ್ರೆ ಘೋಷಣೆಯ ಎರಡು ಮೂರು ದಿನ ಮುಂಚೆ ನಾನು ಅಲ್ಲಿಗೆ ಹೋಗಲೇಬೇಕಾಯಿತು. ನನ್ನೊಂದಿಗೆ ಬಂದವರು ಪತ್ನಿ ಸವಿತಾ ಮತ್ತು ಗೆಳೆಯ ಹೊನ್ನಾಳಿ ಚಂದ್ರು.

ಇದೇ ಪ್ರವಾಸದ ಮುಂದುವರಿಕೆಯಾಗಿ ನಾವು ತುಮಕೂರಿನ ದಂಪತಿ ಗೆಳೆಯರಾದ ಡಾ. ಬಸವರಾಜು ಮತ್ತು ಮಲ್ಲಿಕಾ ಅವರ ಹೊಸಮನೆಯ ವಾಸ್ತವ್ಯವನ್ನು ಅನುಭವಿಸಿ, ಮಲ್ಲಿಕಾ ಅವರ ನೇತೃತ್ವದ ಜಿಲ್ಲಾ ಲೇಖಕಿಯರ ಸಂಘ ಏರ್ಪಡಿಸಿದ್ದ ನನ್ನ 'ಗಾಂಧಿ ಕಥನ'ದ ಮೂರನೇ ಆವೃತ್ತಿಯ ಬಿಡುಗಡೆ ಸಮಾರಂಭದಲ್ಲಿಯೂ ಭಾಗವಹಿಸಿ ಬಂದೆವು. ಈ ಸಮಾರಂಭದಲ್ಲಿ ಉಪಸ್ಥಿತರಿದ್ದ ಅತಿಥಿಗಳೆಂದರೆ ಪ್ರೊ. ಜಿ.ಎಂ. ಶ್ರೀನಿವಾಸಯ್ಯ, ಪ್ರಗತಿಪರ ಚಿಂತಕ ದೊರೈರಾಜ್ ಹಾಗೂ ಲೇಖಕಿ ಗೀತಾ ವಸಂತ.

ಶಿವರಾಜು, ಅಂದು ತಮ್ಮ ತೋಟದಲ್ಲಿ ತಮ್ಮ ಕುಟುಂಬ, ಆಪ್ತ ಬಂಧು ಬಳಗದೊಂದಿಗೆ ಸುಮಾರು ಮುವ್ವತ್ತು ಜನ ಗೆಳೆಯರನ್ನೂ ಸೇರಿಸಿದ್ದರು. ಊಟ ರಾಗಿಮುದ್ದೆ, ಕಾಳು–ಸೊಪ್ಪಿನ ಬಸ್ಸಾರು ಮತ್ತು ನಾನು ಬಹಳ ದಿನಗಳಿಂದ ಕಾಣದಿದ್ದ ಮತ್ತು ಈ ಹಿಂದೆ ನಮ್ಮ ಮನೆಗಳ ಮದುವೆ ಸಮಾರಂಭಗಳ ಶಾಶ್ವತ ಸಿಹಿ ಭಕ್ಷ್ಯವಾಗಿದ್ದ ಪಾಯಸ–ಸಿಹಿ ಬೂಂದಿ. ನನ್ನ ಹಳೆಯ ಸವಿ ನೆನಪುಗಳೊಂದಿಗೆ ನಾನು ಸ್ವಲ್ಪ ಮಿತಿ ಮೀರಿಯೇ ಆ ಸಿಹಿ ಬೂಂದಿಯನ್ನು ಜಮಾಯಿಸಿ ಹೊಡೆದೆ. ನಂತರದಲ್ಲೇ ಸುಸ್ತಾಗಿ ಹೊಸ ಅತಿಥಿ ಗೃಹದ ಕೊಠಡಿಯಲ್ಲಿ ಗಡದ್ದಾಗಿ ನಿದ್ದೆ ಮಾಡಿದೆ.

ಶಿವರಾಜು ಸೇರಿಸಿದ್ದ ಗೆಳೆಯರ ಗುಂಪಿನಲ್ಲಿ ನಮ್ಮ ಹೊಸ ಮನುಷ್ಯದ ಸಾಕಷ್ಟು ಓದುಗರಿದ್ದರು. ಜೊತೆಗೆ 'ಗಾಂಧಿ ಕಥನ'ದ ಓದುಗರೂ. ಇವರಲ್ಲಿ ಚನ್ನರಾಯಪಟ್ಟಣದ ಮಾಜಿ ಶಾಸಕ ಪುಟ್ಟರಾಜು ಅವರೂ ಸೇರಿದ್ದರು. ಹಾಗಾಗಿ ಈ ಗೆಳೆಯರೊಂದಿಗೆ ನಮ್ಮ ಮಾತುಕತೆ ತುಂಬ ಅಪ್ಯಾಯಮಾನವೇ ಆಗಿತ್ತು. ಆದರೆ ಅಂದು ಸಂಜೆ ಇದೆಲ್ಲದಕ್ಕಿಂತ ಹೆಚ್ಚು ಅಪ್ಯಾಯಮಾನವಾಗಿದ್ದುದು ಆ ಗುಂಪಿನಲ್ಲಿದ್ದ ಅಪರೂಪದ ಗ್ರಾಮೀಣ ಸೊಗಡಿನ ಪ್ರತಿಭೆ ಹುಲಿಕಲ್ ನಾಗರಾಜ್ ಅವರ ರಂಗಗೀತೆಗಳ ಗಾಯನ. ನನ್ನ ಬಾಲ್ಯದ ನೆನಪುಗಳನ್ನೆಲ್ಲ ಕೆದಕಿಕೊಂಡು ಅವರಿಂದ ನನ್ನ ಪ್ರೀತಿಯ ರಂಗಗೀತೆಗಳನ್ನು ಹಾಡಿಸಿ ಮುಖ್ಯವಾಗಿ ಕೊಟ್ಟೂರಪ್ಪನವರ ದಾನಶೂರ ಕರ್ಣ ಮತ್ತು ಕುರುಕ್ಷೇತ್ರ ನಾಟಕಗಳ ಗೀತೆಗಳು. ಕಂಚಿನ ಕಂಠಶ್ರೀ ಹೊಂದಿರುವ ನಾಗರಾಜ್ ಅವನ್ನು ಎಷ್ಟು ಸಾಹಿತ್ಯಶುದ್ಧಿ ಮತ್ತು ರಾಗಬದ್ಧತೆಗಳಿಂದ ಹಾಡಿದರೆಂದರೆ ನಾನು ಅವರ ಅಭಿಮಾನಿಯೇ ಆಗಿ ಹೋದೆ! ಖುಷಿಯಿಂದ ನನ್ನ ಮನದಣಿದಿತ್ತು. ಆದರೂ ಅವರ ಪ್ರತಿಭೆಯನ್ನು ಮತ್ತಷ್ಟು ಕೆಣಕಿದಾಗ ಅವರಿಂದ ಹೊರಬಂದದ್ದು ಕಲ್ಪಿಸಿಕೊಳ್ಳಲಾಗದಷ್ಟು ಹರಿಕಥಾ ಪ್ರಸಂಗಗಳ ಮತ್ತು ಜಾನಪದ ಗೀತೆಗಳ ಅಮೂಲ್ಯ ದಾಸ್ತಾನು. ಜೊತೆಗೆ ಹಲವು ಕಾವ್ಯಗಳ ಗಮಕ:



ನಾನು ಬೆರಗಾಗಿ ಕೂತೆ. ಮಾಯವಾಗುತ್ತಿರುವ ನಮ್ಮ ಈ ಪಾರಂಪರಿಕ ಕಲೆಗಳನ್ನು ತಮ್ಮ ಕುಟುಂಬದ ಹಿನ್ನೆಲೆಯಿಂದಲೋ, ತಮ್ಮ ಸೀಮೆಯ ಕಲೆಗಳನ್ನು ಸ್ವಯಂ ಆಸಕ್ತಿಯಿಂದ ಕಲಿತು ಪ್ರಸಾರ ಮಾಡುತ್ತಾ ಉಳಿಸುವ ಉಮೇದಿನ ನಾಗರಾಜ್‌ರಂಥ ಪ್ರತಿಭೆಗಳನ್ನು ಸರ್ಕಾರ ಅಮೂಲ್ಯ ಆಸ್ತಿಯಂತೆ ಕಾಪಾಡಬೇಕು. ನಾಗರಾಜ್ ಈವರೆಗೆ ಮೂರು ಸಾವಿರ ಹರಿಕಥಾ ಪ್ರಸಂಗಗಳನ್ನು ನಡೆಸಿಕೊಟ್ಟಿದ್ದಾರೆ. ರಾಜ್ಯದ ಒಳಗೆ ಮತ್ತು ಹೊರಗೆ ನೂರಾರು ರಂಗಗೀತೆ ಮತ್ತು ಗಮಕ ಪ್ರದರ್ಶನಗಳನ್ನು ನೀಡಿದ್ದಾರೆ. ಆಕಾಶವಾಣಿ ಕಲಾವಿದರೂ ಆಗಿದ್ದಾರೆ. ಒಂದೆರಡು ಸಣ್ಣಪುಟ್ಟ ಪ್ರಶಸ್ತಿಗಳೂ ಬಂದಿವೆ. ಆದರೆ ಈ ಪ್ರತಿಭೆಗಳಿಗೆ ಇನ್ನೂ ಹೆಚ್ಚಿನ ಮಾನ್ಯತೆ, ವಿಶೇಷವಾಗಿ ಜನರ ಪ್ರೋತ್ಸಾಹ ಸಿಗಬೇಕಿದೆ. ಅವರ ಸಂಪರ್ಕ ದೂರವಾಣಿ ಸಂಖ್ಯೆ: **೮೪೩೧೦೪೧೮೮೭.**

**–ಡಿಎಸ್ನೆನ್**

# ಪುಸ್ತಕಾವಲೋಕನ

ಪು: ನಿಜವು ತೋರದಲ್ಲ(ಜೀವನ, ಸಮಾಜ,ಸಾಹಿತ್ಯ) ಲೇ ಎಚ್.ಎಸ್. ರಾಘವೇಂದ್ರ ರಾವ್ ಪ್ರ: ಸನ್ನಿಧಿ ಪ್ರಕಾಶನ ಬೆಂಗಳೂರು ಪು: ೨೬೪ ಬೆಲೆ: ರೂ. ೩೦೦/-

## ನಿಜದ ಅರಿವಿಗಾಗಿ ಅಮಾಯಕ ಅಲೆದಾಟ




ಇದು ಸಮಕಾಲೀನ ಕನ್ನಡ ಸಾಹಿತ್ಯ ಚಿಂತನಾ ಕ್ಷೇತ್ರದ ದೊಡ್ಡ ಹೆಸರಾದ ಎಚ್.ಎಸ್. ರಾಘವೇಂದ್ರ ರಾವ್ ತಮ್ಮ 'ಚಕ್ರವರ್ತಿ ಬಟ್ಟೆಗಳು' ಸಂಕಲನದ ನಂತರ ಹೊರತಂದಿರುವ ಬಹುಪಾಲು ಸಾಹಿತ್ಯೇತರವಾದ ಬಿಡಿ ಲೇಖನ/ಭಾಷಣಗಳ ಸಂಗ್ರಹ. ಬದುಕಿನ ಎಲ್ಲ ಆಸಕ್ತಿಗಳೂ ಪರಸ್ಪರ ಪ್ರಭಾವದಲ್ಲಿ ರೂಪು ತಳೆಯುತ್ತವೆ ಎಂಬ ನಂಬಿಕೆಯ ಆಧಾರದ ಮೇಲೆ ಈ ಬಿಡಿ ಲೇಖನಗಳು ಇಲ್ಲಿ ಒಟ್ಟಿಗೆ ಸಂಗ್ರಹಿತವಾಗಿದ್ದರೂ, ಇವನ್ನು ಸ್ಥೂಲವಾಗಿ ಸಾಹಿತ್ಯ ಸಂಬಂಧಿ ಮತ್ತು ಸಾಹಿತ್ಯೇತರ ಬರಹಗಳೆಂದು ವಿಂಗಡಿಸಬಹುದು. ಹಾಗೆ ನೋಡಿದಾಗ ಈ ಸಂಗ್ರಹ, ಮೊದಲ ಸಂಗ್ರಹಕ್ಕೆ ಹೋಲಿಸಿದರೆ ನಿರಾಶೆಯನ್ನು ಹುಟ್ಟಿಸುವಂತಿದೆ. ಇದಕ್ಕೆ ಎರಡು ಕಾರಣಗಳು ಇದ್ದಂತಿವೆ. ಒಂದು, ಸಾಹಿತ್ಯ ಚಿಂತನೆಯ ಲೇಖನಗಳ ಸಂಗ್ರಹಕ್ಕೆ ಯೋಗ್ಯವಲ್ಲದವೆಂದು ಲೇಖಕರೇ ತೀರ್ಮಾನಿಸಿದಂತೆ ಕಾಣುವ ಸಾಹಿತ್ಯ ಚಿಂತನೆಯ ಲೇಖನಗಳು ಇದರಲ್ಲಿ ಒಳಗೊಂಡಿರುವುದು. ಎರಡು, ಸಾಹಿತ್ಯೇತರ ವಿಷಯಗಳನ್ನು ಕುರಿತ ಲೇಖನಗಳು ಲೋಕ ಸಂಗತಿಗಳಿಗಿಂತ ಹೆಚ್ಚಾಗಿ ಅಮೂರ್ತ ಪರಿಕಲ್ಪನೆಗಳ ಸುತ್ತ ಗಿರಕಿ ಹೊಡೆಯುತ್ತಾ ದಿಕ್ಕೆಟ್ಟಿರುವುದು.

ಮೊದಲಿಗೆ ಸಾಹಿತ್ಯೇತರ ಲೇಖನಗಳ ಬಗ್ಗೆ ಆರಂಭದಲ್ಲೇ ಒಂದು ಮಾತು ಹೇಳಬೇಕು. ಸತ್ಯ ಸಾಪೇಕ್ಷವಾದದ್ದು ಎಂಬ ಬುದ್ಧನ ಮಾತಿನ ಪರಿವೆ ಇಲ್ಲದೆ ಇಲ್ಲಿನ ಲೇಖನಗಳಲ್ಲಿ ಸಂಸ್ಕೃತಿ-ಪ್ರಕೃತಿ-ವಿಕೃತಿ, ಸಹಜತೆ-ಸೌಜನ್ಯತೆ, ಅನುಭವ-ತಲ್ಲೀನತೆ, ಅನುಭಾವ-ಸಮುಸಾಯ, ನಂಬುಗೆ-ನೈತಿಕತೆ ಇತ್ಯಾದಿಗಳ ಪರಸ್ಪರ ಮುಖಾಮುಖಿಗಳನ್ನು ಭಾಷಿಕ ನೆಲೆಯಲ್ಲಿ ನಿರ್ವಹಿಸುತ್ತಾ ಅದರ ಮಧ್ಯೆ ಸತ್ಯವನ್ನು ಹುಡುಕುತ್ತಾ ಭಾಷಿಕ ಚಕ್ರವ್ಯೂಹದಲ್ಲಿ ಸಿಕ್ಕಿ ಹಾಕಿಕೊಳ್ಳುವ ಈ ಹಿರಿಯ ಲೇಖಕರ ಹವ್ಯಾಸಿತನ ಗಾಬರಿ ಹುಟ್ಟಿಸುವಂತಿದೆ. ಇವೆಲ್ಲವೂ ವಾಸ್ತವ ಸಂದರ್ಭಗಳಲ್ಲಿ ಸಾಕ್ಷ್ಯಗಳ ಆಧಾರದ ಮೇಲೆ ಆತ್ಮಸಾಕ್ಷಿಯ ನೆಲೆಯಲ್ಲಿ ತೀರ್ಮಾನವಾಗಬೇಕಾದ ಸರಿ ತಪ್ಪುಗಳ ವ್ಯವಹಾರ ಎಂಬುದು ಲೇಖಕರಿಗೆ ತಿಳಿಯದೇ ಹೋಗಿರುವುದು ಆಶ್ಚರ್ಯಕರ. ಇದಕ್ಕೆ ಕಾರಣ ಬಹುಶಃ ಅವರು ಮತ್ತೊಂದು ಅಮೂರ್ತ ಪರಿಕಲ್ಪನೆಯಾದ ಜನಪರತೆ ಅಥವಾ ಜೀವಪರತೆ ಎಂಬ ಪ್ರಗತಿಪರತೆಯ ಹೆಗ್ಗುರುತನ್ನು ಸದಾ ಹೊತ್ತು ತಿರುಗುವ ಅವರ ಚಿಂತನೆಯ ಭಾರ. ಹಾಗಾಗಿಯೇ ಅವರು ಇಂತಹ ತಮ್ಮದೊಂದು ಲೇಖನ/ಭಾಷಣವನ್ನು 'ನನ್ನ ಪ್ರೀತಿಯ ಸಹಜೀವಿಗಳೇ' ಎಂಬ ಕೃತಕ ಸಂಬೋಧನೆಯಿಂದ ಆರಂಭಿಸುತ್ತಾರೆ.

ಇಲ್ಲಿನ ಇಂತಹ ಲೇಖನ/ಚಿಂತನೆಗಳ ಸಮಸ್ಯೆಯ ಬಗ್ಗೆ ಒಂದು ಸಾಮಾನ್ಯ ಉದಾಹರಣೆಯ ಮೂಲಕ ವಿವರಿಸುವುದಾದರೆ, ಆಕಾಶವಾಣಿಗಾಗಿ ಬರೆದು ಪ್ರಸಾರ ಮಾಡಿದ 'ನಂಬಿಕೆ, ಮೂಢ ನಂಬಿಕೆ ಮತ್ತು ತಿಳಿವಳಿಕೆ' ಎಂಬ ಪುಟ್ಟ ಲೇಖನದಲ್ಲಿ ಎಚ್ಚೆಸ್ಸಾರ್ ನಂಬುಗೆ ಹೃದಯದಲ್ಲಿ ನೆಲೆಯೂರಿರುವ ಸಂಗತಿ ಎಂದು ಸರಿಯಾಗಿಯೇ ಹೇಳುತ್ತಾ, ಅಂತಹ ಕೆಲವನ್ನು ಒಪ್ಪಲಾಗದಿದ್ದರೂ, ಅವು ವ್ಯಕ್ತಿ ಸ್ವಾತಂತ್ರ್ಯದ ವ್ಯಾಪ್ತಿಗೆ ಬರುವುದರಿಂದ ವಿರೋಧಿಸಲಾಗದು ಎನ್ನುತ್ತಾರೆ. ನಂತರ, ಇಂತಹ ನಂಬುಗೆಯ ಒಂದು ಉದಾಹರಣೆಯಾಗಿ ಅವರು ಬಸವಣ್ಣನ 'ನಂಬರು ನೆಚ್ಚರು ಬರಿದೇ ಕರೆವರು' ಎಂಬ ವಚನದ ಸಾಲನ್ನು ಉಲ್ಲೇಖಿಸುತ್ತಾ, 'ಒಂದು ವೇಳೆ ನಂಬಿ ಕರೆದರೂ ಶಿವ ಓ ಎನ್ನುವನೆಂಬ ಗ್ಯಾರಂಟಿ ಇಲ್ಲ' ಎಂದು ಅರೆ ಚಟಾಕಿ ಹಾರಿಸುತ್ತಾರೆ. ಇದಕ್ಕೆ ಕಾರಣ ಈ ಸಾಲಿನ ಜಡ ಓದು. ಈ ಸಾಲಿನ ಪ್ರತಿ ಶಬ್ದವೂ ವಚನ ಚಳುವಳಿ ಅಥವಾ ಭಕ್ತಿ ಪಂಥದ ಆವರಣದಲ್ಲಿ ವಿಶೇಷ ಚಲನಶೀಲತೆಯನ್ನು ಪಡೆದು ಅಸಾಮಾನ್ಯ ಅರ್ಥದೊಡನೆ ಅನುರಣಿಸುತ್ತದೆ ಎಂಬುದರ ಅರಿವಿಲ್ಲದೆ ಗದ್ಯದ ಒಂದು ಸಾಲಿನಂತೆ ಸರಳ ರೇಖಾತ್ಮಕ ಅರ್ಥ ಗ್ರಹಣಕ್ಕೆ ಒಡ್ಡುವುದರ ಫಲವಿದು. ಉದಾ.ಗೆ ಈ ಸಾಲನ್ನು ಕನಕದಾಸರು ವ್ಯಾಸಮಠದಲ್ಲಿ ದೇವರನ್ನು ಕರೆದಾಗ ದೇವರು ಬಂದು ಹೋದ 'ಪರಿ'ಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಅಂದರೆ ನಾನು ಹೇಳುತ್ತಿರುವುದು, ಇದು ಇಬ್ಬಗೆಯ ಕತ್ತಿಯಂತಿರುವ ವಿಷಯಗಳು ಸಾರ್ವಜನಿಕ ಭಾಷಣಗಳಲ್ಲಿ; ವಿಶೇಷವಾಗಿ, ಉಪದೇಶದ ಸ್ವರೂಪದ ಮಾತುಗಾರಿಕೆಯಲ್ಲಿ ಅಪ ಮತ್ತು ಅರೆ ತಿಳುವಳಿಕೆಗೆ ಈಡಾಗುವುದೇ ಹೆಚ್ಚು. ನಿಮ್ಮ ಮಾತುಗಳನ್ನು ಹೆಚ್ಚು ನೈತಿಕ ನೆಲೆಗೆ ಒಯ್ದಷ್ಟೂ ಇವುಗಳ ಅಪಾಯ ಜಾಸ್ತಿಯಾಗುತ್ತಾ ಹೋಗುತ್ತದೆ. ಈ ಮಾತನ್ನು ಈ ಪುಸ್ತಕದ ಸಾಹಿತ್ಯಿಕ-ಸಾಂಸ್ಕೃತಿಕವೆನ್ನಬಹುದಾದ ಲೇಖನಗಳಿಗೂ ಅನ್ವಯಿಸಿ ಕೆಲವು ಮಾತುಗಳನ್ನು ಆಡಬಹುದು. ಏಕೆಂದರೆ ಇಂದಿನ ಪ್ರಗತಿಪರತೆಯ ಜನಪ್ರಿಯ ಅಳತೆಗೋಲುಗಳು 'ರಾಜಕೀಯ ಸರಿತನ'ದ ಜೊತೆ ಸೇರಿ ಸಾರ್ವಜನಿಕ ನೈತಿಕತೆಯ ಅಳತೆಗೋಲುಗಳೂ ಆಗಿಬಿಟ್ಟಿವೆ. (ಅಂದರೆ ಒಂದು ನಿರ್ದಿಷ್ಟ ಮಾದರಿಯ ಪ್ರಗತಿಪರತೆಯ ಅಳತೆಗೋಲುಗಳಿಗೆ ಸಿಗದ ಎಲ್ಲ ಬರಹಗಳೂ ಅನೈತಿಕವೆನ್ನಿಸುವ ಇಂದಿನ ಸಂದರ್ಭ) ಎಚ್ಚೆಸ್ಸಾರ್ ಅವರ ಲೇಖನಗಳೆಲ್ಲವೂ ಪ್ರಜ್ಞಾಪೂರ್ವಕವಾಗಿ ಈ ಅಳತೆಗೋಲುಗಳ ಮೇಲೆ ಒಂದು ಕಣ್ಣಿಟ್ಟೇ ಬರೆಯಲ್ಪಟ್ಟಿದ್ದು. ಇದರಿಂದಾಗಿ ಇವು ಹೇಳಹೊರಟಿರುವ ಸತ್ಯಕ್ಕೆ ಹಲವೆಡೆ ಎರವಾಗಿವೆ. ಆ ಜನಪ್ರಿಯ ಅಳತೆಗೋಲುಗಳೆಂದರೆ, ಬಹುತ್ವ, ಸಾಮಾಜಿಕ ನ್ಯಾಯ, ಲಿಂಗ ನ್ಯಾಯ ಇತ್ಯಾದಿ. ಒಬ್ಬ ಒಳ್ಳೆಯ ಲೇಖಕ ಸತ್ಯದ ಹಿಂದೆ ಬಿದ್ದರೆ ಇವೆಲ್ಲ ಸಹಜವಾಗಿಯೇ ಅವನ ಸಾಹಿತ್ಯದ ಅವಿಭಾಜ್ಯ ಅಂಗವಾಗಿರುತ್ತದೆ ಎಂಬುದನ್ನು ಎಚ್ಚೆಸ್ಸಾರ್‌ರಂತಹ ಹಿರಿಯ ಲೇಖಕರಿಗೆ ನಾನು ಹೇಳಬೇಕಿಲ್ಲವಷ್ಟೆ. ಆದರೂ ಅವರು ಕಾಲದ ಕೆಲ ಹೊರ ಒತ್ತಡಗಳಿಗೆ ಒಳಗಾದಂತೆ ಕೆಲ ಬಿಡುಬೀಸು ಮಾತುಗಳನ್ನಾಡುತ್ತಾರೆ. ಇಲ್ಲವೇ ಯಾವುದೇ ನಿರ್ದಿಷ್ಟ ನಿಲುವಿಲ್ಲದ ದುಂಡು ದುಂಡು ಮಾತುಗಳಿಗೆ ಶರಣಾಗುತ್ತಾರೆ. ಇವಕ್ಕೆ ಉದಾಹರಣೆಗಳೆಂದರೆ, 'ಪರಂಪರೆ ಮತ್ತು ಕವಿಪ್ರತಿಭೆಯ ಮುಖಾಮುಖಿ' ಎಂಬ ಭಾಷಣದಲ್ಲಿ 'ಬಂಡಾಯ-ದಲಿತ ಕಾವ್ಯವು ಲಂಕೇಶ್, ತೇಜಸ್ವಿ, ಅನಂತಮೂರ್ತಿ, ಚಿತ್ತಾಲರಂತಹ ಲೇಖಕರ ಸಾಹಿತ್ಯದ ದಿಕ್ಕು ಬದಲಾಯಿಸಿತು' ಎಂಬ ಅಚಾರಿತ್ರಿಕ ಮಾತು ಮತ್ತು ನಟ ರಾಜಕುಮಾರರನ್ನು ಕುರಿತ ಯಾರನ್ನಾದರೂ ಸುಸ್ತು ಮಾಡುವಷ್ಟು ಅತಿ ದೀರ್ಘ ಭಾಷಣದಲ್ಲಿ, ಅವರನ್ನು ಕನ್ನಡ ಸಂಸ್ಕೃತಿಯ ಮತ್ತು ಚಿತ್ರರಂಗದ ಎಲ್ಲ ಸಾಧನೆ-ಸದ್ಗುಣಗಳ ಕಾರಣಪುರುಷನಂತೆ ಮಾತಾಡಿರುವುದು. ಅದೂ, ಹೆಚ್ಚೆಂದರೆ ಅವರ ನಾಲ್ಕೋ ಐದೋ ಸಿನಿಮಾಗಳ ಉದಾಹರಣೆಗಳ ಆಧಾರದ ಮೇಲೆ. ಕುವೆಂಪು ಕನ್ನಡದ ಮೂಲಮೂರ್ತಿಯಾದರೆ ರಾಜಕುಮಾರ್ ಉತ್ಸವಮೂರ್ತಿಯಂತೆ! ಎಚ್ಚೆಸ್ಸಾರ್ ಇಲ್ಲಿ ಹೇಳುವ ಹಾಗೆ ರಾಜಕುಮಾರ್ ಬಹುನೆಲೆಗಳಲ್ಲಿ ಕನ್ನಡ ಸಂಸ್ಕೃತಿಯ ಶೈಕ್ಷಣಿಕ ನೆಲೆಯ ಪರಿಶೀಲನೆಗೆ ಅರ್ಹವಾದ ವಸ್ತುವೇ ಆಗಿದ್ದರೆ, ಎಚ್ಚೆಸ್ಸಾರ್ ತಲೆಮಾರಿನ ಸಂಸ್ಕೃತಿ ಚಿಂತಕರಾರೂ, ಅಥವಾ ಸ್ವತಃ ಎಚ್ಚೆಸ್ಸಾರ್ ಅವರೇ ಗಮನಾರ್ಹವಾದುದನ್ನು ಏಕೆ ಬರೆಯಲಾಗಿಲ್ಲ ಎಂದು ಕೇಳಬೇಕಾಗುತ್ತದೆ. ಇನ್ನು ದುಂಡು ದುಂಡು ಮಾತುಗಳಿಗೆ ಅನಂತಮೂರ್ತಿಯವರನ್ನು ಕುರಿತ ಲೇಖನ ಉದಾಹರಣೆಯಾಗಿದೆ.

ಈ ಸಂಗ್ರಹದಲ್ಲಿ ಕನ್ನಡಕ್ಕೆ ಸಂಬಂಧಪಟ್ಟ ಲೇಖನಗಳಲ್ಲಿ ಕರ್ನಾಟಕವೆಂದರೆ, ಕನ್ನಡವೆಂದರೆ ಕನ್ನಡ ಮಾತ್ರವಲ್ಲ; ತುಳು, ಕೊಂಕಣಿ, ಕೊಡವ, ಉರ್ದು, ಬ್ಯಾರಿ ಮುಂತಾದ ಅದರ ಸಹಜೀವಿ ಭಾಷೆಗಳು ಇವೆ ಎಂದು ಪದೇ ಪದೇ ಎಚ್ಚರಿಸುವುದೇಕೋ ತಿಳಿಯದು.. ಕನ್ನಡ ಮಾಧ್ಯಮದ ಆಂದೋಲನ ಆರಂಭವಾದಾಗ ಅದನ್ನು ವಿರೋಧಿಸಿದವರು ಕೃತಕವಾಗಿ ಹುಟ್ಟು ಹಾಕಿದ ಈ ಹುಯ್ಲು ಕನ್ನಡ ಮಾಧ್ಯಮದ ಕಟ್ಟಾ ಬೆಂಬಲಿಗರಾದ ಎಚ್ಚೆಸ್ಸಾರ್ ಅವರ ಹೆಗಲೇರಿರುವುದು ಬಹುತ್ವವೆಂಬುದು ಅವರ ಒಂದು ವ್ಯಸನವೇ ಆಗಿರುವಂತೆ ತೋರುವ ಪ್ರಗತಿಪರತೆಯ ಇತ್ತೀಚಿನ ಹೆಗ್ಗುರುತಾಗಿರುವುದರಿಂದ ಇರಬಹುದು. ಅಂದಹಾಗೆ ಕನ್ನಡ ಪ್ರಜ್ಞೆ ಅಥವಾ ಕ್ರಿಯಾಶೀಲತೆ, ಎಂದು ತನ್ನ ಸಹಜೀವಿ ಭಾಷೆಗಳ ಹಿತದ ವಿರುದ್ಧ ವರ್ತಿಸಿದೆ? ಎಚ್ಚೆಸ್ಸಾರ್ ಹೇಳಬೇಕು.

ಇನ್ನು ಈ ಸಂಗ್ರಹದಲ್ಲಿರುವ ಎರಡು ದೀರ್ಘ ಸಂದರ್ಶನಗಳ ಬಗ್ಗೆ ಎರಡು ಮಾತು. ಗಿರೀಶ್ ಕಾಸರವಳ್ಳಿ ಅವರೊಡನೆ ಸಿನಿಮಾ ಮತ್ತು ಸಾಹಿತ್ಯ ಸಂಸ್ಕೃತಿಗಳ ಸಂಬಂಧವನ್ನು ಕುರಿತಂತೆ, ಕಥೆ ಆಧರಿಸಿ ಸಿನಿಮಾ ಮಾಡುವ ಹಾಗೆ ಸಿನಿಮಾ ನೋಡಿ ಕಥೆ ಬರೆಯುವ ಪ್ರಯತ್ನವೇಕೆ ನಡೆದಿಲ್ಲ ಎಂಬ ಶುದ್ಧ ಬೌದ್ಧಿಕ ಕಸರತ್ತಿನ ಪ್ರಶ್ನೆಯೊಂದಿಗೆ ಆರಂಭವಾಗುವ ಮಾತುಕತೆ-ಅಲ್ಲಲ್ಲಿ ಆನುಷಂಗಿಕವಾಗಿ ಎರಡೂ ಮಾಧ್ಯಮಗಳ ಬಗ್ಗೆ ಕುತೂಹಲಕರ ಮಾಹಿತಿಯನ್ನು ನೀಡುತ್ತಲೇ-ಸಹಜವಾಗಿಯೇ ಒಂದು ಬೌದ್ಧಿಕ ಕಸರತ್ತಿನಂತೆ ಬೆಳೆದು ಮುಗಿಯುತ್ತದೆ. ಇನ್ನು ಸಾಹಿತಿ ಕುಸುಮಾಕರ ದೇವರಗಣ್ಣೂರರೊಡನೆಯ ಸಂದರ್ಶನದಲ್ಲಿ ದೇವರಗಣ್ಣೂರ ಅವರು ತಮ್ಮ ಬರವಣಿಗೆ ಕುರಿತ ಅತಿ ಬೌದ್ಧಿಕ ವಿವರಣೆಗಳನ್ನು ನೀಡುತ್ತಾ, ತಾವು ಜಾಗೃತ ಪ್ರಜ್ಞೆಯ ಮಾಲಿನ್ಯಗಳಿಲ್ಲದೆ ಕೇವಲ ಸುಪ್ತಪ್ರಜ್ಞೆಯ 'ಅನುಭವ'ಗಳ ಆಧಾರದ ಮೇಲೆ ಬರೆಯುವುದಾಗಿ ಹೇಳಿದಾಗ ಬರೆಯುವುದೆಂಬುದೇ ಒಂದು ಜಾಗೃತ ಕ್ರಿಯೆಯಲ್ಲವೆ ಎಂದು ಅವರನ್ನು ಎಚ್ಚೆಸ್ಸಾರ್ ಏಕೆ ಕೇಳಲಿಲ್ಲವೋ, ಆಶ್ಚರ್ಯ!

ಹಾಗೆ ನೋಡಿದರೆ ನನಗೆ ಈ ಇಡೀ ಸಂಗ್ರಹದಲ್ಲಿ ನಿಜವಾಗಿ ನಿಜ ಹುಡುಕುವ ನಿಜವಾದ ತವಕ ಕಂಡದ್ದು ನಿಜ ಅನುಭವದ ಪ್ರಸಂಗಗಳನ್ನಾಧರಿಸಿ ಬರೆದ 'ನೇಪಾಳದಲ್ಲಿ ನೋವು ನಲವು', 'ಉನ್ನತ ಶಿಕ್ಷಣದ ಸವಾಲುಗಳು' ಮತ್ತು ಶಾಸ್ತ್ರೀಯ ಕನ್ನಡ ಕುರಿತ ಬರಹಗಳಲ್ಲಿ. ಜೊತೆಗೆ ವಿ.ಸೀ. ಸಾಹಿತ್ಯ ಸಂಪುಟವೊಂದನ್ನು ಕುರಿತ ಒಂದು ಸಮೀಕ್ಷೆ. ಮಿಕ್ಕಂತೆ ಲೇಖಕರು ತಮಗೆ ಈಗಾಗಲೇ ಗೊತ್ತಿರುವುದಾಗಿ ತಿಳಿದಿರುವ ನಿಜದ ಬೆಳಕಿನಲ್ಲಿ 'ನಿಜವು ತೋರದಲ್ಲ' ಎಂದು ಅಮಾಯಕವಾಗಿ ಅಲೆದಾಡಿದಂತಿದೆ.

**-ಡಿ.ಎಸ್. ನಾಗಭೂಷಣ**

## ಚಿಂತನೆಗೆ ಹಚ್ಚುವ ಸಮಾಜವಾದಿ ವ್ಯಕ್ತಿಚಿತ್ರಗಳು

**ಪು: ರಸಿಕ ರುದ್ರತಪಸ್ವಿ ಲೋಹಿಯಾ ಸಂ: ಡಿ.ಎಸ್. ನಾಗಭೂಷಣ ಪ್ರ: ಲೋಹಿಯಾ ಪ್ರಕಾಶನ**, ಬಳ್ಳಾರಿ. ದೂ. (೯೯೦೦೭೫೦೫೪೯) ಪು: ೧೨೦ ಬೆ:ರೂ. ೫೧/-




ಧಾರ್ಮಿಕ ಕರ್ಮಠತನ, ದ್ವೇಷ-ಕ್ಷುದ್ರತನ ಹಾಗೂ ಆರ್ಥಿಕ ಹಪಾಹಪಿತನಗಳು ವಿಜೃಂಭಿಸುತ್ತಿರುವ ಈ ನೈತಿಕ ಬಿಕ್ಕಟ್ಟಿನ ಕಾಲಘಟ್ಟದಲ್ಲಿ ಸಮಾಜವಾದಿ ತಾತ್ವಿಕತೆಯನ್ನು ಮೈಗೂಡಿಸಿಕೊಂಡು ಬದುಕಿದ ಕೆಲ ಸಮಾಜವಾದಿ ಚಿಂತಕರುಗಳ ವ್ಯಕ್ತಿಚಿತ್ರದ ಕುರಿತಾದ ಪುಸ್ತಕ 'ಸಮಾಜವಾದದ ಸಾಲುದೀಪಗಳು' ಮತ್ತು ಲೋಹಿಯಾ ಅವರ ವ್ಯಕ್ತಿತ್ವವನ್ನು ಕುರಿತಾದ ಪುಸ್ತಕ 'ರಸಿಕ ರುದ್ರತಪಸ್ವಿ ಲೋಹಿಯಾ'. ಇವೆರಡೂ ಪುಸ್ತಕಗಳು ಸಮಾಜವಾದಿ ತಾತ್ವಿಕತೆಯ ಬಹುಮಜಲುಗಳನ್ನು ಪರಿಣಾಮಕಾರಿಯಾಗಿ ದಾಖಲಿಸುತ್ತವೆ. ಹಾಗೆಯೇ ಸಮಾಜವಾದಿ ಚಳುವಳಿ ಎಂಬುದು ಹೆಚ್ಚು ಕಡಿಮೆ ಸಂಪೂರ್ಣ ಮಾಯವಾಗಿರುವ ಈ ವರ್ತಮಾನ ಕಾಲಘಟ್ಟದಲ್ಲಿ ನಿಂತು ಚಳುವಳಿಯ ಉತ್ತುಂಗದ ಕಾಲವನ್ನು ಸಮಾಧಾನವಾಗಿ ವೀಕ್ಷಿಸಲು ಮತ್ತು ಪರಾಮರ್ಶಿಸಲು ಕೂಡ ಈ ಪ್ರಕಟಣೆಗಳು ಅವಕಾಶ ಮಾಡಿಕೊಟ್ಟಿವೆ. ಪ್ರಧಾನಧಾರೆ ಚರಿತ್ರೆಯು ಮರೆತಿರುವ ಅನೇಕ ಅಂಶಗಳನ್ನು ಈ ಪುಸ್ತಕಗಳು ಮುನ್ನೆಲೆಗೆ ತರುತ್ತವೆ ಕೂಡ. ಆದ್ದರಿಂದ ಚರಿತ್ರೆಯ ಮೌನವನ್ನು ಮುರಿಯುವ ಒಂದು ಚಾರಿತ್ರಿಕ ಗುಣವನ್ನು ಕೂಡ ಇವೆರಡು ಪುಸ್ತಕಗಳಲ್ಲಿ ನಾವು ಗಮನಿಸಬಹುದು..

'ರಸಿಕ ರುದ್ರ ತಪಸ್ವಿ ಲೋಹಿಯಾ' ಪುಸ್ತಕವು ಲೋಹಿಯಾ ಅವರ ವರ್ಣಮಯ ವ್ಯಕ್ತಿತ್ವವನ್ನು ಮತ್ತು ಬಹುಶೃತ ಚಿಂತನೆಯ ಹಲವು ಮಜಲುಗಳನ್ನು ಅವರೊಂದಿಗೆ ಒಡನಾಡಿದ ಹಲವು ಪು.ಲ.ದೇಶಪಾಂಡೆ, ಧರ್ಮವೀರಭಾರತಿ, ರಜನಿಭಕ್ಷಿ, ಯೋಗೇಂದ್ರ ಯಾದವ್, ನ್ಯಾ.ಸುದರ್ಶನ ರೆಡ್ಡಿ ತರಹದ ಚಿಂತಕರುಗಳ ಕಣ್ಣಿನಿಂದ ಕಟ್ಟಿಕೊಡುತ್ತದೆ. ಲೋಹಿಯಾ ಅವರ ಜೀವನದ ಉತ್ಕಟತೆ, ಶ್ರದ್ಧೆ, ಮೂರ್ತಿಭಂಜಕತನದ ಗುಣ, ಅನ್ಯಾಯದ ವಿರುದ್ಧ ಸಿಡಿದೇಳುವ ಗುಣ, ಸ್ವಾತಂತ್ರ್ಯಾನಂತರದ ಭ್ರಮನಿರಸನದ ಕಾಲಘಟ್ಟದಲ್ಲಿ ಅವರ ರಾಜಕೀಯ ನಿಲುವುಗಳು, ಅವರ ಸಾಹಿತ್ಯಿಕ ಸಂವೇದನೆ ಹೀಗೆ ನಾನಾ ಬಗೆಯ ಕಾಣ್ಕೆಗಳನ್ನು ಈ ಪುಸ್ತಕದಲ್ಲಿ ನಾವು ಕಾಣಬಹುದು. ಇಲ್ಲಿಯವರೆಗೂ ದಾಖಲಾಗದ ಕೆಲವೊಂದು ವಿವರಗಳು ತೀರಾ ಕುತೂಹಲ ಹುಟ್ಟಿಸುತ್ತವೆ. ಉದಾಹರಣೆಗೆ:- ಲೋಹಿಯಾ ಅವರು ನೈನಿ ಎಂಬ ಸ್ಥಳದ ಜೈಲಿನಲ್ಲಿದ್ದಾಗ ಅವರ ಪಾಂಡಿತ್ಯ, ಸಾಹಿತ್ಯಿಕ ವಿಮರ್ಶೆಗೆ ಮನಸೋತ ಜೈಲರ್ ಒಬ್ಬರು ಅವರ ಶಿಷ್ಯರಾಗಿದ್ದರಂತೆ.

ಲೋಹಿಯಾ ಅವರ ವ್ಯಕ್ತಿತ್ವ ಹೇಗಿತ್ತೆಂದರೆ ಅವರು ಶ್ರಮಜೀವಿಗಳು, ರಿಕ್ಷಾವಾಲರು, ಮಾವುತರು ಹೀಗೆ ಸಮಾಜದ ಅಂಚಿನ ಜನರೊಂದಿಗೆ ಅವರು ಪ್ರೀತಿ-ಕರುಣೆಯಿಂದ ವ್ಯವಹರಿಸಬಲ್ಲವರಾಗಿದ್ದರು. ಅವರ ಜೀವನ ಕ್ರಮಗಳನ್ನು ಅರಿಯಲು ಅವರೊಂದಿಗೆ ಬೆರೆತು ಜೀವಿಸಬಲ್ಲರಾಗಿದ್ದರು. ಹಾಗೆಯೇ ಧಾರ್ಮಿಕ ಕರ್ಮಠತನವನ್ನು ವಿರೋಧಿಸುತ್ತಾ, ಮುಸ್ಲಿಂ ಮಹಿಳೆಯರನ್ನು ಬುರ್ಖಾದೊಳಗೆ ಬಂಧಿಸುವುದನ್ನು ಟೀಕಿಸಿದ್ದರು.

ಅಂದರೆ ಈ ಪುಸ್ತಕವು ಲೋಹಿಯಾರ ವ್ಯಕ್ತಿತ್ವ ಮತ್ತು ಸೈದ್ಧಾಂತಿಕ ನೆಲೆಗಳನ್ನು ವೈಯಕ್ತಿಕ ನೆಲೆಯ ಘಟನೆಗಳು ಮತ್ತು ಅವರ ಸ್ವಭಾವದ ಪರಿಚಯದ ಮೂಲಕ ನಿರೂಪಿಸುತ್ತದೆ. ಇಲ್ಲಿ ಮುಖ್ಯ-ಅಮುಖ್ಯ, ದೊಡ್ಡ-ಸಣ್ಣ, ಏಕಾಂತ-ಲೋಕಾಂತ, ವೈಯಕ್ತಿಕ-ಸಾರ್ವಜನಿಕ ಮುಂತಾದ ದ್ವಿದಳ ವಿಭಜನೆಗಳನ್ನು ನಿರಾಕರಿಸಲಾಗಿದೆ. ಲೋಹಿಯಾ ಅವರ ಗಾಂಧಿ-ಪಟೇಲ್-ನೆಹರೂ ಮುಂತಾದ 'ದೊಡ್ಡ' ನಾಯಕರುಗಳೊಂದಿಗಿನ ಒಡನಾಟ-ಭಿನ್ನಾಭಿಪ್ರಾಯಗಳನ್ನು ತೋರಿಸುವಷ್ಟೇ ಅವರು ಒಬ್ಬ ಹೋಟೆಲ್‌ನ ಸಪ್ಲೆಯರ್, ರಿಕ್ಷಾ ಚಾಲಕ ಅಥವಾ ರೈಲಿನಲ್ಲಿ ಕಾಣುವ ಒಬ್ಬ ಜನಸಾಮಾನ್ಯನ ಜೊತೆಗಿನ ಆತ್ಮೀಯ ಸಂಪರ್ಕವನ್ನೂ ಸಹ ತೋರಿಸಿ ಕೊಡುತ್ತದೆ. ಆದ್ದರಿಂದ ಇದಕ್ಕೊಂದು ವ್ಯಾಪಕತೆ ಮತ್ತು ವಿಸ್ತಾರ ಸಹಜವಾಗಿಯೇ ದಕ್ಕಿದೆ.

ಮೊದಲೇ ಹೇಳಿದಂತೆ 'ಆ ಕಾಲ'ವನ್ನು ಈ ಕಾಲದ ಮೂಲಕ ನೋಡಿದಾಗ ಹಲವು ವಿಶಿಷ್ಟತೆಗಳು ಗೋಚರಿಸುತ್ತವೆ. ಉದಾಹರಣೆಗಾಗಿ ಲೋಹಿಯಾ ಅವರನ್ನು ಬ್ರಿಟಿಷ್ ಆಡಳಿತವು ಅವರ ಪ್ರಭುತ್ವದ ಜೊತೆಗಿನ ಭಿನ್ನಾಭಿಪ್ರಾಯ ಮತ್ತು ಪ್ರಖರ ಭಾಷಣಗಳ ಕಾರಣದಿಂದ 'ದೇಶದ್ರೋಹ'ದ ಕಾರಣ ನೀಡಿ ಬಂಧಿಸಲಾಗಿತ್ತು. ವಸಾಹತುಶಾಹಿ ಕಾಲದಲ್ಲಿ ಗಾಂಧಿ-ಲೋಹಿಯಾ ತರಹದ ಸ್ವಾತಂತ್ರ ಹೋರಾಟಗಾರರನ್ನು ಹಣಿಯಲು 'ದೇಶದ್ರೋಹ' ಎಂಬ ಕರಾಳ ಕಾನೂನನ್ನು ಬಳಸಲಾಗುತ್ತಿತ್ತು. ದುರಂತವೆಂದರೆ ಸ್ವಾತಂತ್ರ್ಯೋತ್ತರ ಭಾರತದ ಸಮಕಾಲೀನ ಕಾಲಘಟ್ಟದಲ್ಲಿಯು ಸಹ ಪ್ರಗತಿಪರ ಹೋರಾಟಗಾರರನ್ನು, ಶೈಕ್ಷಣಿಕ ವಲಯದ ಬುದ್ಧಿಜೀವಿಗಳನ್ನು ಇವೇ 'ದೇಶದ್ರೋಹ' ಎಂಬ ಕಾನೂನಿನ ಅಡಿ ಬಂಧಿಸಲಾಗಿದೆ. ಈ ಪುಸ್ತಕವು ಗತ-ವರ್ತಮಾನಗಳ ರಾಜಕಾರಣದ ಕ್ರೌರ್ಯ ಮತ್ತು ಅನೈತಿಕ ನೆಲೆಗಳನ್ನು ಸಹ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಒಟ್ಟಾರೆಯಾಗಿ ನೋಡುವುದಾದರೆ ಪ್ರಸ್ತುತ ಪುಸ್ತಕವು ರಾಮಮನೋಹರ ಲೋಹಿಯಾ ಅವರ ಬದುಕು-ಹೋರಾಟ-ತಾತ್ವಿಕತೆಗಳನ್ನು ಭಿನ್ನ ಆಯಾಮಗಳಲ್ಲಿ ನಿರೂಪಿಸುತ್ತದೆ. ಅವರ ವ್ಯಕ್ತಿತ್ವಕ್ಕಿರುವ ಬಹುಶ್ರುತತೆಯನ್ನು ಮತ್ತು ಆ ಕಾಲಘಟ್ಟದ ಸಂಕೀರ್ಣತೆಯನ್ನು ಬಹಳ ಸರಳ ಮಾತುಗಳಲ್ಲೇ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಇಲ್ಲಿ ವ್ಯಕ್ತಿಯ ಅನಾವರಣ ಅಂದರೆ ಅದು ಕೇವಲ ವೈಯಕ್ತಿಕ ನೆಲೆಯ ವ್ಯಕ್ತಿತ್ವವಾಗಿರದೆ, ಆ ಕಾಲಘಟ್ಟದ ಜಟಿಲತೆಯನ್ನು ಪರಿಚಯಿಸುವ ಮತ್ತು ದಾಖಲಿಸುವ ವೈಧಾನಿಕತೆ ಎಂದು ತಿಳಿಯಬಹುದು. ಸರಕು ಸಂಸ್ಕೃತಿಯ ತೀರದ ದಾಹ ಮತ್ತು ಚಳುವಳಿಗಳ ಗೈರುಹಾಜರಿಯ ಈ ದಿನಗಳಲ್ಲಿ ಪ್ರಸ್ತುತ ಪುಸ್ತಕವು ಒಂದು ಪರ್ಯಾಯ ರಾಜಕಾರಣದ ಸಾಧ್ಯತೆಯನ್ನು ಸೂಚಿಸುವ ಎಲ್ಲಾ ಗುಣ ಹೊಂದಿದೆ.

**ಪು: ಸಮಾಜವಾದದ ಸಾಲುದೀಪಗಳು ಸಂ: ಡಿ.ಎಸ್.ನಾಗಭೂಷಣ ಪ್ರ: ಲೋಹಿಯಾ ಪ್ರಕಾಶನ**, ಬಳ್ಳಾರಿ. (೯೯೦೦೭೫೦೫೪೯) ಪು:೧೧೬ ಬೆ:ರೂ. ೫೧/-




ಇನ್ನು 'ಸಮಾಜವಾದದ ಸಾಲುದೀಪಗಳು' ಪುಸ್ತಕವೂ ಸಹ ಸಮಾಜವಾದಿ ಚಿಂತನೆಯ ಹಲವು ಮಜಲುಗಳನ್ನು ಹಲವು ವ್ಯಕ್ತಿಗಳ ಜೀವನಗಾಥೆಯ ಮೂಲಕ ಪರಿಚಯಿಸುತ್ತದೆ. ಕೆಲ ವರ್ಷಗಳ ಮೊದಲು 'ನಮ್ಮ ಸಮಾಜವಾದಿಗಳು' ಪುಸ್ತಕದಲ್ಲಿ ಕರ್ನಾಟಕದ ಸಮಾಜವಾದಿಗಳ ಪರಿಚಯವಿದ್ದರೆ, ಪ್ರಸ್ತುತ ಪುಸ್ತಕದಲ್ಲಿ ಅಖಿಲ ಭಾರತ ನೆಲೆಯ ಸಮಾಜವಾದಿಗಳ ಪರಿಚಯ-ವಿಶ್ಲೇಷಣೆ ಇದೆ. ನಾನಾ ಸಾಹೇಬ ಗೋರೆ ತರಹದ ನಿಷ್ಠುರವಾದಿಗಳಿಂದ ಹಿಡಿದು ಪ್ರಖರ ಸಿದ್ಧಾಂತಿಯಾಗಿದ್ದ ಅಶೋಕ ಮೆಹ್ತಾ ರೀತಿಯ ಸಮಾಜವಾದಿ ವ್ಯಕ್ತಿಗಳ ವ್ಯಕ್ತಿತ್ವದ ತುಣುಕುಗಳು ಇಲ್ಲಿ ನಿರೂಪಿತವಾಗಿವೆ.

ಈ ಸಮಾಜವಾದೀ ಪ್ರತಿಪಾದಕರು ಸಂಸತ್ತಿನಲ್ಲಿ ಮಾಡಿದ ಭಾಷಣಗಳಿಂದ ಮೊದಲಾಗಿ ಅವರ ಕಾರ್ಮಿಕ ಹೋರಾಟ, ವೈಯಕ್ತಿಕ ಬದುಕಿನಲ್ಲಿಯ ನೈತಿಕತೆ, ಸಾರ್ವಜನಿಕ ಬದುಕಿನ ಪಾರದರ್ಶಕತೆ, ಸಮಾಜದ ವೈರುಧ್ಯಗಳನ್ನು ಖಂಡತುಂಡವಾಗಿ ಪ್ರಶ್ನಿಸುವ ಗುಣ ಮೊದಲಾದವುಗಳೆಲ್ಲವೂ ಈಗಿನ ಕಾಲದ ಓದುಗರಿಗೆ ಆಶ್ಚರ್ಯವನ್ನು ರೋಮಾಂಚನವನ್ನು ಉಂಟುಮಾಡಬಲ್ಲವು. ಈ ಕಾಲದ ರಾಜಕಾರಣದ ಅಧಃಪತನದ ಬಗ್ಗೆ ಗಾಢವಾದ ವಿಷಾದವನ್ನು ಸಹ ಹುಟ್ಟಿಸುತ್ತವೆ. ಆದರೆ ಇಂತಹ ಸಮೃದ್ಧವಾಗಿದ್ದ ಸಮಾಜವಾದೀ ಚಳುವಳಿ ಏಕೆ ರಾಷ್ಟ್ರವ್ಯಾಪಿಯಾಗಿ ಬೇರೂರಲು ಸಾಧ್ಯವಾಗಿಲ್ಲ ಎಂಬ ಪ್ರಮುಖ ಪ್ರಶ್ನೆಯನ್ನು ಹುಟ್ಟಿಸುತ್ತವೆ. ಇದರ ಸಂಪಾದಕರು ಲೋಹಿಯಾ ನಂತರದ ರಾಜಕಾರಣ ವೈಯಕ್ತಿಕ ಭಿನ್ನಾಭಿಪ್ರಾಯ ಮತ್ತು ವ್ಯಕ್ತಿತ್ವದಲ್ಲಿನ ಕೊರತೆಯಿಂದ ಚಳುವಳಿಯು ನೆಲಕಚ್ಚಿತು ಎಂಬ ಕಾರಣ ನೀಡಿದರೂ, ಇದಕ್ಕೆ ಇನ್ನು ಸಾಮಾಜಿಕ-ಆರ್ಥಿಕ ವಿಶಾಲ ನೆಲೆಯ ವಿಶ್ಲೇಷಣೆ ಬೇಕು ಎನ್ನಿಸುತ್ತದೆ. ಆದರೆ ಈ ಉಜ್ವಲ ವ್ಯಕ್ತಿತ್ವಗಳ ಪರಿಚಯ ನಮ್ಮನ್ನು ಮತ್ತೊಂದು ಲೋಕಕ್ಕೆ ಕರೆದೊಯ್ಯಬಲ್ಲ ಶಕ್ತಿ ಹೊಂದಿದೆ. ಕಿಶನ್ ಪಟ್ನಾಯಕ ರೀತಿಯ ರೈತ-ಕಾರ್ಮಿಕ ಹೋರಾಟಗಾರರ ನೈತಿಕ ಜೀವನವೇ ರೋಮಾಂಚನವನ್ನು ಹುಟ್ಟಿಸಿದರೆ, ಜಾರ್ಜ್ ಫರ್ನಾಂಡಿಸ್ ರೀತಿಯ ಅದ್ಭುತ ವ್ಯಕ್ತಿ ತನ್ನ ಕೊನೆಯ ಕಾಲದಲ್ಲಿ ಅಧಃಪತನ ಹೊಂದಿದ ರೀತಿ ವಿಷಾದವನ್ನು ಹುಟ್ಟಿಸುತ್ತದೆ.

ಪುಸ್ತಕದ ಕೊನೆಯಲ್ಲಿ ನೀಡಿರುವ ಅನುಬಂಧಗಳೂ ಕೂಡ ಒಂದು ಕಾಲಘಟ್ಟದ ವಿಶ್ಲೇಷಣೆಯನ್ನು ಸಮರ್ಥವಾಗಿ ಮಾಡುತ್ತವೆ. ಜಯಪ್ರಕಾಶ ನಾರಾಯಣರ ಆಧ್ಯಾತ್ಮಿಕತೆಯಿಂದ ಹಿಡಿದು, ಕಿಶನ್ ಪಟ್ನಾಯಕರಿಗಿದ್ದ ಕರ್ನಾಟಕದೊಂದಿಗಿನ ಸಂಬಂಧವನ್ನು ಬಹಳ ಅರ್ಥಪೂರ್ಣವಾಗಿ ಸರಳ-ಸಹಜ ಭಾಷೆಯಲ್ಲಿ ಕಟ್ಟಿಕೊಡುತ್ತವೆ. ಜಯಪ್ರಕಾಶ ನಾರಾಯಣ ಅವರ 'ಒಳ್ಳೆಯತನಕ್ಕೆ ಸ್ಫೂರ್ತಿ ಎಲ್ಲಿಂದ?' ಲೇಖನವು ಮನುಷ್ಯನ ಮೂಲಭೂತ ಚಾರಿತ್ರ್ಯದ ಪ್ರಶ್ನೆ, ಒಳಿತು ಕೆಡುಕಿನ ಪ್ರಶ್ನೆ ಮತ್ತು ಒಂದು ಸ್ವಸ್ಥ ಸಮಾಜದ ರಚನೆಯ ಕುರಿತಾಗಿ ಮೂಲಭೂತವಾಗಿ ಚರ್ಚಿಸುತ್ತದೆ. ಅಂದರೆ ಮನುಷ್ಯನೇಕೆ ಒಳ್ಳೆಯವನಾಗಿರಬೇಕು ಎಂಬ ಜಿಜ್ಞಾಸು ಸ್ವರೂಪಿ ಪ್ರಶ್ನೆಗೆ ಸಾಮಾಜಿಕ -ಸಾಂಸ್ಕೃತಿಕ ನೆಲೆಯಲ್ಲಿ ಉತ್ತರವನ್ನು ಕಂಡುಕೊಳ್ಳುತ್ತದೆ. ಹೀಗೆ ಈ ಅನುಬಂಧಗಳು ಪುಸ್ತಕಕ್ಕೆ ತಾತ್ವಿಕ ಜಿಜ್ಞಾಸೆಯ ಆಯಾಮವನ್ನು ತಂದುಕೊಟ್ಟಿವೆ. ಸಂಪಾದಕರು ಸಮಾಜವಾದಿಗಳ ಬಗ್ಗೆ ಬರೆಯಲು ಹೆಚ್ಚು ಲೇಖಕರು ಸಿಗಲಿಲ್ಲ ಎಂದು ದಾಖಲಿಸಿರುವುದು ವರ್ತಮಾನ ಕಾಲದಲ್ಲಿ ಸಮಾಜವಾದಿ ಸಿದ್ಧಾಂತ ತನ್ನ ಬೇರನ್ನು ಕಳೆದುಕೊಂಡಿರುವುದನ್ನು ಸೂಚಿಸುತ್ತದೆ.

**-ಟಿ. ಅವಿನಾಶ**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಬುದ್ಧ ಜಯಂತಿಯ ಶುಭಾಶಯಗಳು



–ಟಿ.ಪಿ. ಬಾಲಸುಬ್ರಮಣ್ಯ
ಮತ್ತು ಕುಟುಂಬ
ಸಾಗರ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಬುದ್ಧ ಜಯಂತಿಯ ಶುಭಾಶಯಗಳು



–ಎಸ್.ಬಿ. ರಮೇಶ
ಮತ್ತು ಕುಟುಂಬ
ಶಿವಮೊಗ್ಗ

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ಬುದ್ಧ ಜಯಂತಿಯ ಶುಭಾಶಯಗಳು**



**ಎಂ. ಚಂದ್ರಶೇಖರ ಪ್ರತಿಷ್ಠಾನ**

**# ೭೨, 'ಸರ್ವೋದಯ', ಪ್ರೊ.ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,**
**ಬಸವನಗುಡಿ, ಬೆಂಗಳೂರು-೫೬೦ ೦೦೪**

ತಿಂಗಳ ಕೊನೆಯ ಸಾಲುಗಳು



ನಾನು ಬಸ್ ಅಥವಾ ರೈಲುಗಾಡಿ ಹತ್ತಿದಾಗಲೆಲ್ಲ ಅದು ನನಗೆ ಹಿಂಸೆ ಅನಿಸುತ್ತದೆ. ಅವು ಅಸಹಜವಾದ, ಕೃತಕ ವೇಗದ ಸಾಧನಗಳು.

-ಮಹಾತ್ಮ ಗಾಂಧಿ

**ಶುಭಾಶಯಗಳೊಂದಿಗೆ,**

ಎಚ್.ಎಂ. ಶಿವಾನಂದ

ಮತ್ತು ಕುಟುಬ

ಹಂಸಗಾರು (ಸಾಗರ)

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)